ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 43 | ಅಕ್ಟೋಬರ್ 19–25, 2020 | ಪುಟ 16 | ರೂ. 10


https://janashakthi.wordpress.com e-mail : js_weekly@yahoo.com

100

CENTENARY OF FORMATION OF COMMUNIST PARTY OF INDIA

1920 OCT.17 - 2020 OCT.17

CENTENARY OF COMMUNIST PARTY OF INDIA



ಭಾರತ ಕಮ್ಯೂನಿಸ್ಟ್ ಚಳುವಳಿಗೆ 100 ವರ್ಷ



ಕ್ವಾಡ್ ಎಂಬ ಏಷ್ಯಾದ ನಾಟೋ



ಆರ್ಥಿಕ ಬೆಳವಣಿಗೆಯೂ, ಬಡತನದ ಏರಿಕೆಯೂ...



ನ್ಯಾಯ ಬೇಡುತಿದೆ ನ್ಯಾಯವ



ಹಾಥ್ರಸ್ ಕಾಂಡ ರಾಜ್ಯಾದ್ಯಂತ ಪ್ರತಿಭಟನೆ

ನ್ಯಾಯಾಲಯವನ್ನು ತಪ್ಪುದಾರಿಗೆಳೆದಿರುವ ದಿಲ್ಲಿ ಪೋಲೀಸ್–ತಕ್ಷಣವೇ ಸರಿಯಾದ ಕ್ರಮಗಳನ್ನು ಕೈಗೊಳ್ಳಲು ಆಗ್ರಹಿಸಿ ಪೊಲಿಸ್ ಕಮಿಶನರ್‌ಗೆ ಬೃಂದಾಕಾರಟ್ ಪತ್ರ

ದಿಲ್ಲಿಯಲ್ಲಿ ಫೆಬ್ರುವರಿ 2020ರಲ್ಲಿ ನಡೆದ ಕೋಮು ಗಲಭೆಯಲ್ಲಿ ಕೊಲ್ಲಲ್ಪಟ್ಟಿರುವವರ ಸಂಖ್ಯೆಯ ಬಗ್ಗೆ ನ್ಯಾಯಾಲಯದಲ್ಲಿ ದಿಲ್ಲಿ ಪೋಲೀಸ್ ಸಲ್ಲಿಸಿರುವ ಲೆಕ್ಕಾಚಾರದಲ್ಲಿ ನಿಖರತೆಯಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ದಿಲ್ಲಿ ಪೋಲೀಸ್ ಕಮಿಶನರ್ ಎಸ್.ಎನ್. ಶ್ರೀವಾಸ್ತವ ಅವರಿಗೆ ಅಕ್ಟೋಬರ್ 15 ರಂದು ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

ದಿಲ್ಲಿ ಪೋಲೀಸರು ವಿವಿಧ ಅಫಿಡವಿಟ್‌ಗಳಲ್ಲಿ ಮತ್ತು ಸಾರ್ವಜನಿಕ ಹೇಳಿಕೆಗಳಲ್ಲಿ ಸತ್ತವರ ಸಂಖ್ಯೆ 53 ಎಂದು ಹೇಳಿಕೊಂಡು ಬಂದಿದ್ದಾರೆ. ಇದರಲ್ಲಿ ಈ ಹಿಂದೆ ಗುರುತಿಸಿರದ, ಆದರೆ ನಂತರ ಗುರುತಿಸಿದವರ ಹೆಸರುಗಳೂ ಇವೆ.ಆದರೆ ಕೊಲ್ಲಲ್ಪಟ್ಟವರಲ್ಲಿ ಒಬ್ಬರಾದ ಸಿಕಂದರ್ ಬಿನ್ ಮುಹಮ್ಮದ್ ಮುಲ್ಕ್ ಅವರ ಹೆಸರು ಇಲ್ಲ. ಇವರನ್ನು 27/2 ರಂದು ಅಪರಿಚಿತ ಎಂದು ನಮೂದಿಸಲಾಗಿತ್ತು, ಆದರೆ 19/3 ರಂದು ಸಿಕಂದರ್ ಎಂದು ದಾಖಲು ಮಾಡಲಾಗಿದೆ.

ಅವರು ಗಂಭೀರ ತಲೆಗಾಯಗಳಿಂದ ಸತ್ತರು ಎಂದು ಮರಣೋತ್ತರ ಪರೀಕ್ಷೆ ಹೇಳುತ್ತದೆ.

ಸಿಕಂದರ್ ತಮ್ಮ ಮಹಮ್ಮದ್ ಇಶ್ಫಾಕ್ ಎಫ್‌ಐಆರ್ ಪ್ರತಿ ಪಡೆಯಲು ಖಜುರಿ ಖಾಸ್ ಪೋಲೀಸ್ ಸ್ಟೇಷನ್ನಿಗೆ ಹಲವು ಬಾರಿ ಅಲೆದಿದ್ದಾರೆ. ಎಫ್‌ಐಆರ್ ಸಲ್ಲಿಸಿಲ್ಲ, ಆದರೆ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸಿ 'ಹೇಗಾದರೂ ಪರಿಹಾರ ಕೊಡಿಸೋಣ' ಪೋಲೀಸ್ ಸಿಬ್ಬಂದಿ ಹೇಳಿರುವುದಾಗಿ ವರದಿಯಾಗಿದೆ.

ಈ ಕುಟುಂಬ ಭೀತಿಯ ವಾತಾವರಣದಲ್ಲಿ ಬದುಕುತ್ತಿದೆ. ಭಜನಪುರದಲ್ಲಿದ್ದ ಇಶ್ಫಾಕನ ಅಂಗಡಿ ಸುಟ್ಟುಹೋಗಿದೆ, ಲೂಟಿಯಾಗಿದೆ. ಘೊಂಡದಲ್ಲಿ ಆಕೆಯ ಸೋದರಿಯ ಮನೆ ಲೂಟಿಯಾಗಿದೆ. ಇಂತಹ ಕುಟುಂಬದ ಬಗ್ಗೆ ಸಹಾನುಭೂತಿಯಿದ ವರ್ತಿಸುವ ಬದಲು, ದಿಲ್ಲಿ ಪೋಲೀಸ್ ಸಿಕಂದರನನ್ನು ಹಿಂಸಾಚಾರಕ್ಕೆ ಬಲಿಯಾದವನೆಂದು ಗುರುತಿಸದೆ ಅವರ ಕಳ್ವಕಾರ್ಪಣ್ಯಗಳನ್ನು ಇನ್ನಷ್ಟು ಹೆಚ್ಚಿಸಿದೆ.

ಈ ಹಿನ್ನೆಲೆಯಲ್ಲಿ ತಕ್ಷಣವೇ ಮಧ್ಯಪ್ರವೇಶಿಸಿ

1. **ಹೈಕೋರ್ಟಿಗೆ ಸಲ್ಲಿಸಿರುವ ಸತ್ತವರ ಪಟ್ಟಿಯ ಸಂಖ್ಯೆಯನ್ನು ಸರಿಪಡಿಸಬೇಕು, ಸಿಕಂದರ್ ಹೆಸರಿನ ಸೇರ್ಪಡೆಯೊಂದಿಗೆ ಅದು 54 ಆಗುತ್ತದೆ;**
2. **ಎಫ್‌ಐಆರ್ ನ ಒಂದು ಪ್ರತಿಯನ್ನು ಸಿಕಂದರನ ಕುಟುಂಬದವರಿಗೆ ಕೊಡಬೇಕು ಮತ್ತು**
3. **ಈ ಅನಿಖರತೆಗೆ, ಹಿಂಸಾಚಾರಕ್ಕೆ ಬಲಿಯಾದ ಕುಟುಂಬಕ್ಕೆ ಕಿರುಕುಳ ಕೊಟ್ಟಿರುವ ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬೃಂದಾ ಕಾರಟ್ ದಿಲ್ಲಿ ಪೋಲೀಸ್ ಕಮಿಶನರ್ ಅವರನ್ನು ಆಗ್ರಹಿಸಿದ್ದಾರೆ.**

ಹಾಥ್ರಸ್ ಪ್ರಕರಣ : ಸಿಬಿಐ ವೆಬ್‌ಸೈಟಿನಿಂದ ಸಿಬಿಐ ಎಫ್‌ಐಆರ್‌ನ್ನು ತೆಗೆದಿರುವುದನ್ನು ಮತ್ತೆ ಸೇರಿಸಬೇಕು; ತನಿಖಾ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ನಂಬಿಕೆಯನ್ನು ಮರುಸ್ಥಾಪಿಸಬೇಕು –ಸಿಬಿಐ ನಿರ್ದೇಶಕರಿಗೆ ಎಐಡಿಡಬ್ಲ್ಯುಎ ಪತ್ರ

ಸಿಬಿಐ ಹಾಥ್ರಸ್ ಪ್ರಕರಣದ ಎಫ್‌ಐಆರ್‌ನ್ನು ತನ್ನ ವೆಬ್‌ಸೈಟಿನಿಂದ ತೆಗೆದಿರುವ ಬಗ್ಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ತೀವ್ರ ಕಳವಳ ವ್ಯಕ್ತಪಡಿಸಿದೆ. ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಸೇರಿದಂತೆ ಈ ಎಫ್‌ಐಆರ್‌ನ್ನು ಮತ್ತೆ ವೆಬ್‌ಸೈಟಿನಲ್ಲಿ ಹಾಕಬೇಕು ಎಂದು ಆಗ್ರಹಿಸಿ ಸಂಘದ ಪರವಾಗಿ ಅಧ್ಯಕ್ಷೆ ಮಾಲಿನಿ ಭಟ್ಟಾಚಾರ್ಯ, ಕಾನೂನು ಸಲಹೆಗಾರರಾದ ಕೀರ್ತಿ ಸಿಂಗ್ ಮತ್ತು ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ ಸಿಬಿಐ ನಿರ್ದೇಶಕ ರಿಷಿಕುಮಾರ್ ಶುಕ್ಲರವರಿಗೆ ಪತ್ರ ಬರೆದಿದ್ದಾರೆ.

ಸಿಬಿಐನ ನೋಯ್ಡ ಬ್ರಾಂಚಿನಲ್ಲಿ ದಾಖಲಾದ ಎಫ್‌ಐಆರ್‌ನ್ನು ಈ ಮೊದಲು ಸಿಬಿಐನ ವೆಬ್‌ಸೈಟಿನಲ್ಲಿ ಹಾಕಲಾಗಿತ್ತು.. ಅದರಲ್ಲಿ ಸೆಕ್ಷನ್ 372, 302 ಇತ್ಯಾದಿಗಳನ್ನು ಸೇರಿಸಲಾಗಿತ್ತು. ಅದನ್ನು ತೆಗೆದ ಮೇಲೆ, ಈಗ ಹಾಥ್ರಸ್ ಪೋಲೀಸ್ ಠಾಣೆಯಲ್ಲಿ ದಾಖಲಾದ ಎಫ್‌ಐಆರ್ ಮೇಲೆ ಸಿಬಿಐ ತನಿಖೆ ನಡೆಸುತದೆ ಎಂದು ವೆಬ್‌ಸೈಟ್ ಹೇಳುತ್ತದೆ. ಇದು ತನಿಖೆ ಆರಂಭಿಸುವ ಮೊದಲೇ ಪ್ರಕರಣವನ್ನು ದುರ್ಬಲಗೊಳಿಸುವ ಪ್ರಯತ್ನ ಎಂದು ಎಂದು ಬಲವಾಗಿ ಸೂಚಿಸುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಹಾಥ್ರಸ್ ಎಫ್‌ಐಆರ್‌ನಲ್ಲಿ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಯ ಆರೋಪಗಳಿರಲಿಲ್ಲ. ಇದು ಆರಂಭದಿಂದಲೇ ಉತ್ತರಪ್ರದೇಶ ಪೊಲಿಸ್ ಹೇಗೆ ತನಿಖೆಯನ್ನು ನಿಷ್ಪ್ರಯೋಜಕಗೊಳಿಸುವ ಪ್ರಯತ್ನ ನಡೆಸಿದೆ ಎಂಬುದಕ್ಕೆ ಎದ್ದು ಕಾಣುವ ಉದಾಹರಣೆಯಾಗಿದೆ. ನಿಜ ಹೇಳಬೇಕೆಂದರೆ ಸೂಕ್ತ ತನಿಖೆ ನಡೆಸದೆಯೇ ಮತ್ತು ಸಪ್ಟಂಬರ್ 22 ರಂದು ಅತ್ಯಾಚಾರಕ್ಕೊಳಗಾದ ಹುಡುಗಿಯ ಸಾಯುವ ವೇಳೆಯ ಹೇಳಿಕೆಯನ್ನೂ ನಿರಾಕರಿಸುತ್ತ ಅತ್ಯಾಚಾರ ನಡೆದಿಲ್ಲ ಎಂದು ಪೋಲೀಸರೇ ಹೇಳಲಾರಂಭಿಸಿದ್ದರು. ಒಂದೋ ನಿರ್ಲಕ್ಷ್ಯದ ಅಥವ ನ್ಯಾಯದ ದಾರಿ ತಪ್ಪಿಸುವ ಉದ್ದೇಶಪೂರ್ವಕ ಪ್ರಯತ್ನದ ಸಂದೇಹ ಇದರಿಂದ ಈ ಮೊದಲೇ ಉಂಟಾಗಿತ್ತು ಎಂಬುದನ್ನು ಈ ಪತ್ರದಲ್ಲಿ ಸಿಬಿಐ ನಿರ್ದೇಶಕರ ಗಮನಕ್ಕೆ ತರಲಾಗಿದೆ. ಸಂತ್ರಸ್ತೆಯ ಮೃತದೇಹದ ದಹನಸಂಸ್ಕಾರವನ್ನು ನಡುರಾತ್ರಿಯಲ್ಲಿಯೇ ಆಕೆಯ ಕುಟುಂಬದ ಸದಸ್ಯರನ್ನು ಹತ್ತಿರ ಬರಗೊಡದೆ ಪೋಲೀಸರೇ ಆತುರಾತುರದಿಂದ ನಡೆಸಿದ್ದು ಕೂಡ ಅವರ ಆಶಯದ ಬಗ್ಗೆ ಸಂದೇಹ ಮೂಡಿಸಿತ್ತು. ಉತ್ತರಪ್ರದೇಶ ಪೋಲೀಸ್ ಮತ್ತು ಆಡಳಿತ ಈ ಪ್ರಕರಣವನ್ನು ಸರಿಯಾಗಿ ನಿಭಾಯಿಸಲಾರರು ಎಂದು ಸಾರ್ವತ್ರಿಕ ಆಕ್ರೋಶದಿಂದಾಗಿಯೇ ಈ ಪ್ರಕರಣದ ತನಿಖೆಯನ್ನು ಬೇರೊಂದು ಸಂಸ್ಥೆಗೆ ವಹಿಸಲಾಗಿದೆ ಎಂಬುದನ್ನೂ ಈ ಪತ್ರದಲ್ಲಿ ನಿರ್ದೇಶಕರ ಗಮನಕ್ಕೆ ತರಲಾಗಿದೆ.

"ಒಂದು ರಾಷ್ಟ್ರೀಯ ಮಟ್ಟದ ತನಿಖಾ ಸಂಸ್ಥೆಯಾಗಿ ಸಿಬಿಐ, ತನ್ನ ಕೈಯಲ್ಲಿ ಈ ಪ್ರಕರಣ ಇರುವುದರಿಂದಾಗಿ, ಅದರ ತನಿಖೆಯ ಪ್ರಕ್ರಿಯೆಯ ಬಗ್ಗೆ ಸಾರ್ವಜನಿಕ ನಂಬಿಕೆಯನ್ನು ಮರುಸ್ಥಾಪಿಸುವುದು ಸಿಬಿಐನ ಕರ್ತವ್ಯ ಎಂದು ನಾವು ಬಲವಾಗಿ ಭಾವಿಸುತ್ತೇವೆ. ಕೇವಲ ಉತ್ತರ ಪ್ರದೇಶ ಪೋಲಿಸಿನ ತನಿಖಾ ದಾರಿಯನ್ನು ಅನುಸರಿಸಿದರೆ ಸಿಬಿಐಗೆ ಖಂಡಿತಾ ಈ ಕರ್ತವ್ಯವನ್ನು ನೆರವೇರಿಸಲು ಸಾಧ್ಯವಿಲ್ಲ" ಎಂದಿರುವ ಎಐಡಿಡಬ್ಲ್ಯುಎ ಪತ್ರ ಸಿಬಿಐನ ನೋಯ್ಡ ಬ್ರಾಂಚ್ ದಾಖಲಿಸಿದ ಎಫ್‌ಐಆರ್‌ನ್ನು ತಕ್ಷಣವೇ ಸಿಬಿಐ ವೆಬ್‌ಸೈಟಿನಲ್ಲಿ ಮತ್ತೆ ಹಾಕಬೇಕು, ಮತ್ತು ಸಿಬಿಐ ಆರಂಭಿಸಿರುವ ತನಿಖೆ ಸತ್ಯ ಮತ್ತು ನ್ಯಾಯಕ್ಕಾಗಿ ತನ್ನದೇ ಸ್ವತಂತ್ರ ದಾರಿಯಲ್ಲಿ ಸಾಗಬೇಕು ಎಂದು ಆಗ್ರಹಿಸಿದೆ. ಸಿಬಿಐ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಹಾಗೂ ಉತ್ತರಪ್ರದೇಶ ಪೋಲೀಸ್ ಮತ್ತು ಆಡಳಿತದ ಕ್ರಿಯೆಗಳು ಮತ್ತು ಲೋಪಗಳ ಸಮಸ್ತ ವಿಷಯಗಳ ಬಗ್ಗೆ ತನಿಖೆ ನಡೆಸಬೇಕು ಎಂದೂ ಎಐಡಿಡಬ್ಲ್ಯುಎ ಸಿಬಿಐ ನಿರ್ದೇಶಕರನ್ನು ಆಗ್ರಹಿಸಿದೆ.

ವಿಕಲ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್ ಕಾಯ್ದೆ ರದ್ದು ಮಾಡುವ ಪ್ರಯತ್ನ –ಎನ್‌ಪಿಆರ್‌ಡಿ ಬಲವಾದ ವಿರೋಧ

ಕೊವಿಡ್ ಪರಿಸ್ಥಿತಿಯನ್ನು ಬಳಸಿಕೊಂಡು ಸಂಬಂಧಪಟ್ಟವರೊಂದಿಗೆ ಸಮಾಲೋಚಿಸದೆ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳುವ ಕೇಂದ್ರ ಸರಕಾರದ ಪ್ರವೃತ್ತಿಯ ಭಾಗವಾಗಿ ಈಗ ವಿಕಲ ವ್ಯಕ್ತಿಗಳನ್ನು ಕುರಿತ ರಾಷ್ಟ್ರೀಯ ಟ್ರಸ್ಟ್ ಕಾಯ್ದೆಯನ್ನು ರದ್ದು ಮಾಡಲು ಹೊರಟಿದೆ. ಇದನ್ನು ರಾಷ್ಟ್ರೀಯ ವಿಕಲ ವ್ಯಕ್ತಿಗಳ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಬಲವಾಗಿ ವಿರೋಧಿಸಿದೆ.

1999ರಲ್ಲಿ ತಂದ ಈ ಕಾಯ್ದೆಯ ಉದ್ದೇಶ ಕೆಲವು ವಿಕಲತೆಗಳ–ಬೌದ್ಧಿಕ, ಆಟಿಸಂ, ಸೆರೆಬ್ರಲ್ ಪಾಲ್ಸಿ ಮತ್ತು ಒಂದಕ್ಕಿಂತ ಹೆಚ್ಚು ವಿಕಲತೆಗಳಿರುವ ವ್ಯಕ್ತಿಗಳ ಕಲ್ಯಾಣ ಮತ್ತು ಸಬಲೀಕರಣ.

ವಾಸ್ತವವಾಗಿ ಈ ಕಾಯ್ದೆಯನ್ನು ವಿಶ್ವಸಂಸ್ಥೆಯ ವಿಕಲವ್ಯಕ್ತಿಗಳ ಹಕ್ಕುಗಳ ಅಧಿನಿರ್ಣಯ(ಯುಎನ್‌ಸಿಆರ್‌ಪಿಡಿ)ಕ್ಕೆ ಹೊಂದಿಕೊಳ್ಳುವಂತೆ ಮಾಡಬೇಕಾಗಿತ್ತು. ಏಕೆಂದರೆ 2007ರಲ್ಲಿ ಭಾರತ ಈ ಅಧಿನಿರ್ಣಯಕ್ಕೆ ಸಹಿ ಹಾಕಿತ್ತು. ನಂತರ 2016ರಲ್ಲಿ ನಮ್ಮಲ್ಲಿಯೂ ವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ(ಆರ್‌ಪಿಡಿಎ) ತರಲಾಯಿತು. ರಾಷ್ಟ್ರೀಯ ಟ್ರಸ್ಟ್ ಕಾಯ್ದೆಯನ್ನು ತಿದ್ದಪಡಿ ಮಾಡುವಲ್ಲಿ ಕಾರಣ ಕಾಣದ ವಿಳಂಬದ ನಂತರ, ಈಗ ಅದನ್ನು ಸಂಪೂರ್ಣವಾಗಿ ರದ್ದು ಮಾಡಲು ಸರಕಾರ ಹೊರಟಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಎನ್‌ಪಿಆರ್‌ಡಿ ಹೇಳಿದೆ.

ಈ ಸರಕಾರ ಬಂದ ಮೇಲೆ ಕಳೆದ ಆರು ವರ್ಷಗಳಿಂದ ಈ ಟ್ರಸ್ಟಿಗೆ ಪೂರ್ಣಕಾಲದ ಅಧ್ಯಕ್ಷರಿಲ್ಲ. ಇದರ ಆಡಳಿತ ಮಂಡಳಿಯನ್ನು ಅಧಿಕಾರಶಾಹಿಗಳು ಅಪ್ರಜಾಸತ್ತಾತ್ಮಕವಾಗಿ ನಡೆಸುತ್ತಿದ್ದಾರೆ. ಇಂತಹ ಹಲವು ಕೊರತೆಗಳಿದ್ದರೂ ಈ ಟ್ರಸ್ಟ್ ಹಲವು ಸ್ಕೀಮುಗಳನ್ನು ನಡೆಸುತ್ತಿದೆ. ವಿಶೇಷವಾಗಿ ನಿರ್ಮಯ ಗುಂಪು ವಿಮಾ ಯೋಜನೆ. ಇದನ್ನು ಆರಂಭದಲ್ಲಿ ಟ್ರಸ್ಟಿಗೆ ಕೊಟ್ಟ 100ಕೋಟಿ ರೂ.ಗಳ ನಿಧಿಯ ಆದಾಯದಿಂದ ನಡೆಸಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ ಟ್ರಸ್ಟ್‌ಗೆ ಹಣವನ್ನೂ ನೀಡುತ್ತಿಲ್ಲ. ಈಗ ಈ ಕಾಯ್ದೆಯನ್ನೇ ರದ್ದು ಮಾಡುವ ಪ್ರಸ್ತಾವ ಹಣಕಾಸು ಮಂತ್ರಾಲಯದ ಖರ್ಚುಗಳ ಇಲಾಖೆಯಿಂದ ಬಂದಿರುವುದರಿಂದ 'ಮಿತವ್ಯಯ'ದ ಹೆಸರಿನಲ್ಲಿ ಈ ಎಲ್ಲ ಸ್ಕೀಮುಗಳನ್ನು ಕೈಬಿಡಲಾಗುವಂತೆ ಕಾಣುತ್ತದೆ.

ಈ ಕಾಯ್ದೆಯನ್ನು ಮಾತ್ರವಲ್ಲ, ವಿಕಲ ವ್ಯಕ್ತಿಗಳಿಗೆ ಸಂಬಂಧಪಟ್ಟ ಯಾವುದೇ ಕಾಯ್ದೆಯ ರದ್ದತಿ ಮಾತ್ರವಲ್ಲ, ತಿದ್ದುಪಡಿಗಳನ್ನು ಕೂಡ ಸಂಬಂಧಪಟ್ಟವರೊಂದಿಗೆ ಸಮಾಲೋಚಿಸದೆ ಮಾಡಬಾರದು ಎಂದು ಸರಕಾರವನ್ನು ಆಗ್ರಹಿಸಿರುವ ರಾಷ್ಟ್ರೀಯ ವಿಕಲ ವ್ಯಕ್ತಿಗಳ ಹಕ್ಕುಗಳ ವೇದಿಕೆ ಸರಕಾರ, ಆರ್‌ಪಿಡಿ ಕಾಯ್ದೆಯನ್ನು ಏಕಪಕ್ಷೀಯವಾಗಿ ತಿದ್ದುಪಡಿ ಮಾಡಲು ಹೊರಟಾಗ ಬಂದ ವ್ಯಾಪಕ ಪ್ರತಿರೋಧದಿಂದಾಗಿ ಅದನ್ನು ಹಿಂತೆಗೆದುಕೊಳ್ಳಬೇಕಾದ ಘಟನೆಯಿಂದಲೂ ಪಾಟ ಕಲಿತಂತಿಲ್ಲ ಎಂದು ಹೇಳಿದೆ.

ಮಹಾರಾಷ್ಟ್ರ ರಾಜ್ಯಪಾಲರನ್ನು ವಜಾ ಮಾಡಿ – ಮಹಾರಾಷ್ಟ್ರ ಸಿಪಿಐ(ಎಂ)

ಮಹಾರಾಷ್ಟ್ರದ ರಾಜ್ಯಪಾಲ ಭಗತ್ ಸಿಂಗ್ ಕೋಶ್ಯರಿ ಇನ್ನೂ ಧಾರ್ಮಿಕ ಸ್ಥಳವನ್ನು ಸಾರ್ವಜನಿಕರಿಗೆ ತೆರೆಯದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತ "ನೀವು ಇದ್ದಕ್ಕಿದ್ದಂತೆ ಸೆಕ್ಯುಲರ್ ಆಗಿಬಿಟ್ಟಿದ್ದೀರಾ, ನೀವು ಈ ಪದವನ್ನು ದ್ವೇಷಿಸುತ್ತಿದ್ದವರು ತಾನೇ" ಎಂದು ವ್ಯಂಗ್ಯವಾಗಿ ಬರೆದಿದ್ದರು. ಮತ್ತು ಈ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಕೂಡ ಮಾಡಿದ್ದರು. ಈ ಬಗ್ಗೆ ಸಾರ್ವತ್ರಿಕವಾಗಿ ಆಕ್ರೋಶ ವ್ಯಕ್ತವಾಗಿದೆ.

ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ನಮ್ಮ ಸಂವಿಧಾನದ ಮೂಲಭೂತ ನೀತಿಗಳಲ್ಲಿ ಒಂದಾದ ಜಾತ್ಯತೀತತೆಯನ್ನು ಗೇಲಿ ಮಾಡಿ ಸಂವಿಧಾನಿಕ ವರ್ತನೆಯ ಎಲ್ಲ ಮಿತಿಗಳನ್ನೂ ಮೀರಿದ್ದಾರೆ ಎಂದು ಹೇಳಿದೆ. ರಾಜ್ಯದಲ್ಲಿ ಕೊವಿಡ್ ಮಹಾಸೋಂಕು ಪರಿಸ್ಥಿತಿ ಗಂಭೀರವಾಗಿರುವಾಗ ಈ ರೀತಿ ಪತ್ರ ಬರೆಯುವುದೇ ಆಕ್ರೋಶಕಾರಿ. ಅಲ್ಲದೆ ಆ ಪತ್ರದ ಹಾಳತ ತಪ್ಪಿರುವ ಭಾಷೆ ಇನ್ನಷ್ಟು ಖಂಡನೀಯ. ಪೂಜಾಸ್ಥಳವನ್ನು ತೆರೆಯಬೇಕು ಎಂದು ಆಗ್ರಹಿಸಿರುವುದು ರಾಜ್ಯದ ಜನತೆಯನ್ನು ಅಪಾಯಕ್ಕೀಡುಮಾಡುತ್ತದೆ. ಒಂದನ್ನು ತೆರೆದರೆ ವಿವಿಧ ಧರ್ಮಗಳ ಪಟ್ಟಭದ್ರ ಹಿತಾಸಕ್ತಿಗಳಿಂದ ತಂತಮ್ಮ ದೇವಸ್ಥಾನಗಳು, ಮಸೀದಿಗಳು, ಚರ್ಚುಗಳು, ಗುರುದ್ವಾರಗಳು ಮುಂತಾದವುಗಳನ್ನೆಲ್ಲ ತೆರೆಯುವ ಬೇಡಿಕೆಗಳು ಬರುತ್ತವೆ.

ಪುಟ 14 ನೋಡಿ



ಯಾವ ಸಂವಿಧಾನದ ಅಡಿಯಲ್ಲಿ ಮುಖ್ಯಮಂತ್ರಿಗೆ ನಾನು ಪ್ರತಿಜ್ಞೆ ಬೋಧಿಸಿದೆನೋ ಅದು ಕೇವಲ ಆಚರಣೆಯ ಉದ್ದೇಶಕ್ಕೆ ಮಾತ್ರ.. ಆದೆ ಆತ ಅದನ್ನೇ ಹೃದಯಕ್ಕೇ ತಗೊಂಡಿದ್ದಾರೆ!

ವ್ಯಂಗ್ಯಚಿತ್ರ: ಆರ್. ಪ್ರಸಾದ್

ಸಂಪಾದಕೀಯ

ನ್ಯಾಯ ಬೇಡುತ್ತಿದೆ ನ್ಯಾಯವ

ಜನತೆಗೆ ನ್ಯಾಯ ಒದಗಿಸುವುದು ಹೇಗೆ ಒಂದು ಸರ್ಕಾರದ ಮೂಲಭೂತ ಕರ್ತವ್ಯವೋ ಹಾಗೇ ನ್ಯಾಯಕ್ಕಾಗಿ ಆಗ್ರಹಿಸಿ ಪ್ರತಿಭಟಿಸುವುದು ಸಹ ಜನತೆಯ ಅಷ್ಟೇ ಮೂಲಭೂತ ಹಕ್ಕಾಗಿದೆ. "ಅನ್ಯಾಯ ಎಲ್ಲಿ ಸಂಭವಿಸಿದರೂ ಅದು ನ್ಯಾಯಕ್ಕೆ ವೊಡ್ಡಲಾದ ಬೆದರಿಕೆ ಆಗಿರುತ್ತದೆ" ಎಂದು ಅಮೇರಿಕಾದ ಮಾನವ ಹಕ್ಕುಗಳ ಹೋರಾಟಗಾರ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಹೇಳಿದ್ದಾರೆ. ಇತ್ತೀಚೆಗೆ ಅಂದರೆ ಕಳೆದ ಅಗಸ್ಟ್ 11 ರಂದು ಬೆಂಗಳೂರು ಪೂರ್ವದಲ್ಲಿ ಭಯಾನಕವಾದ ಗಲಭೆಯೊಂದು ನಡೆಯಿತು. ಬಾರಿ ಪ್ರಮಾಣದ ಖಾಸಗಿ ಹಾಗೂ ಸಾರ್ವಜನಿಕ ಆಸ್ತಿ ಬೆಂಕಿಗೆ ಆಹುತಿಯಾಗಿತ್ತು. ಪೊಲೀಸರು ಹಾರಿಸಿದ ಗುಂಡಿಗೆ ಮೂವರು ಬಲಿಯಾಗಿ ಸಾವನ್ನಪ್ಪಿದರು. ಫೇಸ್‌ಬುಕ್‌ನಲ್ಲಿ ಧಾರ್ಮಿಕ ಅವಹೇಳನಾಕಾರಿ ಪೋಸ್ಟ್ ಪ್ರಕಟಿಸಿದ್ದು ಈ ಹಿಂಸಾಚಾರಕ್ಕೆ ಕಾರಣವಾಯಿತು ಎನ್ನಲಾಗಿದೆ. ರಾಜ್ಯ ಸರ್ಕಾರ ತನ್ನ ತಕ್ಷಣದ ಎಲ್ಲ ಜವಾಬ್ದಾರಿಗಳನ್ನು ಬದಿಗಿಟ್ಟು ಗಲಭೆಯಲ್ಲಿ ಸಂಭವಿಸಿದ ನಷ್ಟವನ್ನು ವಸೂಲಿ ಮಾಡಲು ರಚಿಸಲಾದ ಕ್ಲೈಮ್ಸ್ ಕಮಿಶನ್‌ಗೆ ಹೈ ಕೋರ್ಟ್ ಅನುಮತಿ ಪಡೆಯಲು ಧಾವಿಸಿತು. 2009 ರ ಸುಪ್ರೀಂ ಕೋರ್ಟ್ ನಿರ್ದೇಶನ ಪ್ರಕಾರ ಉತ್ತರ ಪ್ರದೇಶ ಮತ್ತು ದೆಹಲಿ ರಾಜ್ಯಗಳು ಈಗಾಗಲೇ ಇಂತಹ ಆಯೋಗಗಳನ್ನು ರಚಿಸಿವೆ. ಕರ್ನಾಟಕವೂ ಸಹ ಅದನ್ನೇ ಮಾಡಲು ಹೊರಟಿವೆ.

ಪ್ರಸಕ್ತವಾಗಿ ಉತ್ತರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳೆರಡೂ ಬಿಜೆಪಿ ಆಡಳಿತದಲ್ಲಿವೆ. ಗಲಭೆ ಹಾಗೂ ಪ್ರತಿಭಟನೆಗಳಲ್ಲಿ ಸಂಭವಿಸುವ ನಷ್ಟವನ್ನು ವಸೂಲಿ ಮಾಡಲು ಕರ್ನಾಟಕವು ಉತ್ತರ ಪ್ರದೇಶ ಮಾದರಿಯನ್ನು ಅನುಸರಿಸಲು ಉತ್ಸುಕವಾಗಿದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವ ಹೆಚ್ಚುವರಿ ಪೊಲೀಸ್ ಆಯುಕ್ತರ ಮಟ್ಟದ ಅಧಿಕಾರಿಯೊಬ್ಬರು ಆಯೋಗದ ಅಧ್ಯಕ್ಷರಾಗಿರುತ್ತಾರೆ. ಅವರು 3 ತಿಂಗಳ ಒಳಗಾಗಿ ಆಗಿರುವ ನಷ್ಟವನ್ನು ನಿರ್ಧರಿಸಿ ಸರ್ಕಾರಕ್ಕೆ ವರದಿಯನ್ನು ನೀಡುತ್ತಾರೆ. ಅಪರಾಧಿಯ ಆಸ್ತಿಯನ್ನು ಮುಟ್ಟುಗೋಲು ಹಾಕುವ ಅಧಿಕಾರ ಟ್ರಿಬ್ಯೂನಲ್‌ಗೆ ಇರುತ್ತದೆ. ಉತ್ತರ ಪ್ರದೇಶ ರಾಜ್ಯದ ಕರಾಲ ಕಾಯ್ದೆ ಪ್ರಕಾರ ಟ್ರಿಬ್ಯುನಲ್ ನೀಡಿದ ತೀರ್ಪು ಅಂತಿಮವಾಗಿದ್ದು ಅದರ ವಿರುದ್ಧ ಮೇಲ್ಮನವಿ ಸಲ್ಲಿಸುವಂತಿಲ್ಲ, ಸಿಎಎ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದಾಗ, ಪ್ರಮುಖ ಸಾರ್ವಜನಿಕ ವ್ಯಕ್ತಿಗಳನ್ನು ಒಳಗೊಂಡಂತೆ 57 ಜನರನ್ನು ಪಟ್ಟಿಮಾಡಿ, ಟವರು ಸಾರ್ವಜನಿಕ ಆಸ್ತಿಯನ್ನು ನಾಶ ಮಾಡಿದ್ದಾರೆ ಎಂದು ಆರೋಪಿಸಿ ಅವರ ಹೆಸರುಗಳನ್ನು ಪಟ್ಟಿಮಾಡಿ, ಪ್ರಕಟ ಮಾಡಿ ಸಾರ್ವಜನಿಕ ಸ್ಥಳಗಳಲ್ಲಿ ಹಚ್ಚಲಾಯಿತಲ್ಲದೆ ಅವರಿಂದ ನಷ್ಟ ವಸೂಲಿಗೆ ಕ್ರಮವಹಿಸಲಾಯಿತು. ಆದರೆ ಅಲಹಬಾದ್ ಉಚ್ಚ ನ್ಯಾಯಾಲಯವು ಮುಖ್ಯ ನ್ಯಾಯಮೂರ್ತಿ ಗೋವಿಂದ್ ಮಾತೂರ್ ನೇತೃತ್ವದಲ್ಲಿ ಪ್ರಕರಣವನ್ನು ಸ್ವತಃ ಎತ್ತಿಕೊಂಡು ಯೋಗಿ ಆದಿತ್ಯನಾಥ ಚಾಟಿ ಏಟು ಕೊಟ್ಟಿತ್ತಲ್ಲದೆ ಸರ್ಕಾರದ ಪರವಾಗಿ ಹಚ್ಚಲಾದ ಪ್ರಕಟಣೆಗಳನ್ನು ಕೂಡಲೇ ಕಿತ್ತುಹಾಕುವಂತೆ ಲಕ್ನೋ ಜಿಲ್ಲಾ ನ್ಯಾಯಾಧೀಶರಿಗೂ ಮತ್ತು ಪೊಲೀಸ್ ಕಮೀಶನರಿಗೂ ಖಡಕ್ ಆದೇಶ ನೀಡಿತು. ವ್ಯಕ್ತಿಗಳ ತೇಜೋವಧೆ ಮಾಡುವುದ ಸಂವಿಧಾನದ 21 ನೇ ಕಲಂ ನ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯಪಟ್ಟ ಹೈಕೋರ್ಟ್ ಪೀಠವು ಅದು ಸಂವಿಧಾನಾತ್ಮಕ ಹಕ್ಕುಗಳ ಭಾಗವಾಗಿದ್ದು ಕಾನೂನಿನ ಮೂಲಕ ಅವುಗಳನ್ನು ಕಿತ್ತುಕೊಳ್ಳಲು ಬರುವುದಿಲ್ಲ. ಎಂದು ಯೋಗಿ ಸರ್ಕಾರಕ್ಕೆ ಚುರುಕು ಮುಟ್ಟಿಸಿತು. ಒಂದು ಪ್ರಜಾಸತ್ತಾತ್ಮಕ ಸಮಾಜದಲ್ಲಿ ಬ್ಯಾನರ್‌ಗಳಲ್ಲಿ ವ್ಯಕ್ತಿಗಳ ಹೆಸರುಗಳನ್ನು ಮುದ್ರಿಸಿ ಪ್ರಕಟಿಸುವುದರ ಔಚಿತ್ಯವೇನು ಎಂಬುದನ್ನು ನಮಗೆ ಮನವರಿಗೆ ಮಾಡುವಲ್ಲಿ ಅಡ್ವೋಕೇಟ್ ಜನರಲ್ ವಿಫಲರಾಗಿದ್ದಾರೆ ಎಂದು ಯಾವ ಮುಲಾಜಿಲ್ಲದೆ ಪೀಠ ಟೀಕಿಸಿತು.

ಉತ್ತರ ಪ್ರದೇಶದ ಕಾಯ್ದೆ ಅದರ ಉಲ್ಲಂಘನೆಗಾಗಿಯೇ ರಚನೆ ಮಾಡಿದಂತೆ ಕಾಣುತ್ತದೆ. ಆಡಳಿತಾವಸ್ಥೆಗೆ ಇಷ್ಟೊಂದು ಅನಿಯಂತ್ರಿತ ಅಧಿಕಾರ ಕೊಟ್ಟರೆ ಅದರ ದುರುಪಯೋಗವಲದೆ ಬೇರೇನು ಆಗಲು ಸಾಧ್ಯ. ಇತ್ತೀಚೆಗೆ ನಮ್ಮ ರಾಜಕೀಯ ವ್ಯವಸ್ಥೆ ಹೆಚ್ಚೆಚ್ಚು ವ್ಯಕ್ತಿ ಪೂಜಿತವಾಗುತ್ತಿದೆ. ಇಲ್ಲಿ ಯಾವ ಸಿದ್ದಾಂತವಿಲ್ಲ. ಕಾನೂನುಗಳನ್ನು ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕರ್ತರ ವಿರುದ್ಧ ದುರ್ಬಳಕೆ ಮಾಡಲು ವ್ಯಾಪಕ ಅವಕಾಶಗಳನ್ನು ನೀಡುತ್ತದೆ.

ನ್ಯಾಯಕ್ಕಾಗಿ ಹೋರಾಟ ಮಾಡುವವರ ಮೇಲೆ ಪ್ರಭುತ್ವವೇ ಹಿಂಸಾಚಾರಕ್ಕೆ ಇಳಿದರೆ ಪರಿಹಾರವನ್ನು ನಿರ್ಧರಿಸುವುದು ಹೇಗೆ? ಇಲ್ಲಿ ಹೊಣೆಗಾರರು ಯಾರು? ಕಾನೂನುಗಳು ಮಾತ್ರ ಸಮಾಜದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡಲಾರವು. ಶಾಂತಿ ಸೌಹಾರ್ದತೆ ನೆಲೆಸುವಂತೆ ಮಾಡಲು ಸರಿಯಾದ ಆಡಳಿತ ಇರಬೇಕು.

ಜನರ ಜೀವ ಹಾಗೂ ಆಸ್ತಿಗೆ ರಕ್ಷಣೆ ನೀಡುವುದು ಸರ್ಕಾರದ ಪ್ರಮುಖ ಕರ್ತವ್ಯವಾದರೂ ಸರ್ಕಾರದ ವಿಫಲತೆಯನ್ನು ಮುಚ್ಚಿಹಾಕಲು ನ್ಯಾಯಸಮ್ಮತ ಹೋರಾಟಗಳನ್ನು ದಮನ ನಾಡಲು ಬಳಸಬಾರದು. ಒಂದು ಪ್ರಜಾಸತ್ತಾತ್ಮಕ ಸಮಾಜದಲ್ಲಿ ಪ್ರತಿಭಟನೆ ನಡೆಸುವುದು ಜನತೆಯ ಮೂಲಭೂತ ಹಕ್ಕಾಗಿದೆ. ಸಾರ್ವಜನಿಕರ ಜೀವ, ಆಸ್ತಿಪಾಸ್ತಿಯನ್ನು ರಕ್ಷಿಸುವುದು ಸಹ ಸರ್ಕಾರದ ಹೊಣೆಯಾಗಿದೆ. ಆದರೆ ಯಾವ ಹೋರಾಟ ಕಾನೂನು ಬದ್ಧ ಎಂಬುದನ್ನು ತೀರ್ಮಾನಿಸುವವರು ಯಾರು? ಈ ಹಿನ್ನೆಲೆಯಲ್ಲಿ, ಯಡಿಯೂರಪ್ಪ ಸರ್ಕಾರ ರಾಜ್ಯದಲ್ಲಿ ಕ್ಲೈಮ್ ಕಮಿಶನ್ ಮುಂದೆ ಯಾವ ಕ್ಲೈಮ್ ಮಂಡಿಸಲು ಅವಸರದಲ್ಲಿ ಧಾವಿಸುತ್ತಿದ್ದಾರೆ? ಗಲಭೆಗಳಲ್ಲಿ ಬಂಧಿಸಲಾಗುವ ಅಮಾಯಕರನ್ನು ಅಪರಾಧಿಗಳೆಂದು ಘೋಷಿಸಿ ದಂಡ ವಸೂಲಿ ಮಾಡಲು ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ತುಂಬಾ ಅವಸರದಲ್ಲಿದ್ದಂತೆ ಕಾಣುತ್ತದೆ. ಸಮಯ ಬಂದಿದೆ. ಬಂದೇ ಬರಲಿದೆ ನ್ಯಾಯವೇ ನ್ಯಾಯವನ್ನು ಕೇಳುವ ಸಮಯ ಬಂದೇ ಬರಲಿದೆ. ●

ಮಂಗಳೂರಿನಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪಿಸಲು ಧರಣಿ ಸತ್ಯಾಗ್ರಹ

ಎಂಟು ಖಾಸಗಿ ಮೆಡಿಕಲ್ ಕಾಲೇಜುವುಳ್ಳ ದ.ಕ. ಜಿಲ್ಲೆಯಲ್ಲಿ ಒಂದೇ ಒಂದು ಸರಕಾರೀ ಮೆಡಿಕಲ್ ಕಾಲೇಜು ಇಲ್ಲ. ಮಂಗಳೂರಿನ ಸರಕಾರೀ ವೆನ್‌ಲಾಕ್ ಆಸ್ಪತ್ರೆಯನ್ನೇ ಈ ಎಲ್ಲಾ ಖಾಸಗಿ ಕಾಲೇಜುಗಳು ಸಾಕಷ್ಟು ಬಳಸಿಕೊಂಡಿವೆ. ಆದರೆ ಸರಕಾರೀ ಮೆಡಿಕಲ್ ಕಾಲೇಜನ್ನು ಜಿಲ್ಲೆಯ ಶಾಸಕ ಸಂಸದರು ಇಷ್ಟೂ ಕಾಲ ಮಂಗಳೂರಿಗೆ ಮಂಜೂರು ಮಾಡಿಸದೇ ಇದ್ದುದರಿಂದ, 180 ವರ್ಷಗಳ ಚರಿತ್ರೆಯುಳ್ಳ ಸರಕಾರೀ ವೆನ್‌ಲಾಕ್ ಆಸ್ಪತ್ರೆ ಹೈಟೆಕ್ ಆಸ್ಪತ್ರೆಯಾಗದೇ ಉಳಿದಿದೆ. ಇದರಿಂದ ಜಿಲ್ಲೆಯ ಮಧ್ಯಮವರ್ಗದವರೂ ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯದೇ ಖಾಸಗೀ ಆಸ್ಪತ್ರೆಗಳನ್ನೇ ಆಶ್ರಯಿಸುವಂತಾಗಿದೆ. ಜನತೆಯ ಅಸಹಾಯಕತೆಯನ್ನು ಖಾಸಗೀ ಆಸ್ಪತ್ರೆಗಳು ದುರುಪಯೋಗಗೊಳಿಸುವುದು ಕಂಡುಬರುತ್ತಿದೆ. ಇದೀಗ ಕೋವಿಡ್–19 ಕಾಯಿಲೆಯ ಸಂದರ್ಭದಲ್ಲಿ ನೇರವಾಗಿ ಖಾಸಗೀ ಆಸ್ಪತ್ರೆಗಳಿಗೆ ರೋಗಿಯನ್ನು ದಾಖಲೆಗೊಳಿಸಿದರೋ ನಿಮ್ಮನ್ನು ದುಬಾರಿ ಬಿಲ್ಲುಗಳಿಂದ ಈ ಖಾಸಗಿಯವರು ಸುಲಿಗೆ ಮಾಡುತ್ತಾರೆ. ಸಾಕಷ್ಟು ಸೌಲಭ್ಯಗಳಿಲ್ಲದಿರುವುದರಿಂದ ವೆನ್‌ಲಾಕ್ ಆಸ್ಪತ್ರೆಗೆ ದಾಖಲಾಗಲು ಜನ ಅಳುಕುತ್ತಾರೆ.

ಈ ಹಿನ್ನೆಲೆಯಲ್ಲಿ ಕೋವಿಡ್ ಪಿಡುಗು ಆರಂಭವಾದಂದಿನಿಂದ, ದ.ಕ.ಜಿಲ್ಲೆಯಲ್ಲಿ ಡಿವೈಎಫ್ಐ ನೇತೃತ್ವದಲ್ಲಿ ಸರಕಾರೀ ಆಸ್ಪತ್ರೆಯನ್ನು ಬಲಪಡಿಸಬೇಕೆಂದು ಪ್ರತಿಭಟನೆಗಳು ನಡೆಯುತ್ತಿವೆ. ಕಳೆದ ಕೆಲವು ದಿನಗಳ ಹಿಂದೆ ಜಿಲ್ಲೆಯ ಸಾರ್ವಜನಿಕರು ಸೇರಿದ್ದ ದುಂಡುಮೇಜಿನ ಸಭೆಯಲ್ಲಿ, ಈ ಬಗ್ಗೆ ಒಂದು ಹೋರಾಟ ಸಮಿತಿ ರೂಪಿಸಲು ಕರೆ ನೀಡಲಾಯಿತು. ಈ ಸಮಿತಿ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ಶಾಸಕರ ಕಚೇರಿಯ ಎದುರು ಧರಣಿ ಸತ್ಯಾಗ್ರಹ ನಡೆಸಲು ಕರೆ ನೀಡಲಾಯಿತು.

ಖಾಸಗಿ ಆಸ್ಪತ್ರೆ ನಿಯಂತ್ರಿಸಿ, ಸರಕಾರೀ ಆಸ್ಪತ್ರೆ ಉಳಿಸಿ ಎಂದು ಆಗ್ರಹಿಸಲಾಯಿತು. ಜಿಲ್ಲೆಗೆ ಜನಸಂಖ್ಯಾ ಆಧಾರದ ಮೇಲೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆಸ್ಪತ್ರೆ ಹಾಗೂ ತಾಲೂಕು ಆಸ್ಪತ್ರೆಗಳನ್ನು ಹೆಚ್ಚುವರಿಯಾಗಿ ನೀಡಿ ಆರೋಗ್ಯ ಸಿಬ್ಬಂದಿಗಳನ್ನು ನೇಮಕ ಮಾಡಬೇಕೆಂದು ಕರೆ ನೀಡಲಾಯಿತು.

ಹೋರಾಟ ಸಮಿತಿಯ ಕರೆಯ ಮೇರೆಗೆ ಅಕ್ಟೋಬರ 12 ರಂದು ಮಂಗಳೂರು ಮಹಾನಗರ ಕಾರ್ಪರೇಶನ್ ಕಚೇರಿಯಲ್ಲಿರುವ ಮಂಗಳೂರು ದಕ್ಷಿಣ ವಿಧಾನಸಭಾ ಶಾಸಕರ ಕಚೇರಿಯ ಮುಂದೆ ಪ್ರತಿಭಟನಾ ಧರಣಿ ಸತ್ಯಾಗ್ರಹವನ್ನು ಬೆಳಗ್ಗಿನಿಂದ ಸಂಜೆಯ ತನಕ ನಡೆಸಲಾಯಿತು.

ಧರಣಿ ಸತ್ಯಾಗ್ರಹಕ್ಕೆ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಚಾಲನೆ ನೀಡಿ ಮಾತನಾಡಿದರು. ನ್ಯಾಯವಾದಿ ಸಾಮಾಜಿಕ ಹೋರಾಟಗಾರ ದಿನೇಶ್ ಹೆಗ್ಡೆ ಉಳೇಪಾಡಿ, ದಸಂಸ ರಾಜ್ಯ ಮುಖಂಡ ಎಂ.ದೇವದಾಸ್, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ವಿ.ಕುಕ್ಯಾನ್, ಸಿಐಟಿಯು ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಮಂಗಳೂರು ಮನಪಾ ಸದಸ್ಯರಾದ ಪುರುಷೋತ್ತಮ ಚಿತ್ರಾಪುರ, ಮಹಮ್ಮದ್ ಕುಂಜತ್ತಬೈಲ್, ಖ್ಯಾತ ವೈದ್ಯ ಡಾ.ದೇವಿದಾಸ್ ಶೆಟ್ಟಿ, ಅಖಿಲ ಭಾರತ ವಕೀಲರ ಸಂಘದ ಯಶವಂತ ಮರೋಳಿ, ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಡಾ.ಕೃಷ್ಣಪ್ಪ ಕೊಂಚಾಡಿ, ಸಮುದಾಯದ ವಾಸುದೇವ ಉಚ್ಚಿಲ, ದಲಿತ ಹಕ್ಕುಗಳ ಸಮಿತಿಯ ತಿಮ್ಮಯ್ಯ ಕೊಂಚಾಡಿ, ಜೆಎಂಎಸ್‌ನ ಭಾರತಿ ಬೋಳಾರ್ ಭಾಗವಹಿಸಿ ಮಾತನಾಡಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಮಾರೋಪ ಭಾಷಣ ಮಾಡಿದರು. ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಕಾರ್ಯಕ್ರಮ ನಿರ್ವಹಿಸಿದರು. ■



ಕಲಾವಿದ ಮೋಹನ ಸೋನ : ಒಂದು ನುಡಿ ನಮನ

ವಾಸುದೇವ ಉಚ್ಚಿಲ

ನಾಡಿನ ಖ್ಯಾತ ಚಿತ್ರಕಲಾವಿದರೂ ರಂಗಕರ್ಮಿಗಳೂ ಆಗಿದ್ದ ಮೋಹನ ಸೋನ ಅಕ್ಟೋಬರ 12 ರಂದು ನಿಧನರಾಗಿದ್ದಾರೆ. ಸುಳ್ಯ ತಾಲೂಕಿನ ಸೋಣಂಗೇರಿ ನಡುಮನೆ ರೈತ ಕುಟುಂಬ ಅವರದು. ಮಂಗಳೂರಿನಲ್ಲಿ ಶಿಕ್ಷಕ ತರಬೇತಿ ಪಡೆಯುವಾಗಲೇ ಚಿತ್ರಕಲಾ ಶಿಕ್ಷಣವನ್ನೂ ಪಡೆದರು. ರಂಗಭೂಮಿಯಲ್ಲಿ ಆಸಕ್ತಿ ಬೆಳೆಸಿಕೊಂಡರು. ಅಲ್ಪಕಾಲ ಸುಳ್ಯದ ದೊಡ್ಡತೋಟ ಶಾಲೆಯಲ್ಲಿ ಶಿಕ್ಷಕರಾಗಿರುವಾಗಲೇ ಅವರ ಚಿತ್ರಕಲಾ ಹಾಗೂ ರಂಗಪ್ರತಿಭೆಗಳು ಅನಾವರಣಗೊಂಡವು. ಮುಂದೆ ವಿಟ್ಲದ ಸಿಪಿಸಿಆರ್ಐ ಕೇಂದ್ರ ಕೃಷಿ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದ ಅವಧಿಯಲ್ಲಿ ಅವರು ಚಿತ್ರಕಲಾವಿದರೂ ರಂಗಕರ್ಮಿಗಳೂ ಆಗಿ ಖ್ಯಾತರಾದರು.

1984 ರಲ್ಲಿ ಖ್ಯಾತ ಚಿತ್ರಕಲಾವಿದ ಜಾನ್ ದೇವರಾಜ್ ಅವರ ಬಳಗದಲ್ಲಿ ಮಂಗಳೂರಿನಲ್ಲಿ ರಸ್ತೆಬದಿ ಚಿತ್ರಪ್ರದರ್ಶನ ನಡೆದಾಗಲೇ, ಮೋಹನ ಸೋನ ಬಣ್ಣದ ಗಾರುಡಿಗ ಎಂದು ಸಿದ್ಧವಾಯಿತು. ಜಿಲ್ಲೆಯ ಚಿತ್ರಕಲಾವಿದರ ಬಳಗದೊಂದಿಗೆ 1990ರ ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಪೂರಕವಾಗಿ 5 ದಿನಗಳ ಚಿತ್ರಕಲಾ ಜಾಥಾ ಅವರು ಮಾಡಿಸಿದರು. 1993 ರಲ್ಲಿ ಅವರು ತಮ್ಮ ಮನೆಯಲ್ಲಿ ಏರ್ಪಡಿಸಿದ್ದ ಕಲಾಶಿಬಿರದಲ್ಲಿ ರಾಜ್ಯದ ಹಲವರು ಚಿತ್ರಕಲಾವಿದರು ಸಾಹಿತಿ ಶಿವರಾಮ ಕಾರಂತರ ಬಗ್ಗೆ ಚಿತ್ರಗಳನ್ನು ರಚಿಸಿದ್ದನ್ನು ಬಳಸಿಕೊಂಡು, 'ಚಿತ್ರ ಕಾರಂತ' ಎಂಬ ಚಿತ್ರಕಲಾ ಜಾಥಾವನ್ನು ದ.ಕ. ಜಿಲ್ಲಾದ್ಯಂತ ನಡೆಸಿದರು. ಪುತ್ತೂರಿನಲ್ಲಿ ನಡೆದ ಜಾಥಾದ ಉದ್ಘಾಟನಾ ಸಮಾರಂಭದಲ್ಲಿ ಶಿವರಾಮಕಾರಂತರೂ, ಖ್ಯಾತ ಚಿತ್ರಕಲಾವಿದ ಕೆ.ಕೆ.ಹೆಬ್ಬಾರರೂ ಭಾಗವಹಿಸಿದ್ದು ವಿಶೇಷ. ಈ ಜಾಥಾ ಆ ಸಂದರ್ಭ ಕೋಟಾದಲ್ಲಿ ನಡೆದ 2 ದಿನಗಳ 'ಕಾರಂತ ಉತ್ಸವ'ದಲ್ಲೂ ಪ್ರದರ್ಶನ ನೀಡಿತು. ಜಾಥಾ ಹಿಂದಿರುಗಿ ಸೋಣಂಗೇರಿಯಲ್ಲಿ ಸಮಾಪನಗೊಂಡಾಗ ಖ್ಯಾತ ರಂಗನಿರ್ದೇಶಕರಾದ ಬಿ.ವಿ.ಕಾರಂತರೂ ಅದರಲ್ಲಿ ಭಾಗವಹಿಸಿದ್ದರು. ಈ ವೇಳೆಗೆ ಮೋಹನ ಸೋನರ ಮನೆ 'ಬಯಲು ಚಿತ್ರಾಲಯ'ವೆಂದು ಪ್ರಚಾರ ಪಡೆಯಿತು. ಕಾರಣ ರಾಜ್ಯದ ಕಲಾವಿದರು ಅಲ್ಲಿನ 40 ಮನೆಗಳಲ್ಲಿ ಹತ್ತಾರು ದಿನ ಉಳಿದು ತಮ್ಮ ಚಿತ್ರ ರಚನೆ ಮಾಡಿದ್ದರು. ಆ ಮನೆಗಳಲ್ಲಿ ಆ ಕಲಾಕೃತಿಗಳು ಈಗಲೂ ಇವೆ.


1994 ರಲ್ಲಿ ಸೋಣಂಗೇರಿಯ ಮೋಹನ ಸೋನರ ಮನೆ ತೋಟಗಳ ಮಣ್ಣಿನ ದರೆ (ಕಂಪೌಂಡ್) ಮೇಲೆ 13 ಭಾಗಗಳಲ್ಲಿ ಶಿವರಾಮ ಕಾರಂತರ ಕೃತಿ 'ಚೋಮನ ದುಡಿ' ಮೂಡಿ ಬಂತು. ಮಣ್ಣಿನ ಗೋಡೆ ಮೇಲೆ ಸಿಮೆಂಟಲ್ಲಿ ಮಾಡಿದ ಉಬ್ಬುಶಿಲ್ಪ.



ರಾಜ್ಯದ ಹಲವು ಕಲಾವಿದರು ಆ ಊರಲ್ಲಿ ಕೆಲ ದಿನ ಇದ್ದು ಈ ಮಹಾನ್ ಕೃತಿ ರಚಿಸಿದ್ದರು. ಮಣ್ಣಿನ ಗೋಡೆ ಮೇಲಿರುವ ಈ ಕೃತಿ ಈಗ ಶಿಥಿಲವಾಗಿದ್ದರೂ, ಐದಾರು ವರ್ಷಗಳ ವರೆಗೆ ವೀಕ್ಷಣೀಯವಾಗಿತ್ತು. ಆ ಕಲೋತ್ಸವ ಸೋನರ ಮನೆಯಲ್ಲೂ ಸಮೀಪದ ಶಾಲೆಯಲ್ಲೂ ಸಾಹಿತ್ಯ, ರಂಗಭೂಮಿ, ವಿಚಾರಸಂಕಿರಣಗಳೊಂದಿಗೆ ನಡೆದಿದ್ದು,ರಾಜ್ಯದಹಲವೆಡೆಗಳಿಂದ ಕಲಾಸಕ್ತರು ಸೋಣಂಗೇರಿಯ ಹಳ್ಳಿಗೆ ಆಗಮಿಸಿದ್ದರು.

ಮೋಹನ ಸೋನರ ರಂಗ ಚಟುವಟಿಕೆಗಳು 1979ರಲ್ಲಿ ದೊಡ್ಡತೋಟ ಶಾಲೆಯಲ್ಲಿದ್ದಾಗಲೇ ಆರಂಭವಾಗಿದ್ದವು. ಕುರಾಸೋವಾನ 'ರಾಶೋಮನ್' ಆಧರಿಸಿದ 'ದಿಡ್ಡಿಬಾಗಿಲು' ಆಗಲೇ ನಾಟಕವಾಡಿದ್ದರು. ಸಮುದಾಯ ಪ್ರಥಮ ಸಾಂಸ್ಕೃತಿಕ ಜಾಥಾ 1979ರಲ್ಲಿ ಸುಳ್ಯಕ್ಕೆ ಬಂದಾಗ ಅದರಲ್ಲಿ ಸೇರಿಕೊಂಡರು. 1981 ರಲ್ಲಿ ಸಮುದಾಯ ರಾಜ್ಯ ತಂಡದ ಭಾಗವಾಗಿ ಭೋಪಾಲದ ಬೀದಿನಾಟಕ ಉತ್ಸವದಲ್ಲಿ ಭಾಗವಹಿಸಿದ್ದರು. ಸುಳ್ಯದ ಅಭಿನಯ ತಂಡದೊಂದಿಗೆ, ಸುಬ್ರಹ್ಮಣ್ಯ ಕಾಲೇಜಿನ ತಂಡದೊಂದಿಗೆ ಮತ್ತು ಅವರು ವೃತ್ತಿ ನಿರತರಾಗಿದ್ದ ವಿಟ್ಲದ ರಂಗತಂಡದೊಂದಿಗೆ ಹಲವಾರು ನಾಟಕಗಳಲ್ಲಿ ಪ್ರಧಾನವಾಗಿ ರಂಗವಿನ್ಯಾಸಕಾರರಾಗಿ, ಬೆಳಕು ಬಣ್ಣಗಳ ನಿರ್ವಾಹಕರಾಗಿ ಕೆಲಸ ಮಾಡಿದ್ದಾರೆ. ಅವರು ರಂಗದಲ್ಲಿ ಮೂಡಿಸಿದ ಬೆಳಕು, ರಂಗವಿನ್ಯಾಸಗಳು ನೋಡುಗನಿಗೆ ವರ್ಣಚಿತ್ರದಂತೆ ಕಾಣುತ್ತಿತ್ತು. ಶಾಲಾ ರಜಾದಿನಗಳಲ್ಲಿ ವಿಟ್ಲದಲ್ಲಿ ಆರು ವರ್ಷ, ಸೋಣಂಗೇರಿಯಲ್ಲಿ 8 ವರ್ಷ, ಸುಬ್ರಹ್ಮಣ್ಯ ಕಾಲೇಜಿನಲ್ಲಿ 2 ವರ್ಷ ರಂಗ ಶಿಬಿರಗಳನ್ನು ನಡೆಸಿದ್ದಾರೆ. ಶಿಬಿರಗಳಲ್ಲಿ ನಾಟಕಗಳನ್ನೂ ರೂಪಿಸಿದ್ದಾರೆ. ಕೆಲವೇ ನಾಟಕಗಳನ್ನು ಅವರು ಸ್ವತ: ನಿರ್ದೇಶಿಸಿದ್ದರೂ, ಅವಂತೂ ಅಪೂರ್ವ ರಂಗ ಕೃತಿಗಳೆನಿಸಿವೆ. 1986 ರಲ್ಲಿ ವಿಟ್ಲದಲ್ಲಿ ಅವರು ನಿರ್ದೇಶಿಸಿದ್ದ 'ಚೋಮ', ಅರೆ ಭಾಷೆಯಲ್ಲಿ ಬರೆದು ನಿರ್ದೇಶಿಸಿದ ತೇಜಸ್ವಿಯವರ 'ಕರ್ವಾಲೋ', ಗಾರ್ಕಿಯ ಕಥೆ ಆಧರಿಸಿದ 'ಮಕರಚುಂದ್ರ', ಅಬ್ಬಕ್ಕ ರಾಣಿಯರ ಕಥಾನಕ 'ಮಣ್ಣಿನಗೋಡೆ', 'ಕೆರೆಗೆ ಹಾರ' ಆಧರಿಸಿದ 'ಭಾಗೀರಥಿ', ನಾಲ್ಕು ವರ್ಷಗಳ ಹಿಂದೆ ಪುತ್ತೂರಿನ ಬಾಲವನದಲ್ಲಿ ಪ್ರದರ್ಶಿಸಿದ ಕಾರಂತರ 'ಮೂಕಜ್ಜಿಯ ಕನಸುಗಳು' ಮೋಹನ ಸೋನ ಸ್ವತ: ನಿರ್ದೇಶಿಸಿದ ಅಪೂರ್ವ ರಂಗಕೃತಿಗಳಾಗಿವೆ.

ಸೋಣಂಗೇರಿಯ ಹಳ್ಳಿ ಜನರಿಗೆ ರಾಜ್ಯದ ಶ್ರೇಷ್ಠ ನಾಟಕಗಳನ್ನು ಪರಿಚಯಿಸಿದ್ದು ಮೋಹನ ಸೋನರೇ. ಬೆಂಗಳೂರು ಸಮುದಾಯದ ಸಂಕ್ರಾಂತಿ, ಮಹಾಚೈತ್ರ, ಬಿ.ಜಯಶ್ರೀ ಅವರ 'ಲಕ್ಷಾಪತಿ ರಾಜನ ಕಥೆ' ಕೂಡಾ ಹಳ್ಳಿ ಜನರ ಮನ ಗೆಲ್ಲುವಲ್ಲಿ ಸೋನರ ಉತ್ಸಾಹವೇ ಕಾರಣ. ನೂರಾರು ಪುಸ್ತಕಗಳಿಗೆ ಅವರು ಮುಖಚಿತ್ರ, ಒಳಚಿತ್ರ ರಚಿಸಿದ್ದಾರೆ. ಪುತ್ತೂರಿನ ಕಾರಂತರ ಬಾಲವನದ ಅನೇಕ ಕಲಾ ಶಿಬಿರಗಳಲ್ಲಿ ಅವರ ಪಾತ್ರವಿದ್ದೇ ಇರುತ್ತಿತ್ತು – ಚಿತ್ರಕಲಾವಿದನಾಗಿ ಹಾಗೂ ರಂಗಕರ್ಮಿಯಾಗಿ. ಇವತ್ತೂ ಕಾರವಾರ ನಗರದಲ್ಲಿರುವ ಪ್ರವಾಸೀ





ಆಕರ್ಷಣೆಯಾಗಿರುವ 'ರಾಕ್ ಗಾರ್ಡನ್' ರೂಪಿಸಿದ್ದು ಮೋಹನ್ ಸೋನ ಮತ್ತು ಅವರ ಕಲಾಗುರುವಿನ ಪುತ್ರರಾದ ಸುದೇಶ್ ಮಹಾನ್.

ಸಮುದಾಯ ಕರ್ನಾಟಕ ರಾಜ್ಯಮಟ್ಟದ ಕಲಾಶಿಬಿರ ಮತ್ತು ಪ್ರದರ್ಶನವೊಂದನ್ನು ಪುತ್ತೂರಲ್ಲಿ ವ್ಯವಸ್ಥೆಗೊಳಿಸುವ ಬಗ್ಗೆ ಮೋಹನ ಸೋನರು ಒಪ್ಪಿಕೊಂಡಿದ್ದರು. ಆದರೆ ಅದು ನಿಜವಾಗುವ ಮೊದಲೇ ಅವರು ಅಕಾಲದಲ್ಲಿ ತೀರಿಕೊಂಡಿದ್ದಾರೆ. ಅಲ್ಪ ಕಾಲದ ಅನಾರೋಗ್ಯ ಅವರನ್ನು ನಮ್ಮಿಂದ ದೂರವಾಗಿಸಿದೆ. ಆಗ ಅವರಿಗೆ ವಯಸ್ಸು 66 ವರ್ಷ ಮಾತ್ರ.

ಸದಾ ಮುಗ್ಧ ಮಂದಹಾಸದ, ಸರಳ ಸಜ್ಜನಿಕೆಯ, ನಿಗರ್ವಿ ಮೋಹನ ಸೋನ ಅವರು. ಯಾವ ಕಲಾಶಿಬಿರಗಳಲ್ಲೂ ಅವರು ಯಾರೊಂದಿಗೂ ದನಿ ಎತ್ತಿ ಮಾತಾಡಿದವರಲ್ಲ. ತಮ್ಮ ದೈತ್ಯ ಪ್ರತಿಭೆಯಿಂದಷ್ಟೇ ಕಲಾಸಕ್ತರನ್ನು ತಮ್ಮ ಕಡೆಗೆ, ತಮ್ಮ ಕಲಾಕೃತಿಗಳ ಕಡೆಗೆ ಸೆಳೆದವರು ಅವರು. ಅವರ ಸಜ್ಜನಿಕೆ ಅವರನ್ನು ಎಲ್ಲರೂ ಪ್ರೀತಿಸುವಂತೆ ಮಾಡಿದೆ. ●

ಹಾಥರಸ್ ಅತ್ಯಾಚಾರ ಕೊಲೆ ಪ್ರತಿಭಟನೆ ಉಡುಪಿಯಲ್ಲಿ ಧರಣಿ:

ಉತ್ತರ ಪ್ರದೇಶದ ಹಾಥರಸ್‌ನಲ್ಲಿ ನಡೆದ ದಲಿತ ಯುವತಿಯ ಅತ್ಯಾಚಾರ ಮತ್ತು ಕೊಲೆಯನ್ನು ಪ್ರತಿಭಟಿಸಿ ಉಡುಪಿ ಜಿಲ್ಲಾ ಸಿಐಟಿಯು, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಗಳ ನೇತೃತ್ವದಲ್ಲಿ ಅಕ್ಟೋಬರ 13 ರಂದು ಉಡುಪಿ ಅಜ್ಜರಕಾಡು ಹುತಾತ್ಮ ಸ್ಮಾರಕದ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಸದ್ರಿ ಪ್ರಕರಣವನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸುವಂತೆ ಆಗ್ರಹಿಸಲಾಯಿತು.

ಪ್ರತಿಭಟನಾ ಧರಣಿಯಲ್ಲಿ ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್, ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಶಶಿಧರ ಗೊಲ್ಲ, ಬಲ್ಕೀಸ್ ಕುಂದಾಪುರ, ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್ ಕೋಣಿ, ಉಡುಪಿ ತಾಲೂಕು ಸಿಐಟಿಯು ಮುಖಂಡರಾದ ರಾಮ ಕರ್ಕಡ, ಕವಿರಾಜ್ ಭಾಗವಹಿಸಿದ್ದರು. ●

ಕಡಿಮೆ ದರದಲ್ಲಿ ಮರಳು ನೀಡಬೇಕೆಂದು ಉಳ್ಳಾಲದಲ್ಲಿ ಕಟ್ಟಡ ಕಾರ್ಮಿಕರ ಒತ್ತಾಯ:

ಮರಳು ಸಿಗದೇ ಇರುವ ಕಾರಣ ಹರೇಕಳ, ಪಾವೂರು ಗ್ರಾಮಗಳಲ್ಲಿ ಕಟ್ಟಡ ಕಾಮಗಾರಿ ಸ್ಥಗಿತಗೊಂಡಿದ್ದು, ಇದರಿಂದ ಕಟ್ಟಡ ಕಾರ್ಮಿಕರು ಕೆಲಸ ಇಲ್ಲದೇ ತೊಂದರೆ ಅನುಭವಿಸುತ್ತಿದ್ದು, ಜಿಲ್ಲಾಡಳಿತ ಮನೆಕಟ್ಟುವವರಿಗೆ ಕಡಿಮೆ ದರದಲ್ಲಿ ಮರಳು ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಿ ಅಕ್ಟೋಬರ್ 13 ರಂದು ಉಳ್ಳಾಲ ಪ್ರದೇಶದ ಗ್ರಾಮ ಚಾವಡಿ ಜಂಕ್ಷನ್‌ನಲ್ಲಿ ಡಿವೈಎಫ್ಐ ಮತ್ತು ಕಟ್ಟಡ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರಿಂದ ಹಕ್ಕೊತ್ತಾಯ ಸಭೆ ನಡೆಯಿತು.

ಕಟ್ಟಡ ಕಾರ್ಮಿಕರ ಸಂಘದ ಉಳ್ಳಾಲ ವಲಯ ಕಾರ್ಯದರ್ಶಿ ಚಂದ್ರಹಾಸ್ ಪಿಲಾರ್, ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ಅಶ್ರಫ್ ಕೆ.ಸಿ.ರೋಡ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಕಟ್ಟಡ ಕಾರ್ಮಿಕರ ಸಂಘದ ಉಳ್ಳಾಲ ವಲಯ ಅಧ್ಯಕ್ಷ ಜನಾರ್ಧನ ಕುತ್ತಾರ್, ಮುಖಂಡರಾದ ರಾಮಚಂದ್ರ ಪಜೀರ್, ಸುಂದರ ಪೂಜಾರಿ, ಸತ್ತರ್ ಕೊಜಪಾಡಿ, ಹನೀಫ್ ಪೊಡಾರ್, ಡಿವೈಎಫ್ಐ ಮುಖಂಡರಾದ ರಫೀಕ್ ಹರೇಕಳ, ನಿಝಾಮ್ ಹರೇಕಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ●

ವಿಧಾನ ಮಂಡಲ ಒಪ್ಪದ ವಿಧೇಯಕಗಳ ಮರು ಸುಗ್ರೀವಾಜ್ಞೆ ಸಂವಿಧಾನ ವಿರೋಧಿ

ಸನ್ಮಾನ್ಯ ಶ್ರೀ ರಾಜ್ಯಪಾಲರು
ಕರ್ನಾಟಕ ಸರಕಾರ,

ಕರ್ನಾಟಕ ಸರಕಾರ, ರೈತ ವಿರೋಧಿ ಭೂ ಸುಧಾರಣೆ ತಿದ್ದುಪಡಿ ಸುಗ್ರೀವಾಜ್ಞೆ, ಎಪಿಎಂಸಿ ತಿದ್ದುಪಡಿ ಸುಗ್ರೀವಾಜ್ಞೆ, ಕಾರ್ಮಿಕ ವಿರೋಧಿ, ಕಾರ್ಮಿಕ ಕಾನೂನುಗಳ ತಿದ್ದುಪಡಿ ಹಾಗೂ ವಿದ್ಯುಚ್ಛಕ್ತಿ ತಿದ್ದುಪಡಿ ಸುಗ್ರೀವಾಜ್ಞೆ ಗಳ ವಿಧೇಯಕಗಳು, ಕಳೆದ ವಿಧಾನ ಮಂಡಲದ ಅಧಿವೇಶನದಲ್ಲಿ ಶಾಸನ ಸಭೆಯ ಅನುಮೋದನೆ ಪಡೆಯಲು ವಿಫಲವಾಗಿವೆ. ಮಾತ್ರವಲ್ಲಾ, ರಾಜ್ಯದಾದ್ಯಂತ ರೈತರು, ಕೂಲಿಕಾರರು, ಕಾರ್ಮಿಕರು, ಪ್ರಗತಿಪರ ನಾಗರೀಕರು, ವಿರೋದ ಪಕ್ಷಗಳು ತೀವ್ರವಾಗಿ ಬೀದಿಗಿಳಿದು ಪ್ರತಿರೋಧಿಸಿವೆ. ಅಲ್ಲೂ ಜನಗಳ ವಿಶ್ವಾಸ ಗಳಿಸುವಲ್ಲಿ ಅವು ತೀವ್ರವಾಗಿ ಸೋತಿವೆ.

ಪರಿಸ್ಥಿತಿ ಹೀಗಿರುವಾಗ, ಮತ್ತೆ ಸದರಿ ವಿಧೇಯಕಗಳನ್ನು ಪುನಃ ಹಿಂಬಾಗಿಲಿನಿಂದ ಮರಳಿ ಸುಗ್ರೀವಾಜ್ಞೆಗಳಾಗಿ ಜಾರಿಗೆ ತರಲು ಮಂತ್ರಿಮಂಡಲ ಕ್ರಮವಹಿಸಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಖಂಡಿಸುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು 2017ರಲ್ಲಿ ಕೃಷ್ಣಕುಮಾರ್ ಸಿಂಗ್ ಮತ್ತು ಬಿಹಾರ ಸರ್ಕಾರ ಪ್ರಕರಣದಲ್ಲಿ ಶಾಸನ ಸಭೆಯ ಅನುಮೋದನೆ ಪಡೆಯದ ಸುಗ್ರೀವಾಜ್ಞೆಗಳನ್ನು ಪುನರ್ ಸುಗ್ರೀವಾಜ್ಞೆಯಾಗಿ ಹೊರಡಿಸುವುದು 'ಸಂವಿಧಾನಕ್ಕೆ ಎಸಗುವ ವಂಚನೆಯಾಗಿದೆ' ಎಂದಿದೆ.

ಆದಾಗಲೂ, ರಾಜ್ಯ ಸರಕಾರ ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿಗೆ ವಿರುದ್ದವಾದ ಮತ್ತು ಸಂವಿಧಾನವನ್ನು ನಗ್ನವಾಗಿ ಉಲ್ಲಂಘಿಸುವ ಕೆಲಸದಲ್ಲಿ ತೊಡಗಿದೆ. ವಿಧಾನ ಮಂಡಲ ಮತ್ತು ಜನತೆ ತೀವ್ರವಾಗಿ ವಿರೋಧಿಸುತ್ತಿರುವಾಗ, ಸರ್ವೋಚ್ಚ ನ್ಯಾಯಾಲಯ ಈ ರೀತಿಯ ಕ್ರಮಗಳು ಸಂವಿಧಾನವನ್ನು ವಂಚಿಸುವ ಕ್ರಮಗಳೆಂದು ತೀವ್ರವಾಗಿ ಆಕ್ಷೇಪಿಸಿರುವಾಗ ಅಷ್ಟೊಂದು ತರಾತುರಿಯಲ್ಲಿ ಸಂವಿಧಾನ ವಿರೋಧಿಯಾಗಿ ಅವುಗಳನ್ನು ಮರಳಿ ತುರ್ತಾಗಿ ಜಾರಿಗೆ ತರುವ ಅಗತ್ಯವಾದರೂ ಏನು? ಯಾರ ಲಾಭಕ್ಕಾಗಿ?

ಆದ್ದರಿಂದ, ಯಾವುದೇ ಕಾರಣಕ್ಕೂ ರಾಜ್ಯ ಸಚಿವ ಸಂಪುಟದ 1.10.2020 ರ ಶಿಫಾರಸ್ಸಿನಂತೆ ರೈತ ವಿರೋಧಿ, ಕಾರ್ಮಿಕ ವಿರೋಧಿ ಈ ಸುಗ್ರೀವಾಜ್ಞೆಗಳ ಈ ಸಂವಿಧಾನ ಮಾನ್ಯತೆ ನೀಡದ ಈ ಸೂಚನೆಗಳನ್ನು ತಾವು ಒಪ್ಪದೇ, ಅವುಗಳ ವಾಪಾಸು ಕಳುಹಿಸಬೇಕು ಮತ್ತು ವಿಧಾನ ಮಂಡಲದ ಅಧಿಕಾರಗಳನ್ನು ಮತ್ತು ಸಂವಿಧಾನವನ್ನು ಸಂರಕ್ಷಿಸಲು ಕ್ರಮ ವಹಿಸಬೇಕೆಂದು ಈ ಮೂಲಕ ವಿನಂತಿಸುವೆವು.

ಜಿ.ಸಿ. ಬಯ್ಯಾರೆಡ್ಡಿ, ಅಧ್ಯಕ್ಷರು
ಯು. ಬಸವರಾಜ, ಪ್ರಧಾನ ಕಾರ್ಯದರ್ಶಿ
(16.10.2020)

ಶಾಸನ ಸಭೆ ಅಂಗೀಕಾರ ಪಡೆಯದ ವಿಧೇಯಕಗಳ ಮರು ಸುಗ್ರೀವಾಜ್ಞೆ ಹೊರಡಿಸುವುದು ಸಂವಿಧಾನ ವಿರೋಧಿ – ಎಡಪಕ್ಷಗಳ ಒತ್ತಾಯ

ಸನ್ಮಾನ್ಯ ಶ್ರೀ ರಾಜ್ಯಪಾಲರು
ಕರ್ನಾಟಕ ಸರಕಾರ,

ರೈತ ವಿರೋಧಿ ಭೂ ಸುಧಾರಣೆ ತಿದ್ದುಪಡಿ ಸುಗ್ರೀವಾಜ್ಞೆ, ಎಪಿಎಂಸಿ ತಿದ್ದುಪಡಿ ಸುಗ್ರೀವಾಜ್ಞೆ, ಕಾರ್ಮಿಕ ವಿರೋಧಿ, ಕಾರ್ಮಿಕ ಕಾನೂನುಗಳ ತಿದ್ದುಪಡಿ ಸುಗ್ರೀವಾಜ್ಞೆ ಗಳ ವಿಧೇಯಕಗಳು ಕಳೆದ ವಿಧಾನ ಮಂಡಲದ ಅಧಿವೇಶನದಲ್ಲಿ ಶಾಸನ ಸಭೆಯ ಅನುಮೋದನೆ ಪಡೆಯಲು ವಿಫಲವಾಗಿವೆ. ಮಾತ್ರವಲ್ಲಾ, ರಾಜ್ಯದಾದ್ಯಂತ ರೈತರು, ಕೂಲಿಕಾರರು, ಕಾರ್ಮಿಕರು, ಪ್ರಗತಿಪರ ನಾಗರೀಕರು, ವಿರೋದ ಪಕ್ಷಗಳು ತೀವ್ರವಾಗಿ ಬೀದಿಗಿಳಿದು ಪ್ರತಿರೋಧಿಸಿವೆ. ಅಲ್ಲೂ ಜನಗಳ ವಿಶ್ವಾಸ ಗಳಿಸುವಲ್ಲಿ ಅವು ತೀವ್ರವಾಗಿ ಸೋತಿವೆ.

ಈ ಹಿನ್ನೆಲೆಯಲ್ಲಿ ಮತ್ತೆ ಸದರಿ ವಿಧೇಯಕಗಳನ್ನು ಪುನಃ ಹಿಂಬಾಗಿಲಿನಿಂದ ಮರಳಿ ಸುಗ್ರೀವಾಜ್ಞೆಗಳಾಗಿ ಜಾರಿಗೆ ತರಲು ಮಂತ್ರಿಮಂಡಲ ಕ್ರಮವಹಿಸಿರುವುದು ತೀವ್ರ ಖಂಡನೀಯವಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು 2017ರಲ್ಲಿ 'ಕೃಷ್ಣಕುಮಾರ್ ಸಿಂಗ್ ಮತ್ತು ಬಿಹಾರ ಸರ್ಕಾರ' ಪ್ರಕರಣದಲ್ಲಿ ಶಾಸನ ಸಭೆಯ ಅನುಮೋದನೆ ಪಡೆಯದ ಸುಗ್ರೀವಾಜ್ಞೆಗಳನ್ನು ಪುನರ್ ಸುಗ್ರೀವಾಜ್ಞೆಯಾಗಿ ಹೊರಡಿಸುವುದು 'ಸಂವಿಧಾನಕ್ಕೆ ಎಸಗುವ ವಂಚನೆಯಾಗಿದೆ' ಎಂದಿದೆ.

ಆದಾಗಲೂ, ರಾಜ್ಯ ಸರಕಾರ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವಿರುದ್ದವಾಗಿ ಕ್ರಮವಹಿಸಲು ಮುಂದಾಗಿದೆ.

ಆದ್ದರಿಂದ, ಯಾವುದೇ ಕಾರಣಕ್ಕೂ ರಾಜ್ಯ ಸಚಿವ ಸಂಪುಟದ 1.10.2020 ರ ಶಿಫಾರಸ್ಸಿನಂತೆ ರೈತ ವಿರೋಧಿ, ಕಾರ್ಮಿಕ ವಿರೋಧಿ ತ್ರಿವಳಿ ಸುಗ್ರೀವಾಜ್ಞೆಗಳನ್ನು ಸಂವಿಧಾನ ವಿರೋಧಿಯಾಗಿ, ಮರಳಿ ಹೊರಡಿಸಬಾರದೆಂದು ಮತ್ತು ಅವುಗಳನ್ನು ತಡೆ ಹಿಡಿಯಬೇಕೆಂದು ನಾವು ಆಗ್ರಹಿಸುತ್ತೇವೆ.

ಯು. ಬಸವರಾಜ, ಕಾರ್ಯದರ್ಶಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)
ಸಾತಿ ಸುಂದರೇಶ್, ಕಾರ್ಯದರ್ಶಿ, ಭಾರತ ಕಮ್ಯುನಿಸ್ಟ್ ಪಕ್ಷ
ಶಿವಶಂಕರ್ ಜಿ.ಆರ್., ಕಾರ್ಯದರ್ಶಿ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್
ಕ್ಲಿಫ್ಟನ್, ಕಾರ್ಯದರ್ಶಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ, ಲೆನಿನ್‌ವಾದಿ) ಲಿಬರೇಷನ್
(15–10–2020)

ಆಯ್ಕೆಯಾದ ಪಿಯು ಉಪನ್ಯಾಸಕ ಅಭ್ಯರ್ಥಿಗಳ ಹೋರಾಟಕ್ಕೆ ಎಸ್‌ಎಫ್‌ಐ ಬೆಂಬಲ



ರಾಜ್ಯ ಸರ್ಕಾರವು 1203 ಪದವಿಪೂರ್ವ ಶಿಕ್ಷಣ ಉಪನ್ಯಾಸಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ 15.10.2020 ಕ್ಕೆ ಒಂದು ವರ್ಷ ಪೂರ್ಣಗೊಳ್ಳುತ್ತಿದ್ದರೂ ನೇಮಕಾತಿ ಆದೇಶ ನೀಡದೆ ಕರೋನಾ ನೆಪದಲ್ಲಿ ಸತಾಯಿಸುತ್ತಿರುವುದನ್ನು ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ (ಎಸ್‌ಎಫ್‌ಐ), ಕರ್ನಾಟಕ ರಾಜ್ಯ ಸಮಿತಿ ಖಂಡಿಸಿತ್ತು.

ಪಿಯು ಬೋರ್ಡ್ ಮುಂದೆ ಕಳೆದ ನಾಲ್ಕು ದಿನಗಳಿಂದ ಧರಣಿ ನಡೆಸುತ್ತಿರುವ ಆಯ್ಕೆಯಾದ ಪಿಯು ಉಪನ್ಯಾಸಕ ಅಭ್ಯರ್ಥಿಗಳ ಹೋರಾಟವನ್ನು ಬೆಂಬಲಿಸಿ ಮಾತನಾಡಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಾಸುದೇವರೆಡ್ಡಿ ಕೂಡಲೇ ನೇಮಕಾತಿ ಆದೇಶ ನೀಡಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಒತ್ತಾಯಿಸಿದರು.

ನೇಮಕಾತಿ ನಿಯಮಾವಳಿಗಳ ಅನುಸಾರ ಅಭ್ಯರ್ಥಿಗಳಿಗೆ ಆಯ್ಕೆಯಾದ ಒಂದು ವರ್ಷದಲ್ಲಿ ನೇಮಕಾತಿ ಆದೇಶ ನೀಡಬೇಕಿದೆ. ಇದನ್ನೇ ಮಾನ್ಯ ಉಚ್ಛ ನ್ಯಾಯಾಲಯವು ಸಹಾ ಪ್ರತಿಪಾದಿಸಿದೆ. ಹಾಗಿದ್ದರೂ ಸಹಾ ರಾಜ್ಯ ಸರ್ಕಾರವು ಕೊರೋನ ನೆಪಮಾಡಿ ನೇಮಕಾತಿ ಆದೇಶ ನೀಡಿದ ಮೇಲೆ ವೇತನ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ನೇಮಕಾತಿ ಆದೇಶ ನೀಡದೆ ಸತಾಯಿಸುತ್ತಿರುವುದು ಶಿಕ್ಷಣ ವಿರೋಧಿ ನೀತಿ ಎಂದು ಟೀಕಿಸಿದರು.

ರಾಜ್ಯ ಸರ್ಕಾರವು ವಿವಿಧ ಲಾಭಿಗಳಿಗೆ ಮಣಿದು ತನಗೆ ಬೇಕಾದಂತೆ ಸುಗ್ರೀವಾಜ್ಞೆಗಳನ್ನು ಹೊರಡಿಸಿ ಕಾಯ್ದೆಗಳನ್ನು ತಿದ್ದುಪಡಿ ಮಾಡುತ್ತಿದೆ. ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತರಲು ಅಥವಾ ನೇಮಕಾತಿ ಆದೇಶ ನೀಡಿ ವೇತನ ನೀಡಲು ಅಗತ್ಯ ಆಸಕ್ತಿ ತೋರುತ್ತಿಲ್ಲ. ಬಹುತೇಕ ಬಡ, ಗ್ರಾಮೀಣ, ದಲಿತ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿರುವ ರಾಜ್ಯದ ಸರ್ಕಾರಿ ಪಿಯು ಕಾಲೇಜಿಗಳಲ್ಲಿ ಉಪನ್ಯಾಸಕರ ಕೊರತೆಯಿಂದ ಗುಣಮಟ್ಟದ ಬೋಧನೆ ಸಿಗುತ್ತಿಲ್ಲ. ಹೀಗಿರುವಾಗ ಐದು ವರ್ಷಗಳ ಹಿಂದೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವಲ್ಲಿ ರಾಜ್ಯ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ತೀವ್ರ ಅನ್ಯಾಯವಾಗಿದೆ.

ಈಗಾಗಲೇ ಈ ಶೈಕ್ಷಣಿಕ ವರ್ಷದ ದಾಖಲಾತಿ, ಆನ್ ಲೈನ್ ತರಗತಿಗಳು ಪ್ರಾರಂಭವಾಗಿದ್ದು ಸ್ಥಳ ಆಯ್ಕೆಯಾಗಿ ಸ್ಥಳ ನಿಗದಿಯಾಗಿರುವ ಪಿಯು ಉಪನ್ಯಾಸಕರಿಗೆ ಆದೇಶ ಪ್ರತಿ ನೀಡಿಲ್ಲ ಇದರಿಂದ ವಿದ್ಯಾರ್ಥಿಗಳಲ್ಲಿ ಸರ್ಕಾರ ಆತಂಕ ಮೂಡಿಸಿದೆ. ಜೊತೆಗೆ ಉದ್ಯೋಗದ ಭರವಸೆಯಲ್ಲಿರುವ ವಿದ್ಯಾವಂತ ಪದವಿಪೂರ್ವ ಶಿಕ್ಷಣ ಉಪನ್ಯಾಸಕ ಅಭ್ಯರ್ಥಿಗಳು ಆತಂಕಕ್ಕೆ ಒಳಗಾಗಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ರಾಜ್ಯಸರ್ಕಾರ ಕೇವಲ ಭರವಸೆ ನೀಡುವ ಬದಲು ನೇಮಕಾತಿ ಆದೇಶ ನೀಡಲು ತಕ್ಷಣ ಅಗತ್ಯ ಕ್ರಮವಹಿಸಬೇಕು ಇಲ್ಲದಿದ್ದರೆ ಎಸ್‌ಎಫ್‌ಐ ರಾಜ್ಯ ವ್ಯಾಪ್ತಿ ವಿದ್ಯಾರ್ಥಿಗಳನ್ನು ಬೀದಿಗಿಳಿಸಿ ಹೋರಾಟಕ್ಕೆ ಮುಂದಾಗುತ್ತದೆ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷರು ಶಿವಕುಮಾರ್ ಮ್ಯಾಗಳಮನಿ, ಬೆಂಗಳೂರು ಜಿಲ್ಲಾ ಜಂಟಿ ಕಾರ್ಯದರ್ಶಿ ಸಾಗರ್ ಹಾಗೂ ಧರಣಿ ನಿರತರು ಇದ್ದರು.

ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ನಗರ ಸಭೆಗೆ ನಾಗರಿಕರ ಸಾಮೂಹಿಕ ಮನವಿ

ಉಡುಪಿ ನಗರ ಸಭೆ ವ್ಯಾಪ್ತಿಯ ಗೋಪಾಲಪುರ ವಾರ್ಡಿನ ತೆಂಕು ನಯಂಪಳ್ಳಿ ಪ್ರದೇಶದ ನಾಗರಿಕರ ಮೂಲಭೂತ ಸೌಕರ್ಯಕ್ಕಾಗಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಉಡುಪಿ ನಗರ ಸಭೆ ಪೌರಾಯುಕ್ತರಿಗೆ ಸಾಮೂಹಿಕವಾಗಿ ಮನವಿ ಸಲ್ಲಿಸುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳಾದ ಹಿರಿಯ ನಾಗರಿಕ ಎಸ್. ಶಾಂತಾರಾಮ ಪೈ ರವರ ನೇತೃತ್ವದಲ್ಲಿ ವಾಲ್ಟರ್ ಸಿರಿಲ್ ಪಿಂಟೊ, ಎಚ್.ಉಮೇಶ ನಾಯಕ್, ಗಣೇಶ ಕೆ ಸೆಟ್ಟಿಗಾರ್, ಕಿರಣ್ ಗಾಣಿಗ, ಉಮೇಶ ವಿ ನಾಯಕ್ ಮತ್ತು ಕೋಣಿ ವೆಂಕಟೇಶ್ ನಾಯಕ್ ಮೊದಲಾದವರು ಮನವಿ ಸಲ್ಲಿಸಿದ್ದರು.

ಬೀದಿ ಬದಿ ಹಾಗೂ ಮನೆ ಮನೆ ಮೀನು ಮಾರಾಟ ನಿಷೇಧಕ್ಕೆ ವಿರೋಧ



ಉಡುಪಿ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘ ಉಡುಪಿ ಜಿಲ್ಲೆ ಹಾಗೂ ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ (ಸಿಪಿಐಎಂ) ಉಡುಪಿ ತಾಲ್ಲೂಕು ಸಮಿತಿ. ನಿಯೋಗವು ಇಂದು ಉಡುಪಿ ನಗರಸಭೆ ಕಮೀಷನರ್ ಹಾಗೂ ಉಡುಪಿಯ ಅಪಾರ ಜಿಲ್ಲಾಧಿಕಾರಿ ಭೇಟಿ ಮಾಡಿ ಬೀದಿ ಬದಿ ಹಾಗೂ ಮನೆ ಮನೆ ಮೀನು ಮಾರಟ ಮಾಡುವುದ್ದನ್ನು ಉಡುಪಿ ನಗರಸಭೆ ವ್ಯಾಪ್ತಿಯಲ್ಲಿ ನಿಷೇಧಿಸುದ್ದನ್ನು ವಿರೋಧಿಸಿ ಚರ್ಚೆ ನಡೆಸಿ ಮನವಿ ನೀಡಲಾಯಿತು ಅಪಾರ ಜಿಲ್ಲಾಧಿಕಾರಿಯವರಲ್ಲಿ ಚರ್ಚೆ ನಡೆಸಿ ಮಣಿಪಾಲ, ಪೆರಂಪಳ್ಳಿ, ಕಿನ್ನಿ ಮುಲ್ಕಿ ಹಾಗೂ ಕೆಲವು ಪ್ರಮುಖ ಪ್ರದೇಶದಲ್ಲಿ ಮೀನು ಮಾರುಕಟ್ಟೆ ಕಟ್ಟಡ ನಿರ್ಮಾಣದ ಸ್ಥಳ ಗುರುತಿಸುವ ಬಗ್ಗೆ ಚರ್ಚೆ ನಡೆಸಲಾಯಿತು.

ನಿಯೋಗದಲ್ಲಿ ಮೀನುಗಾರರ ಸಂಘದ ಅಧ್ಯಕ್ಷರಾದ ಕೆ. ಶಂಕರ್, ಕಾರ್ಯದರ್ಶಿ ಕವಿರಾಜ್ .ಎಸ್, ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಶಶಿಧರ್ ಗೊಲ್ಲ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ, ಹಾಗೂ AIAWU ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್ ಕೋಣಿ ಉಪಸ್ಥಿತರಿದ್ದರು.

ಕಾರ್ಷಿಕ ಸುಧಾರಣೆಗಳಿಗಾಗಿ, ಭಾರತೀಯ ಪ್ರಭುತ್ವದ ಸಂರಚನೆಯನ್ನು ಹೆಚ್ಚು ಒಕ್ಕೂಟದ ಹಾದಿಯಲ್ಲಿ ಮರುರೂಪಿಸಲು ಮಾಡಿದ ಹೋರಾಟ ಮತ್ತು ಆಳುವ ವರ್ಗಗಳ ದಮನದ ಎದುರು ಪ್ರಜಾಪ್ರಭುತ್ವವನ್ನು ಗಾಢವಾಗಿಸಲು ನಿರಂತರವಾಗಿ ಶ್ರಮಿಸಿರುವುದು – ಕಮ್ಯುನಿಸ್ಟ್ ಚಳುವಳಿಯ ಈ ಶ್ರೀಮಂತ ಪರಂಪರೆಯನ್ನು ನಾವು ಮುಂದಕ್ಕೆ ಕೊಂಡೊಯ್ಯಬೇಕಾಗಿದೆ. ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಗೆ ಹಿಂದೆ ಎಂದೂ ಈಗಿನಷ್ಟು ಗಂಭೀರವಾದ ಆಪತ್ತು ಇರಲಿಲ್ಲ. ಪ್ರಜಾಪ್ರಭುತ್ವ ರಕ್ಷಣೆಯಲ್ಲಿ ಮತ್ತು ಎಲ್ಲಾ ಪ್ರಜಾಪ್ರಭುತ್ವ–ವಿರೋಧಿ ಶಾಸನಗಳು ಮತ್ತು ಕ್ರಮಗಳನ್ನು ವಿರೋಧ ಮಾಡುವಲ್ಲಿ ದೀರ್ಘ ದಾಖಲೆ ಹೊಂದಿರುವ ಕಮ್ಯುನಿಸ್ಟರು ಇವತ್ತು ಸವಾಲನ್ನು ಎದುರಿಸಲು ಎದ್ದು ನಿಲ್ಲಬೇಕಿದೆ. ಪ್ರಜಾಪ್ರಭುತ್ವ ಮತ್ತ ಸಾಂವಿಧಾನಿಕ ಹಕ್ಕುಗಳ ರಕ್ಷಣೆಗಾಗಿ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸಲು ವೇಗವರ್ಧಕ ಪಾತ್ರ ವಹಿಸಬೇಕಾಗಿದೆ.

ಪ್ರಕಾಶ್ ಕಾರಟ್

ಕಮ್ಯುನಿಸ್ಟರು ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಟ



1947ರ ಸ್ವಾತಂತ್ರ್ಯದ ಸಮಯದಲ್ಲಿ ಭಾರತವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ದೇಶವಾಗಿತ್ತು – 200 ವರ್ಷಗಳ ವಸಾಹತು ಆಳ್ವಿಕೆಯಿಂದಾಗಿ ಪರಿಸ್ಥಿತಿ ಇನ್ನಷ್ಟು ತೀವ್ರವಾಗಿತ್ತು. ಸ್ವಾತಂತ್ರ್ಯ ಸಮಯದಲ್ಲಿ ಈಡೇರದೆ ಬಾಕಿ ಉಳಿದಿದ್ದ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವ ಕಾರ್ಯವು ಕಮ್ಯುನಿಸ್ಟ್ ಪಕ್ಷಕ್ಕೆ ಪ್ರಮುಖ ಪ್ರಶ್ನೆಯಾಗಿತ್ತು. ಸಮಾಜದ ಪ್ರಜಾಸತ್ತಾತ್ಮಕ ಪರಿವರ್ತನೆಯು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಹೊಂದಿತ್ತು.

ಬಂಡವಾಳಶಾಹಿ ಪಕ್ಷಗಳಿಗಿಂತ ಭಿನ್ನವಾಗಿ, ಕಮ್ಯುನಿಸ್ಟರಿಗೆ ವಯಸ್ಕ ಮತದಾನದ ಆಧಾರದಲ್ಲಿನ ಮತದಾನದ ಹಕ್ಕಿನೊಂದಿಗಿನ ಚುನಾವಣಾ ಪ್ರಜಾಪ್ರಭುತ್ವ ಮಾತ್ರವೇ ಪ್ರಜಾಪ್ರಭುತ್ವವಲ್ಲ. ಪ್ರಜಾಪ್ರಭುತ್ವಕ್ಕೇ ಅದು ಮಾತ್ರವೇ ಸಾಲದು. ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಗಳ ಆಧಾರದಲ್ಲಿನ ವರ್ಗ ಶೋಷಣೆ ಮತ್ತು ಸಾಮಾಜಿಕ ದಬ್ಬಾಳಿಕೆಗಳ ಅಂತ್ಯವನ್ನು ಪ್ರಜಾಪ್ರಭುತ್ವ ಒತ್ತಾಯಿಸುತ್ತದೆ. ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯಿಲ್ಲದೆ, ಭಾರತದಲ್ಲಿನ ಪ್ರಜಾಪ್ರಭುತ್ವವು, ಡಾ.ಅಂಬೇಡ್ಕರ್ ತೀಕ್ಷ್ಣವಾಗಿ ಟೀಕಿಸಿದಂತೆ "ಪ್ರಜಾಪ್ರಭುತ್ವವಿರೋಧಿಯಾದ ಮಣ್ಣಿ ಮೇಲೆ ಮೇಲ್ಪದರದಲ್ಲಿ ಅಂದವಾಗಿ ಹರಡಿದಂತೆ ಕಾಣುವಂಥದು"ಆಗಿದೆ

ಪ್ರಾರಂಭದಿಂದಲೂ, ಬಂಡವಾಳಶಾಹಿ–ಭೂಮಾಲಕ ಮೈತ್ರಿಕೂಟದ ವರ್ಗ ಆಳ್ವಿಕೆಯಿಂದಾಗಿ ನಿರ್ಬಂಧಕ್ಕೊಳಪಟ್ಟಿದ್ದ ಮತ್ತು ವಿಕೃತಗೊಂಡಿದ್ದ ಪ್ರಜಾಪ್ರಭುತ್ವವನ್ನು ಕಮ್ಯುನಿಸ್ಟರು ಗಾಢವಾಗಿಸಲು ಮತ್ತು ವಿಶಾಲವಾಗಿಸಲು ಶ್ರಮಿಸಿದರು. ಈ ನಿಟ್ಟಿನಲ್ಲಿ ಕೆಲವು ಪ್ರಮುಖ ಕೊಡುಗೆಗಳೆಂದರೆ ಕಾರ್ಷಿಕ ಸಂಬಂಧಗಳ ಪ್ರಜಾಸತ್ತಾತ್ಮಕ ಮಾರ್ಪಾಟಿಗಾಗಿ ಭೂಸುಧಾರಣೆಗಾಗಿನ ಹೋರಾಟವಾಗಿದೆ; ರಾಜ್ಯಗಳನ್ನು ಭಾಷಾವಾರು ಆಧಾರದಲ್ಲಿ ಪುನರ್ ಸಂಘಟನೆ ಮಾಡಿದ್ದು, ಪಂಚಾಯತ್ ವ್ಯವಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ವಿಕೇಂದ್ರೀಕರಣ ಹಾಗೂ ಸಾಂಸ್ಥೀಕರಣ ಮಾಡಿದ್ದು ಮತ್ತು ಸತತವಾಗಿ ಪ್ರಜಾಪ್ರಭುತ್ವ ಹಕ್ಕುಗಳ ಸಂರಕ್ಷಣೆ, ಬಹು ಮುಖ್ಯವಾಗಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಿದ್ದು.

ಪ್ರಜಾಸತ್ತಾತ್ಮಕ ಮಾರ್ಪಾಟಿಗಾಗಿ ಭೂ ಸುಧಾರಣೆಗಳು

ಸ್ವಾತಂತ್ರ್ಯದ ಸಮಯದಲ್ಲಿ, ಜಮೀನುದಾರರು ಮತ್ತು ಭೂಮಾಲಕರಂತಹ ಸಣ್ಣ ವಲಯದವರ ಕೈಯಲ್ಲಿ ಅಗಾಧ ಜಮೀನುಗಳು ಕೇಂದ್ರೀಕೃತವಾಗಿದ್ದವು. ಕಾಂಗ್ರೆಸ್ ಸರ್ಕಾರವು, ಪ್ರಭುತ್ವದಲ್ಲಿ ಬಂಡವಾಳಶಾಹಿ–ಭೂಮಾಲಕ ಮೈತ್ರಿಕೂಟದ ಕಾರಣ, ಭೂಮಾಲಕತ್ವವನ್ನು ರದ್ದುಮಾಡಲು ಇಷ್ಟಪಡಲಿಲ್ಲ ಮತ್ತು ಭೂಸುಧಾರಣೆಯನ್ನು ಸೀಮಿತ ರೀತಿಯಲ್ಲಿ ಜಾರಿ ಮಾಡಲು ಮುಂದಾಯಿತು, ಅದು ಭೂಮಾಲಕರು ಮತ್ತು ಶ್ರೀಮಂತ ರೈತರಿಗೆ ಅನುಕೂಲವಾಯಿತು. ಜಮೀನುದಾರಿ ಪದ್ಧತಿಯನ್ನು ಕಾನೂನುಬದ್ಧವಾಗಿ ರದ್ದುಮಾಡಿದ ನಂತರ ಕೂಡ, ಹಿಂದಿನ ಜಮೀನುದಾರರ ಬಳಿಯೇ ದೊಡ್ಡ ಪ್ರಮಾಣದ ಜಮೀನುಗಳು ಇದ್ದವು. 1954ರಲ್ಲಿ ಮಾಡಿದ ಮೊದಲ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ ಶೇಕಡಾ 3.7ರಷ್ಟು ಗ್ರಾಮೀಣ ಕುಟುಂಬಗಳ ನಿಯಂತ್ರಣದಲ್ಲಿ ಒಟ್ಟು ಜಮೀನಿನ ಶೇಕಡಾ 37 ರಷ್ಟು ಇದ್ದವು, ಅದೇ ಕಡಿಮೆ ಅಂದಾಜಾಗಿತ್ತು.

ಭೂಮಾಲಕತ್ವವನ್ನು ದುರ್ಬಲಗೊಳಿಸಲು ಮತ್ತು ಕಾರ್ಷಿಕ ಸಂಬಂಧಗಳಲ್ಲಿ ಪ್ರಜಾಸತ್ತಾತ್ಮಕ ಪರಿವರ್ತನೆ ತರಲು ಭೂಸುಧಾರಣೆಯು ಕಮ್ಯುನಿಸ್ಟರಿಗೆ ಮೂಲಘೋಷಣೆಯಾಗಿ ಪರಿಣಮಿಸಿತು. ಭೂಸುಧಾರಣೆಗಾಗಿನ ಹೋರಾಟಗಳು ಮತ್ತು ಭೂಮಿತಿಗೆ ಮೀರಿದ ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ವಿತರಿಸಲು; ಒಕ್ಕಲೆಬ್ಬಿಸುವುದನ್ನು ನಿಲ್ಲಿಸಲು, ಭಾಗೀದಾರರ ಭೂಉತ್ಪನ್ನಗಳ ಪಾಲನ್ನು ಹೆಚ್ಚಿಸಲು ಮುಂತಾದ ಪ್ರಶ್ನೆಗಳ ಮೇಲೆ ದೇಶದ ವಿವಿಧ ಭಾಗಗಳಲ್ಲಿ ಹೋರಾಟಗಳನ್ನು ಬೆಳೆಸಲಾಯಿತು.

ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷವು ಚುನಾವಣೆಯಲ್ಲಿ ಗೆದ್ದು ಸರ್ಕಾರವನ್ನು ರಚಿಸಿದಾಗ ಮೊದಲ ಜಯ ಲಭಿಸಿತು. ಮೊದಲ ಕಮ್ಯುನಿಸ್ಟ್ ಸಚಿವ ಸಂಪುಟವು ಭೂಸುಧಾರಣಾ ಕ್ರಮಗಳನ್ನು ಜಾರಿಮಾಡಿತು, ಆ ಮೂಲಕ ಗೇಣಿ ಸಾಗುವಳಿದಾರರು ಭೂಮಾಲಕರಿಗೆ ಕನಿಷ್ಠ ಪರಿಹಾರ ನೀಡಿ ಜಮೀನನ್ನು ಪಡೆದರು. ಕೇಂದ್ರ ಸರ್ಕಾರವು ಕಮ್ಯುನಿಸ್ಟ್ ಸರ್ಕಾರವನ್ನು ವಜಾ ಮಾಡುವಲ್ಲಿ ಭೂಮಾಲಕರ ಮತ್ತು ಪ್ರತಿಗಾಮಿ ಹಿತಾಸಕ್ತಿಗಳ ವಿರೋಧವು ಒಂದು ಕಾರಣವಾಗಿತ್ತು.

ಭೂ ಹೋರಾಟಗಳ ಮುಂದಿನ ಅಲೆಯು ಪಶ್ಚಿಮ ಬಂಗಾಳದಲ್ಲಿ 1967ರಿಂದ 1969ರವರೆಗೆ ಎದ್ದಿತು. ಮೊದಲ ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ, ಜೋತೆದಾರರ ವಿರುದ್ಧ ಅವರು ಹಿಡಿದಿಟ್ಟುಕೊಂಡಿದ್ದ ಬೇನಾಮಿ ಜಮೀನುಗಳನ್ನು ವಶಪಡಿಸಿಕೊಳ್ಳಲು ದೊಡ್ಡ ಹೋರಾಟಗಳಾದವು. ತದನಂತರ ಎಡರಂಗ ಸರ್ಕಾರವು 1977ರಲ್ಲಿ ಅಧಿಕಾರಕ್ಕೆ ಬಂದಾಗ ಪಾಲುಬೆಳೆಗಾರರಿಗೆ(ಶೇರ್‌ಕ್ರಾಪರ್ಸ್) ಸಂಬಂಧಪಟ್ಟ ಮೊದಲ ಐತಿಹಾಸಿಕ ಶಾಸನವನ್ನು ಅಂಗೀಕರಿಸಿತು. ಅದು ಬರ್ಗಾದಾರರಿಗೆ 75% ಉತ್ಪನ್ನಗಳನ್ನು ತಾವೇ ಇಟ್ಟುಕೊಳ್ಳಲು ಮತ್ತು ಅವುಗಳ ನೋಂದಾವಣೆ ಮೂಲಕ ಒಕ್ಕಲೆಬ್ಬಿಸುವುದರಿಂದ ರಕ್ಷಣೆಯ ಹಕ್ಕನ್ನು ಅದು ನೀಡಿತು. ಮಿತಿಗಿಂತ ಹೆಚ್ಚುವರಿ ಇದ್ದ ಭೂಮಿಯನ್ನು ವಶಕ್ಕೆ ಪಡೆಯಲಾಯಿತು ಮತ್ತು 12 ಲಕ್ಷ ಎಕರೆ ಜಮೀನನ್ನು 25 ಲಕ್ಷ ಭೂಹೀನರಿಗೆ ಹಾಗೂ ಅಂಚಿನಲ್ಲಿದ್ದ ಸಾಗುವಳಿ ಕುಟುಂಬಗಳಿಗೆ ಮರುಹಂಚಿಕೆ ಮಾಡಲಾಯಿತು.

ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿನ ಎಡ ನೇತೃತ್ವದ ಸರ್ಕಾರಗಳ ಅಡಿಯಲ್ಲಿ, ಭೂಸುಧಾರಣೆ ಜಾರಿಯು ಮುನ್ನಡೆಯಲ್ಲಿದೆ ಮತ್ತು ಕಾರ್ಷಿಕ ಸಂಬಂಧಗಳಲ್ಲಿ ಮುಖ್ಯವಾದ ಬದಲಾವಣೆಗಳನ್ನು ತರಲಾಗಿದೆ. ಬೇರೆ ರಾಜ್ಯಗಳಲ್ಲಿ ಆಗದಿದ್ದುದು ಕಮ್ಯುನಿಸ್ಟ್ ಚಳುವಳಿಯ ಕಾರಣದಿಂದಾಗಿ ಈ ಮೂರು ರಾಜ್ಯಗಳಲ್ಲಿ ಭೂಸುಧಾರಣೆ ಜಾರಿಗೆ ತರಲಾಗಿದೆ.

ಪಕ್ಷ ಮತ್ತು ಕಿಸಾನ್ ಸಭಾವು ಬಿಹಾರ, ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮತ್ತು ಇತರ ಸ್ಥಳಗಳಲ್ಲಿ ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಜಮೀನಿಗಾಗಿ ಹಲವಾರು ಹೋರಾಟಗಳನ್ನು ನಡೆಸಿದೆ. ಈ ಹೋರಾಟಗಳ ಪರಿಣಾಮದಿಂದಾಗಿ ಮತ್ತು ಮುಖ್ಯವಾಗಿ 1970ರ ಮತ್ತು 80ರ ಆದಿಭಾಗದಲ್ಲಿ ಮೂರು ಎಡನೇತೃತ್ವದ ರಾಜ್ಯ ಸರ್ಕಾರಗಳು ಇತಿಮಿತಿಯ ಭೂಸುಧಾರಣೆಗಳನ್ನು ಜಾರಿ ಮಾಡುವುದರ ಮೂಲಕ ತೋರಿದ ಮಾದರಿಯಿಂದಾಗಿ ದೇಶದ ಉಳಿದ ಕಡೆಗಳಲ್ಲಿಯೂ ಅವು ಜಾರಿಯಾಗುತ್ತಿವೆ.

ಕಾರ್ಷಿಕ ಸಂಬಂಧಗಳಲ್ಲಿ ಪ್ರಜಾಸತ್ತಾತ್ಮಕ ಪರಿವರ್ತನೆಗಾಗಿನ ಹೋರಾಟಗಳಲ್ಲಿ ಕಮ್ಯುನಿಸ್ಟ್ ಚಳುವಳಿಯು ಪ್ರಧಾನ ಪಾತ್ರ ವಹಿಸಿದೆ ಮತ್ತು ಕೊನೇ ಪಕ್ಷ ಆ ಮೂರು ರಾಜ್ಯಗಳಲ್ಲಿ ಯಶಸ್ಸನ್ನು ಸಾಧಿಸಿವೆ.


ಒಕ್ಕೂಟವಾದದ ಆಧಾರದಲ್ಲಿ ಭಾಷಾವಾರು ರಾಜ್ಯಗಳ ಸ್ಥಾಪನೆ

ಸ್ವಾತಂತ್ರ್ಯದ ಸಂದರ್ಭದಲ್ಲಿ, ಬ್ರಿಟಿಷ್ ಆಡಳಿತದ ಅಡಿಯಲ್ಲಿ ಮೂರು ಬಹು–ಭಾಷಾ ಪ್ರಾಂತಗಳು ಇದ್ದವು ಮತ್ತು ಹಲವಾರು ಬಗೆಯ ರಾಜರ ಸಂಸ್ಥಾನಗಳು ಹೆಚ್ಚಿನ ಸಂಖ್ಯೆಗಳಲ್ಲಿದ್ದವು. ಭಾಷಾ ರಾಷ್ಟ್ರೀಯತೆಯ ಆಧಾರದಲ್ಲಿ ಜನರಿಗೆ ಅವರದೇ ಆದ ಭಾಷಾವಾರು ಪ್ರಾಂತಗಳನ್ನು ಒದಗಿಸಬೇಕೆನ್ನುವುದು ಸ್ವಾತಂತ್ರ್ಯ ಚಳುವಳಿಯ ಬಹು ಮುಖ್ಯ ಗುರಿಗಳಲ್ಲಿ ಒಂದಾಗಿತ್ತು. 1920ರಷ್ಟು ಮುಂಚೆಯೇ, ಕಾಂಗ್ರೆಸ್ ಪಕ್ಷವು ಗಾಂಧೀಜಿಯವರ ಮುತುವರ್ಜಿಯಿಂದಾಗಿ ಭಾಷಾವಾರು ಆಧಾರದಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಗಳನ್ನು ರಚಿಸಿತ್ತು. ಆನಂತರ, ಸ್ವಾತಂತ್ರ್ಯಾನಂತರ ಭಾಷಾವಾರು ರಾಜ್ಯಗಳ ರಚನೆಗೆ ಕಾಂಗ್ರೆಸ್ ಬದ್ಧವಾಗಿತ್ತು. ಆದರೆ, ಸ್ವತಂತ್ರ ಭಾರತದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ, ನೆಹರೂ ಸರ್ಕಾರವು ಈ ಭರವಸೆಯಿಂದ ಹಿಂದಕ್ಕೆ ಸರಿಯಿತು. ಏಕೀಕೃತ ಮಾರುಕಟ್ಟೆಯನ್ನು ಹೊಂದಬೇಕೆಂಬ ತಮ್ಮ ಆಶಯಕ್ಕೆ ಅದು ಅಡಚಣೆಯಾಗಬಹುದು ಎಂದೆಣಿಸಿದ ದೊಡ್ಡ ಬಂಡವಾಳಶಾಹಿಗಳು ಮತ್ತವರ ಪ್ರತಿನಿಧಿಗಳು ಭಾಷಾವಾರು ರಾಜ್ಯಗಳ ರಚನೆಯನ್ನು ವಿರೋಧಿಸಿದರು.

ಭಾಷೆಯ ಸಂಬಂಧದ ರಾಷ್ಟ್ರೀಯ ತತ್ವಕ್ಕೆ ಮಾನ್ಯತೆ ನೀಡುವ ತನ್ನ ರಾಷ್ಟ್ರೀಯ ನೀತಿಯನ್ನು ಕಮ್ಯುನಿಸ್ಟ್ ಪಕ್ಷವು ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ವಿಶದಪಡಿಸಿತ್ತು. ಭಾರತವು ಭಾಷಿಕ ತತ್ವದ ಆಧಾರದಲ್ಲಿನ ಎಲ್ಲಾ ರಾಜ್ಯಗಳ ಒಂದು ಒಕ್ಕೂಟವಾಗಬೇಕೆಂದು ಅದು ಬಯಸಿತ್ತು.

ಭಾರತೀಯ ಪ್ರಭುತ್ವದ ಸಂರಚನೆಯ ಪ್ರಜಾಪ್ರಭುತ್ವೀಕರಣದಲ್ಲಿ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಭದ್ರವಾಗಿಸಲು ಭಾಷಾವಾರು ರಾಜ್ಯಗಳ ರಚನೆಯು ಒಂದು ಮಹತ್ವದ ಹೆಜ್ಜೆಯಾಗಿದೆ. 1940ರಲ್ಲಿ, ಭಾಷಾವಾರು ರಾಜ್ಯಗಳ ರಚನೆಯನ್ನು ಒಂದು ಪ್ರಮುಖವಾದ ಪ್ರಜಾಸತ್ತಾತ್ಮಕ ಹಾಗೂ ಪಾಳೇಗಾರಿ–ವಿರೋಧಿ ಕೆಲಸವೆಂದುಕಮ್ಯುನಿಸ್ಟ್ ಮುಖಂಡರು ಸ್ಪಷ್ಟಪಡಿಸಿದ್ದರು. ಮದರಾಸು ಪ್ರಾಂತದ ಮಲಬಾರ್ ಮತ್ತು ತಿರುವಾಂಕೂರು ಹಾಗೂ ಕೊಚ್ಚಿ ರಾಜಸಂಸ್ಥಾನಗಳಲ್ಲಿರುವ ಮಲೆಯಾಳಿ ಮಾತನಾಡುವವರ ಆಧಾರದಲ್ಲಿ ಒಂದು ರಾಜ್ಯವನ್ನು ಹೊಂದುವ ಹಕ್ಕು ಒಂದೂವರೆ ಕೋಟಿ ಮಲೆಯಾಳಿಗಳಿಗೆ ಇದೆ ಎಂಬ ಕರಪತ್ರವೊಂದನ್ನು ಇಎಂಎಸ್ ನಂಬೂದಿರಿಪಾಡ್ ಬರೆದರು.

ಪಿ.ಸುಂದರಯ್ಯ ಅವರು 1946ರಲ್ಲಿ ಒಂದು ➚



ಸಿಪಿಐ(ಎಂ) ಮೊದಲ ಪೊಲಿಟ್‌ಬ್ಯೂರೋ ಸದಸ್ಯರು



ಕಿರುಹೊತ್ತಿಗೆಯನ್ನು ಬರೆದು **ವಿಶಾಲಾಂಧ್ರದ** ಕಲ್ಪನೆಯನ್ನು ಮಂಡಿಸಿದರು, ಅದು **ವಿಶಾಲಾಂಧ್ರ** ಚಳುವಳಿಗೆ ಪ್ರಭಾವಶಾಲಿ ಘೋಷಣೆಯಾಗಿ ಪರಿಣಮಿಸಿತು. ಇದು ಭಾಷಾವಾರು ರಾಜ್ಯಗಳ ಚಳುವಳಿಗೆ 1950ರ ಆದಿಯಲ್ಲಿ ಕೇಂದ್ರಬಿಂದುವಾಗಿ ಹೊರಹೊಮ್ಮಿತು. ಸೋಮನಾಥ್ ಲಹರಿ**ನತುನ್ ಬಂಗ್ಲಾ** ಬರೆದರು, ಅದು ಭಾಷಾವಾರು ತತ್ವದ ಆಧಾರದಲ್ಲಿ ಬಂಗಾಳ ರಾಜ್ಯದ ರಚನೆಗೆ ಆಕೃತಿ ರೇಖೆಯಾಗಿ ಪರಿಣಮಿಸಿತು.

ಭಾಷಾವಾರು ರಾಜ್ಯ ರಚನೆಗೆ ಕೇಂದ್ರ ಸರ್ಕಾರದ ನಿರಾಕರಣೆಯ ಹಿನ್ನೆಲೆಯಲ್ಲಿ, **ವಿಶಾಲಾಂಧ್ರ** (ತೆಲುಗು ಮಾತನಾಡುವವರಿಗೆ ಒಂದು ರಾಜ್ಯ ಎಂದು ಎಲ್ಲರನ್ನೂ ಒಗ್ಗೂಡಿಸುವ), **ಐಕ್ಯ ಕೇರಳ** ಮತ್ತು ನಂತರ **ಸಂಯುಕ್ತ ಮಹಾರಾಷ್ಟ್ರ, ಮಹಾಗುಜರಾತ್** ಹಾಗೂ **ಪಂಜಾಬಿ ಸುಬಾ**ಸೃಷ್ಟಿಗಾಗಿ ಚಳುವಳಿಗಳು ಬೆಳೆದವು.

ಆಂಧ್ರ ಪ್ರದೇಶ ಮತ್ತು ಸಂಯುಕ್ತ ಮಹಾರಾಷ್ಟ್ರಗಳ ರಚನೆಗಾಗಿಬೆಳೆದುಬಂದ ಸಾಮೂಹಿಕ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಕ್ಷ ಮುಖ್ಯ ಪಾತ್ರ ವಹಿಸಿದೆ.

ಕೇಂದ್ರೀಕೃತ ಸಂಯುಕ್ತ ರಾಜ್ಯವನ್ನು ಬಯಸಿದ ದೊಡ್ಡ ಬಂಡವಾಳಶಾಹಿಗಳು ಮತ್ತು ಆರ್.ಎಸ್.ಎಸ್. ನ ವಿರೋಧದ ಹೊರತಾಗಿಯೂ ಭಾಷಾವಾರು ರಾಜ್ಯಗಳಿಗಾಗಿನ ಎಲ್ಲಾ ಹೋರಾಟಗಳು ಯಶಸ್ವಿಯಾದವು. ಭಾಷಾ ಸಾಮರಸ್ಯದ ಆಧಾರದಲ್ಲಿ ರಚಿತವಾದ ಇಂದಿನ ಭಾರತದ ಒಕ್ಕೂಟವು ಒಂದು ಗಮನಾರ್ಹವಾದ ಸಾಧನೆ, ಅದರ ಕೀರ್ತಿಯನ್ನು ಕಮ್ಯುನಿಸ್ಟರು ಪಡೆಯಬಹುದು. ಒಕ್ಕೂಟ ವ್ಯವಸ್ಥೆಗಾಗಿ ಮತ್ತು ರಾಜ್ಯಗಳ ಹಕ್ಕುಗಳನ್ನು ಖಾತರಿಪಡಿಸಲು ಭಾರತದ ಪ್ರಭುತ್ವವನ್ನು ಪುನರ್ರೂಪಿಸುವ ಸಲುವಾಗಿನ ಹೋರಾಟಕ್ಕೆ ಬುನಾದಿಯನ್ನು ಕಮ್ಯುನಿಸ್ಟ್ ಪಕ್ಷ ಹಾಕಿತ್ತು.

ಅಧಿಕಾರಗಳ ವಿಕೇಂದ್ರೀಕರಣ

ಕೇಂದ್ರ–ರಾಜ್ಯಗಳ ಸಂಬಂಧಗಳನ್ನು ಪುನರ್ರೂಪಿಸುವ ಮೂಲಕ ರಾಜ್ಯಗಳ ಹಕ್ಕುಗಳಿಗಾಗಿ ಹೋರಾಟ ಮಾಡುವುದರ ಹೊರತಾಗಿ, ಅಧಿಕಾರಗಳನ್ನು ಪಂಚಾಯತಿ ರಾಜ್ ವ್ಯವಸ್ಥೆಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ವಿಕೇಂದ್ರೀಕರಿಸಬೇಕೆಂದು ಕಮ್ಯುನಿಸ್ಟರು ಪ್ರತಿಪಾದಿಸಿದರು. ಎಡರಂಗ ಸರ್ಕಾರವು ಅಧಿಕಾರಗಳನ್ನು ಮತ್ತು ಸಂಪನ್ಮೂಲಗಳನ್ನು ವರ್ಗಾಯಿಸುವುದರೊಂದಿಗೆ ಮೂರು ಹಂತದ ಪಂಚಾಯತ್ ವ್ಯವಸ್ಥೆಯನ್ನು ಆರಂಭಿಸಿತು. 1978ರಲ್ಲಿ, ಈ ಸಬಲಗೊಂಡ ಪಂಚಾಯತ್ ವ್ಯವಸ್ಥೆಗೆ ಚುನಾವಣೆಗಳನ್ನು ನಡೆಸಲಾಯಿತು. ಇದು ಸಂವಿಧಾನದ 73ನೇ ಹಾಗೂ 74ನೇ ತಿದ್ದುಪಡಿಗಳನ್ನು ಅಂಗೀಕರಿಸುವುದಕ್ಕೆ ಒಂದು ದಶಕಕ್ಕೆ ಮುಂಚೆ ಆಗಿದೆ. ತ್ರಿಪುರಾದಲ್ಲಿ ಕೂಡ, ಪಂಚಾಯತ್ ವ್ಯವಸ್ಥೆ ಮತ್ತು ಜತೆಯಲ್ಲೇ ಸಂವಿಧಾನದ ಆರನೇ ಪರಿಚ್ಛೇದದಡಿಯಲ್ಲಿ ಆದಿವಾಸಿ ಸ್ವಾಯತ್ತ ಜಿಲ್ಲಾ ಮಂಡಳಿಗಳ ಸ್ಥಾಪನೆಯುಬೇರು ಮಟ್ಟದ ಪ್ರಜಾಪ್ರಭುತ್ವದ ಪರಿಣಾಮಕಾರಿ ಸಾಧನವಾಗಿ ಪರಿಣಮಿಸಿದೆ. ಕೇರಳದಲ್ಲಿ, 1996ರಲ್ಲಿ ಎಲ್.ಡಿ.ಎಫ್.ಸರ್ಕಾರವು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದೊಂದಿಗೆ ವಿಕೇಂದ್ರೀಕೃತ ಆರ್ಥಿಕ ಯೋಜನೆಗಳಿಗಾಗಿ ಜನರ ಆಂದೋಲನ ಎಂಬ ಅಪರೂಪದ ಕ್ರಮವನ್ನು ಶುರುಮಾಡಿತು, ಅದು ಗ್ರಾಮ ಸಭಾಗಳ ಅಭಿಪ್ರಾಯಗಳೊಂದಿಗೆ ಕೆಳಗಿನಿಂದ ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆಯನ್ನು ಒಳಗೊಂಡಿತ್ತು.

ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಹೊಸ ಗಂಡಾಂತರ

ಕಮ್ಯುನಿಸ್ಟ್ ಪಕ್ಷವು ಆರಂಭದಿಂದಲೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ವ್ಯಾಪಕಗೊಳಿಸಲು ಮತ್ತು ಗಾಢವಾಗಿಸಲು ಪ್ರಯತ್ನಿಸುತ್ತಿದೆ. ಅದನ್ನು ಎರಡು ಮಟ್ಟದಲ್ಲಿ ಮಾಡುತ್ತಿದೆ: ಮೊದಲನೆಯದಾಗಿ ಸಂಸದೀಯ ವೇದಿಕೆಗಳು ಮತ್ತು ಸಾಂವಿಧಾನಿಕ ಹಾಗೂ ಪ್ರಜಾಸತ್ತಾತ್ಮಕ ನಡವಳಿಕೆಗಳನ್ನು ಬಲಪಡಿಸುವ ಮೂಲಕ. ಎರಡನೆಯದಾಗಿ, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹಾಗೂ ನಾಗರಿಕ ಸ್ವಾತಂತ್ರ್ಯಗಳನ್ನು ದಮನ ಮಾಡುವ ಕರಾಳ ಕಾನೂನುಗಳ ವಿರುದ್ಧ ಕಮ್ಯುನಿಸ್ಟ್ ಚಳುವಳಿ ನಿರಂತರವಾಗಿ ಹೋರಾಡಿದೆ.

ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೋರಾಟದ ವಿಷಯದಲ್ಲಿ ಪಕ್ಷದ ಕಾರ್ಯಕ್ರಮವು ನೀಡಿದ ಎಚ್ಚರಿಕೆಯನ್ನು ಸಿಪಿಐ(ಎಂ) ಸದಾ ನೆನಪಿನಲ್ಲಿ ಇಟ್ಟಿರುತ್ತದೆ: "ದುಡಿಯುವ ಜನರಿಂದ ಮತ್ತು ಅವರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷಗಳಿಂದ ಸಂಸದೀಯ ವ್ಯವಸ್ಥೆಗೆ ಮತ್ತು ಪ್ರಜಾಪ್ರಭುತ್ವಕ್ಕೆ ಗಂಡಾಂತರ ಬರುವುದಿಲ್ಲ. ಆಪತ್ತು ಬರುವುದು ಶೋಷಕ ವರ್ಗಗಳಿಂದ. ತಮ್ಮ ಸಂಕುಚಿತ ಹಿತಾಸಕ್ತಿಗಳನ್ನು ರಕ್ಷಿಸುವ ಒಂದು ಸಾಧನವನ್ನಾಗಿ ಸಂಸದೀಯ ವ್ಯವಸ್ಥೆಯನ್ನು ಆಂತರಿಕವಾಗಿ ಮತ್ತು ಬಾಹ್ಯವಾಗಿ ಶಿಥಿಲಗೊಳಿಸುತ್ತಾರೆ. ಯಾವಾಗ ಜನರು ಸಂಸದೀಯ ಸಂಸ್ಥೆಗಳನ್ನು ತಮ್ಮ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಮುಂದಾಗುತ್ತಾರೋ ಮತ್ತು ದೊಡ್ಡ ಬಂಡವಾಳಶಾಹಿಗಳು ಮತ್ತು ಭೂಮಾಲಕರ ಪ್ರಭಾವದಿಂದ ದೂರ ಸರಿಯುತ್ತಾರೋ, ಆಗ ಇವರು ಸಂಸದೀಯ ಪ್ರಜಾಪ್ರಭುತ್ವವನ್ನು ತಮ್ಮ ಕಾಲಡಿಯಲ್ಲಿ ಹೊಸಕಿಹಾಕಲು ಹೇಸುವುದಿಲ್ಲ . ."

ಬಂಡವಾಳವಾದದ ಅಡಿಯಲ್ಲಿ, ಪ್ರಜಾಪ್ರಭುತ್ವದ ಬಲ ಕುಗ್ಗಿಸುವ ಕೆಲಸ ಸದಾ ನಡೆಯುತ್ತಿರುತ್ತದೆ. ನವ–ಉದಾರವಾದಿ ಆಳ್ವಿಕೆಯ ಆರಂಭದ ನಂತರ ಇದು ಹೆಚ್ಚು ಪ್ರಕಟವಾಗಿ ಕಾಣುತ್ತಿದೆ. ಸಂವಿಧಾನ–ದತ್ತ ಬಹುತೇಕ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ ಅಥವಾ ಸರ್ಕಾರಿ ಅಧಿಕಾರಿಗಳೇ ಉಲ್ಲಂಘಿಸುತ್ತಿದ್ದಾರೆ. ಇದನ್ನು ವಿಶೇಷವಾಗಿ ಕಾರ್ಮಿಕರು, ರೈತರು ಮತ್ತು ಇತರ ದುಡಿಯುವ ಜನರು ಹೋರಾಟಕ್ಕಿಳಿದಾಗ ಕಾಣಬಹುದು. ಪ್ರತಿಬಂಧಕ ಆದೇಶಗಳ ಮೂಲಕ ಗುಂಪುಗೂಡುವ ಹಕ್ಕನ್ನು ನಿರಾಕರಿಸಲಾಗುತ್ತದೆ, ಪೋಲಿಸರು ಮತ್ತಿತರ ಸರ್ಕಾರಿ ಅಂಗಸಂಸ್ಥೆಗಳನ್ನು ಅವರ ವಿರುದ್ಧ ಹರಿಬಿಡಲಾಗುತ್ತದೆ, ರಾಜಕೀಯ ಮುಖಂಡರುಗಳನ್ನು ಮತ್ತು ಕಾರ್ಯಕರ್ತರನ್ನು ಬಂಧಿಸಲು ಹಲವಾರು ಕರಾಳ ಕಾನೂನುಗಳನ್ನು ಬಳಸುವುದರ ಮೂಲಕ ಪ್ರತಿಬಂಧಕ ಬಂಧನ ಮಾಡಲಾಗುತ್ತದೆ.

ಸ್ವಾತಂತ್ರ್ಯಾನಂತರದ ದಶಕಗಳಲ್ಲಿ, ಕಾರ್ಮಿಕ ವರ್ಗದ ಮತ್ತು ದುಡಿಯುವ ಇತರ ವಿಭಾಗಗಳ ಜನರ ಹಕ್ಕುಗಳನ್ನು ಪ್ರತಿಪಾದಿಸಲು ಕಮ್ಯುನಿಸ್ಟರು ನಿರಂತರವಾಗಿ ಹೋರಾಡುತ್ತಿದ್ದಾರೆ, ಅನೇಕ ವೇಳೆ ಪ್ರಭುತ್ವದ ದಮನವನ್ನು ಎದುರಿಸಿ. ಮೀಸಾ(ಆಂತರಿಕ ಭದ್ರತಾ ನಿರ್ವಹಣಾ ಕಾಯಿದೆ), ಎನ್.ಎಸ್.ಎ.(ರಾಷ್ಟ್ರೀಯ ಸುರಕ್ಷಾ ಕಾಯಿದೆ), ಟಾಡಾ(ಭಯೋತ್ಪಾದಕರು ಮತ್ತು ವಿಚ್ಛಿದ್ರಕಾರಿ ಚಟುವಟಿಕೆಗಳ ನಿರ್ಬಂಧ ಕಾಯಿದೆ), ಪೋಟಾ(ಭಯೋತ್ಪಾದನೆ ತಡೆ ಕಾಯಿದೆ) ಮತ್ತು ಯುಎಪಿಎ(ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ) ಮುಂತಾದ ಪ್ರತಿಬಂಧಕ ಬಂಧನಕ್ಕೆ ಅವಕಾಶ ಕೊಡುವ ಕರಾಳ ಶಾಸನಗಳ ಬಳಕೆಯನ್ನು ಪಕ್ಷವು ಸತತವಾಗಿ ವಿರೋಧಿಸುತ್ತಲೇ ಬಂದಿದೆ. ಆಳುವ ವರ್ಗಗಳ ಸ್ವಾರ್ಥ ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಪ್ರಜಾಪ್ರಭುತ್ವವನ್ನು ಹೇಗೆ ತುಳಿಯಲಾಯಿತು ಎನ್ನುವ ತೀರ ಉಗ್ರ ನಿದರ್ಶನವನ್ನು ಇಂದಿರಾ ಗಾಂಧಿಯವರು 1975 ರಲ್ಲಿ ತುರ್ತು ಪರಿಸ್ಥಿತಿ ಹೇರಿದ್ದರಲ್ಲಿ ಕಂಡಿದ್ದೇವೆ. ಸಿಪಿಐ(ಎಂ) ತುರ್ತು ಪರಿಸ್ಥಿತಿಯನ್ನು ವಿರೋಧಿಸಿತು ಮತ್ತು ಹೋರಾಡಿತು, ನೂರಾರು ಕಾರ್ಯಕರ್ತರು ಬಂಧನಕ್ಕೊಳಗಾದರು.



ಜನ ಒಂದು ಕಡೆ ಸೇರುವ, ಶಾಂತಿಯುತ ಪ್ರತಿಭಟನೆಗಳನ್ನು ನಡೆಸುವ ಮತ್ತು ಕಾರ್ಮಿಕರು ಮುಷ್ಕರ ಮಾಡುವ ಹಕ್ಕನ್ನು, ಬಳಸಲು ಸಾಧ್ಯವಾಗದೇ ಹೋದರೆ, ಪ್ರಜಾಪ್ರಭುತ್ವ ಅರ್ಥಹೀನವಾಗುತ್ತದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ನಿರಂತರ ಹೋರಾಟಗಳ ಕಾರಣದಿಂದ ಈ ಮೇಲೆ ನಮೂದಿಸಿದ ಕೆಲವು ಶಾಸನಗಳನ್ನು ಹಿಂತೆಗೆದುಕೊಳ್ಳಲಾಗಿದೆ ಅಥವಾ ರದ್ದಾಗುವಂತೆ ನೋಡಿಕೊಳ್ಳಲಾಗಿದೆ. ಆದರೆ ಎನ್.ಎಸ್.ಎ ಮತ್ತು ಯುಎಪಿಎ(ಬಿಜೆಪಿ ಸರ್ಕಾರವು ಅದನ್ನು ಇನ್ನೂ ಕರಾಳವಾಗಿಸಿದೆ) ಕಾನೂನು ಪುಸ್ತಕದಲ್ಲಿ ಹಾಗೆಯೇ ಮುಂದುವರಿದಿವೆ ಮತ್ತು ಈಗಲೂ ವ್ಯಾಪಕವಾಗಿ ಬಳಸಲಾಗುತ್ತಿದೆ.

ಸಂವಿಧಾನದಲ್ಲಿರುವ ಕೆಲವು ಕಾನೂನು ವಿಧಿಗಳನ್ನು ಪ್ರಜಾಪ್ರಭುತ್ವ ದಮನ ಮಾಡಲು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಅವುಗಳಲ್ಲಿ ಒಂದು 356ನೆ ಪರಿಚ್ಛೇದ; ಕಾನೂನು ಸುವ್ಯವಸ್ಥೆ ಮತ್ತು ಸಾಂವಿಧಾನಿಕ ಯಂತ್ರವು ಕುಸಿದಿದೆ ಎಂದು ರಾಜ್ಯಪಾಲರು ನೀಡುವ ವರದಿಯ ಆಧಾರದಲ್ಲಿ ರಾಜ್ಯ ಸರ್ಕಾರವನ್ನು ವಜಾ ಮಾಡಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವ ಕಾನೂನು ಅದು. ಈ ಕಾನೂನನ್ನೇ ಬಳಸಿ ಮೊಟ್ಟ ಮೊದಲ ಚುನಾಯಿತ ಕೇರಳ ಕಮ್ಯುನಿಸ್ಟ್ ಸರ್ಕಾರವನ್ನು 1959 ರಲ್ಲಿ ವಜಾ ಮಾಡಲಾಗಿತ್ತು. ಈ ಕಾನೂನನ್ನೇ ಬಳಸಿ ಪಶ್ಚಿಮ ಬಂಗಾಳ ಮತ್ತಿತರ ಹಲವಾರು ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕ ಘೋಷಿಸಲಾಗಿತ್ತು. ಪ್ರಜಾಪ್ರಭುತ್ವ ಮತ್ತು ರಾಜ್ಯಗಳ ಹಕ್ಕುಗಳ ವಿರುದ್ಧದ ಕರಾಳ ಕಾನೂನಾಗಿರುವ ಈ 356ನೇ ಪರಿಚ್ಛೇದದ ನಿರಂತರ ದುರ್ಬಳಕೆಯ ವಿರುದ್ಧ ಜನಾಭಿಪ್ರಾಯ ಮೂಡಿಸಲು ಮತ್ತು ಇತರ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸುವಲ್ಲಿ ಸಿಪಿಐ(ಎಂ) ಪ್ರಮುಖ ಪಾತ್ರ ವಹಿಸಿದೆ.

ಈ ನಿರಂತರ ಆಂದೋಲನದ ಫಲವಾಗಿ, ಅಂತಿಮವಾಗಿ 1994ರಲ್ಲಿ, ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂಕೋರ್ಟಿನ ತೀರ್ಪು 356ನೇ ವಿಧಿಯ ಬಳಕೆಗೆ ಕೆಲವು ನಿಬಂರ್ಧಗಳನ್ನು ಹೇರಿದೆ ಮತ್ತು ನ್ಯಾಯಾಂಗದ ಪರಿಶೀಲನೆಗೆ ಒಳಗಾಗಿದೆ ಎಂದು ಹೇಳಿದೆ.

ಆಳುವ ವರ್ಗಗಳು ನಿರ್ದಿಷ್ಟವಾಗಿ ಒಂದು ಬಲಿಷ್ಠ ಕಮ್ಯುನಿಸ್ಟ್ ಚಳುವಳಿ ಬೆಳೆಯುವುದಕ್ಕೆ ಮತ್ತು ವಿಶೇಷವಾಗಿ ರಾಜ್ಯಗಳಲ್ಲಿರುವ ಎಡ ನೇತೃತ್ವದ ಸರ್ಕಾರಗಳಿಗೆ ವಿರೋಧವಾಗಿದ್ದಾರೆ. ಹಾಗಾಗಿಯೇ ಎರಡು ಅವಧಿಗಳಲ್ಲಿ – ಪಶ್ಚಿಮ ಬಂಗಾಳ(1971–1977) ಮತ್ತು ತ್ರಿಪುರಾ(1988–1993) – ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ನಾವು ಕಂಡೆವು. ಪ್ರಜಾಪ್ರಭುತ್ವದ ಮೇಲಿನ ಈ ದಾಳಿಗಳು ಮತ್ತು ಭಯೋತ್ಪಾದನೆ ಮತ್ತೆ ಇನ್ನೂ ಉಗ್ರವಾಗಿ ಈ ರಾಜ್ಯಗಳಲ್ಲೇ – ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ಸಿನಿಂದ ಮತ್ತು ತ್ರಿಪುರಾದಲ್ಲಿ ಬಿಜೆಪಿಯಿಂದ– ತಲೆಎತ್ತಿವೆ.

ದುಡಿಯುವ ಜನರು ಸಂಸದೀಯ ಸಂಸ್ಥೆಗಳನ್ನು ಬಳಸಿ ತಮ್ಮ ಹಿತಾಸಕ್ತಿಗಳನ್ನು ಮುನ್ನೆಲೆಗೆ ತಂದರೆ ಆಳುವ ವರ್ಗಗಳು ಸಂಸದೀಯ ಪ್ರಜಾಪ್ರಭುತ್ವದ ಮೇಲೆ ದಾಳಿ ಮಾಡುತ್ತವೆ ಎಂದು ಪಕ್ಷದ ಕಾರ್ಯಕ್ರಮದ ಎಚ್ಚರಿಕೆ ಇಲ್ಲಿ ಸಾಬೀತಾಗಿದೆ. ಆದ್ದರಿಂದಲೇ, ಕಮ್ಯುನಿಸ್ಟ್ ಚಳುವಳಿಯ ಎರಡು ಬಲಿಷ್ಠ ನೆಲೆಗಳಲ್ಲಿ ಮತ್ತು ಇಡೀ ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ನಾವು ಹೋರಾಟ ಮಾಡುತ್ತಲೇ ಇದ್ದೇವೆ.

ಹಿಂದುತ್ವ ಸರ್ವಾಧಿಕಾರಿ ಆಡಳಿತ ಅಧಿಕಾರಕ್ಕೆ ಬಂದ ನಂತರ ಅದು ಇನ್ನೂ ಕಷ್ಟಕರವಾಗಿ ಪರಿಣಮಿಸಿದೆ. ಕಳೆದ ಆರು ವರ್ಷಗಳಲ್ಲಿ, ಪ್ರಜಾಪ್ರಭುತ್ವ ರಕ್ಷಣೆ ಮತ್ತು ಸಂವಿಧಾನ ದತ್ತ ಹಕ್ಕುಗಳನ್ನು ರಕ್ಷಿಸುವುದು ನಮ್ಮ ಹೋರಾಟದ ಕೇಂದ್ರ ಬಿಂದುವಾಗಿ ಪರಿಣಮಿಸಿದೆ.

ಪ್ರಭುತ್ವದ ವರ್ಗ ಲಕ್ಷಣ ಹೇಗಿದೆಯೆಂದರೆ ಸಂಸದೀಯ ಪ್ರಜಾಪ್ರಭುತ್ವವು ಹೆಚ್ಚು ಹೆಚ್ಚಾಗಿ ದೊಡ್ಡ ವ್ಯಾಪಾರಿಗಳ, ಗ್ರಾಮೀಣ ಶ್ರೀಮಂತರ ಮತ್ತು ಸುಲಿಗೆಕೋರ ಬಂಡವಾಳಶಾಹಿ ಶಕ್ತಿಗಳ ಆಡೊಂಬಲವಾಗಿದೆ. ನವ–ಉದಾರವಾದಿ ವ್ಯವಸ್ಥೆಯಲ್ಲಿ ವ್ಯಾಪಾರ ಮತ್ತು ರಾಜಕೀಯ ಪರಸ್ಪರ ಬೆರೆತುಹೋಗಿವೆ.

ಹಣಬಲದಿಂದಾಗಿ ಪ್ರಜಾಪ್ರಭುತ್ವದ ವಿಕೃತಿ, ಕಾರ್ಪೊರೇಟುಗಳು ಮತ್ತು ಹಣಕಾಸು ಬಂಡವಾಳವು ಚುನಾವಣೆಗೆ ಒದಗಿಸುತ್ತಿರುವ ಹಣದ ಪ್ರವಾಹದಿಂದಚುನಾವಣಾ ವ್ಯವಸ್ಥೆಯ ಮಾಲಿನ್ಯ ಇವು ದೊಡ್ಡ ಹಾವಳಿಯಾಗಿ ಪರಿಣಮಿಸಿವೆ. ಮೋದಿ ಸರ್ಕಾರವು ಕಾನೂನುಗಳನ್ನು ತಿದ್ದುಪಡಿ ಮಾಡಿದೆ, ಆ ಮೂಲಕ ಸ್ವದೇಶಿ ಹಾಗೂ ವಿದೇಶಿ ಕಾರ್ಪೊರೇಟ್‌ಗಳು ಎರಡೂ ರಾಜಕೀಯ ಪಕ್ಷಗಳಿಗೆ ಹಣ ನೀಡುತ್ತಿವೆ ಮತ್ತು ಚುನಾವಣಾ ಬಾಂಡುಗಳ ಮೂಲಕ ಅನಾಮಧೇಯರಾಗಿ ಅವರು ಹಣ ದೇಣಿಗೆ ನೀಡಬಹುದು.

ಪ್ರಜಾಪ್ರಭುತ್ವದ ವಿರುದ್ಧದ ಬಿಜೆಪಿ ಸರ್ವಾಧಿಕಾರಿ ಆಡಳಿತದ ದಾಳಿಯು ಇನ್ನೂ ಹೆಚ್ಚು ಗಂಭೀರವಾದದ್ದು, ಏಕೆಂದರೆ ಅದು ಯಾವುದೋ ಒಂದು ಹಕ್ಕು ಅಥವಾ ಮತ್ತೊಂದನ್ನು ಅಮಾನತು ಮಾಡಲು ಬಯಸುತ್ತಿಲ್ಲ. ಎಲ್ಲಾ ಸಾಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಇಡಿಯಾಗಿ ಬುಡಮೇಲು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಿಂದು ಬಹುಸಂಖ್ಯಾತ ಗಣತಂತ್ರವನ್ನು ಸ್ಥಾಪಿಸುವುದು ಅವರ ಗುರಿಯಾಗಿದೆ.

ಉಪಸಂಹಾರ

ಕಾರ್ಷಿಕ ಸುಧಾರಣೆಗಳಿಗಾಗಿ, ಭಾರತೀಯ ಪ್ರಭುತ್ವದ ಸಂರಚನೆಯನ್ನು ಹೆಚ್ಚು ಒಕ್ಕೂಟದ ಹಾದಿಯಲ್ಲಿ ಮರುರೂಪಿಸಲು ಮಾಡಿದ ಹೋರಾಟ ಮತ್ತು ಆಳುವ ವರ್ಗಗಳ ದಮನದ ಎದುರು ಪ್ರಜಾಪ್ರಭುತ್ವವನ್ನು ಗಾಢವಾಗಿಸಲು ನಿರಂತರವಾಗಿ ಶ್ರಮಿಸಿರುವುದು – ಕಮ್ಯುನಿಸ್ಟ್ ಚಳುವಳಿಯ ಈ ಶ್ರೀಮಂತ ಪರಂಪರೆಯನ್ನು ನಾವು ಮುಂದಕ್ಕೆ ಕೊಂಡೊಯ್ಯಬೇಕಾಗಿದೆ. ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಗೆ ಹಿಂದೆ ಎಂದೂ ಈಗಿನಷ್ಟು ಗಂಭೀರವಾದ ಆಪತ್ತು ಇರಲಿಲ್ಲ. ಪ್ರಜಾಪ್ರಭುತ್ವ ರಕ್ಷಣೆಯಲ್ಲಿ ಮತ್ತು ಎಲ್ಲಾ ಪ್ರಜಾಪ್ರಭುತ್ವ–ವಿರೋಧಿ ಶಾಸನಗಳು ಮತ್ತು ಕ್ರಮಗಳನ್ನು ವಿರೋಧ ಮಾಡುವಲ್ಲಿ ದೀರ್ಘ ದಾಖಲೆ ಹೊಂದಿರುವ ಕಮ್ಯುನಿಸ್ಟರು ಇವತ್ತು ಸವಾಲನ್ನು ಎದುರಿಸಲು ಎದ್ದು ನಿಲ್ಲಬೇಕಿದೆ. ಪ್ರಜಾಪ್ರಭುತ್ವ ಮತ್ತ ಸಾಂವಿಧಾನಿಕ ಹಕ್ಕುಗಳ ರಕ್ಷಣೆಗಾಗಿ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸಲು ವೇಗವರ್ಧಕ ಪಾತ್ರ ವಹಿಸಬೇಕಾಗಿದೆ. ■

ಭಾರತದ ಕಮ್ಯುನಿಸ್ಟ್ ಚಳುವಳಿಗೆ ನೂರು ವರ್ಷ



ಭಾರತದ ಕಮ್ಯುನಿಸ್ಟ್ ಚಳುವಳಿಯ ನೂರು ವರ್ಷಗಳ ರೋಚಕ ಇತಿಹಾಸದ ಸ್ಥೂಲ ನೋಟ. ಎರಡು ಭಾಗಗಳಲ್ಲಿ. ಇಲ್ಲಿ ದೇಶದ ಸ್ವಾತಂತ್ರ್ಯ ಹೋರಾಟದದಲ್ಲಿ ಕಮ್ಯುನಿಸ್ಟರ ಪಾತ್ರದ ಬಗೆಗಿನ ಮೊದಲ ಭಾಗವಿದೆ. ಎರಡನೆಯ ಭಾಗ ಮುಂದಿನ ವಾರ.

ವಿಜಯ್ ಪ್ರಶಾದ್, ಟ್ರೈಕಾಂಟಿನೆಂಟಲ್ ಅನುವಾದ: ವಸಂತ ಕಲಾಲ್

ದಬ್ಬಾಳಿಕೆ, ದಮನ ಮತ್ತು ಶೋಷಣೆಗಳ ವಿರುದ್ಧದ ಕೆಚ್ಚಿನ ಪ್ರತಿರೋಧದ ಪರಂಪರೆಯ ಭಾರತದ ಕಮ್ಯುನಿಸ್ಟ್ ಚಳುವಳಿಯು 17 ಅಕ್ಟೋಬರ್ 2020ರಂದು ನೂರು ವರ್ಷಗಳನ್ನು ಪೂರೈಸಲಿದೆ. ಈ ನೂರು ವರ್ಷಗಳಲ್ಲಿ ಸಮಾನತಾವಾದಿ ಮತ್ತು ನೈಜ ಪ್ರಜಾಪ್ರಭುತ್ವದ ಕನಸುಗಳನ್ನು ನನಸು ಮಾಡಲು ತಮ್ಮ ಜೀವನವನ್ನೇ ಪಣಕ್ಕಿಟ್ಟ ಸಾವಿರಾರು ಕ್ರಾಂತಿಕಾರಿಗಳ ತ್ಯಾಗ–ಬಲಿದಾನಗಳಾದವು. ಪ್ರಭುತ್ವದ ದಬ್ಬಾಳಿಕೆ, ಹಿಂಸೆ ಮತ್ತು ಅಪರಿಮಿತ ಬುಡಮೇಲು ಕೃತ್ಯಗಳ ವಿರುದ್ಧದ ಹೋರಾಟದಲ್ಲಿ ಸಮಸಮಾಜದ ಕನಸನ್ನು ಹೊತ್ತ ಸಾವಿರಾರು ಕಾರ್ಯಕರ್ತರು ಹುತಾತ್ಮರಾದರು. ಇನ್ನೂ ಹಲವರು ಆ ಹೋರಾಟವನ್ನು ಮುಂದುವರೆಸುತ್ತಿದ್ದಾರೆ.

ಕಮ್ಯುನಿಸ್ಟರು ತಮ್ಮ ವೈಯುಕ್ತಿಕ ಜೀವನವನ್ನು ಬದಿಗಿಟ್ಟು, ಅಸಂಖ್ಯಾತ ಜನರನ್ನು ಸಮಾಜದ ದೂರಗಾಮಿ ಪರಿವರ್ತನೆಗಾಗಿ ಕ್ರಿಯಾಶೀಲಗೊಳಿಸಿದ್ದಾರೆ. ವಿಚ್ಛಿದ್ರಕಾರಿ ಮತಾಂಧತೆ ಮತ್ತು ಜಾತಿ ತಾರತಮ್ಯದ ವಿರುದ್ಧ ಹೋರಾಟ ನಡೆಸಿದ್ದಾರೆ, ಮಾನವೀಯ ಹಕ್ಕುಗಳಿಗಾಗಿ ರೈತ ಕಾರ್ಮಿಕರನ್ನು ಸಂಘಟಿಸಿದ್ದಾರೆ ಮತ್ತು ಎಲ್ಲ ಅಂಚಿಗೆ ತಳ್ಳಲ್ಪಟ್ಟ, ಶೋಷಿತ ದಮನಿತರು ಉತ್ತಮವಾಗಿ ಬದುಕುವಂತಹ ಸಮಾಜವನ್ನು ನಿರ್ಮಿಸಲು ಜನರ ಪ್ರಜ್ಞೆಯನು ಜಾಗೃತಗೊಳಿಸಿ ಪ್ರಗತಿಯ ದಿಕ್ಕಿನತ್ತ ಕೊಂಡೊಯ್ಯಲು ಶ್ರಮಿಸಿದ್ದಾರೆ. ಮಾನವನಿಂದ ಮಾನವನ ಮೇಲೆ ನಡೆಯುವ ಶೋಷಣೆಯು ಸಮಾಜವಾದದ ಸಮಾಜದಲ್ಲಿ ಮಾತ್ರ ಕೊನೆಯಾಗುವುದೆಂದು ಮನಗಂಡು ಕಮ್ಯುನಿಸ್ಟರು ಮಾನವೀಯ ನೆಲೆಯಲ್ಲಿ ಸಮಸಮಾಜದ ಗುರಿಗಾಗಿ ಹೋರಾಟ ಮುಂದುವರಿಸಿದ್ದಾರೆ.

ಭಾರತದ ಕಮ್ಯುನಿಸ್ಟರು ದೇಶಪ್ರೇಮಿಗಳು; ಅವರ ಕಾರ್ಯಾಚರಣೆ ಭಾರತದ ಸಾಮಾಜಿಕ–ಆರ್ಥಿಕ ಮತ್ತು ಸಾಂಸ್ಕತಿಕ ವಾಸ್ತವದಲ್ಲಿ ಆಳವಾಗಿ ಬೇರೂರಿದೆ. ಆದರೂ ಭಾರತದ ಕ್ರಾಂತಿಕಾರಿ ಹೋರಾಟವು ಜಗತ್ತಿನಲ್ಲಿ ಮಾನವನ ವಿಮೋಚನೆಗಾಗಿ ನಡೆಯುತ್ತಿರುವ ಹೋರಾಟದ ಭಾಗವಾಗಿದೆ ಎಂದು ಕಮ್ಯುನಿಸ್ಟರು ಭಾವಿಸಿದ್ದಾರೆ. ಜಗತ್ತಿನ ಮೂಲೆ ಮೂಲೆಯಲ್ಲಿನ ಸಂಗಾತಿಗಳ ಜೊತೆ ಭವಿಷ್ಯದ ಸಮತಾವಾದದ ಕನಸನ್ನು ಹಂಚಿಕೊಳ್ಳುತ್ತಾ ಸಾಗುತ್ತಿದ್ದಾರೆ. ಇದರ ಅರ್ಥ ಭಾರತದ ಕಮ್ಯುನಿಸ್ಟ ಚಳುವಳಿಯು ಜಾಗತಿಕ ಹೋರಾಟವಾಗಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತ ಕಮ್ಯುನಿಸ್ಟ್ ಚಳುವಳಿ ಜಗತ್ತಿನ ಎಲ್ಲಾ ದಮನಿತ ದೇಶಗಳ ಮತ್ತು ಜನರ ಹಕ್ಕುಗಳಿಗಾಗಿ ಬೆಂಗಾವಲಾಗಿ ನಿಲ್ಲುತ್ತದೆ.

1917ರಲ್ಲಿ ರಷ್ಯಾದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯಿಂದ ಭಾರತದ ಕಮ್ಯುನಿಸ್ಟ್ ಚಳುವಳಿಯು ಬಹಳಷ್ಟು ಸ್ಫೂರ್ತಿ ಪಡೆಯಿತು. ಇತಿಹಾಸದಲ್ಲಿ ಅಕ್ಟೋಬರ್ ಕ್ರಾಂತಿ ಪ್ರಮುಖ ಅಧ್ಯಾಯ, ಇದು ಕೇವಲ ತ್ಸಾರ್ ರಾಜಪ್ರಭುತ್ವದ ವಿರುದ್ಧದ ಹೋರಾಟವಾಗಿರಲಿಲ್ಲ, ಬದಲಾಗಿ ಎಲ್ಲಾ ದಮನಿತ ದೇಶಗಳಿಗೆ ಪ್ರೇರಣೆ ನೀಡಿದ ಹೋರಾಟವಾಗಿತ್ತು. ಹೀಗೆ ಪ್ರೇರಿತಗೊಂಡು ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯನ್ನು ಕಿತ್ತೊಸೆಯಲು ಬಯಸಿದ್ದ ಕ್ರಾಂತಿಕಾರಿಗಳ ಒಂದು ಗುಂಪು ತಾಷ್ಕೆಂಟಿಗೆ ಪ್ರಯಾಣ ಬೆಳೆಸಿತು. ಸೋವಿಯತ್ ಒಕ್ಕೂಟ ಮತ್ತು ವಿವಿಧ ದೇಶದ ಕ್ರಾಂತಿಕಾರಿಗಳ ಸಮ್ಮುಖದಲ್ಲಿ, ಮೆಕ್ಸಿಕನ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರು ಮತ್ತು ಕಮ್ಯುನಿಸ್ಟ್ ಇಂಟರನ್ಯಾಷನಲ್‌ನ ಕಾರ್ಯಕಾರಿ ಸದಸ್ಯರಾಗಿದ್ದ ಭಾರತದ ಕ್ರಾಂತಿಕಾರಿ ಎಂ.ಎನ್. ರಾಯ್ ನೆರವಿನಿಂದ 17ನೇ ಅಕ್ಟೋಬರ್ 1920ರಂದು ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಲಾಯಿತು.

ಈ ವಲಸಿಗ ಭಾರತ ಕಮ್ಯುನಿಸ್ಟ್ ಪಕ್ಷ ಅಲ್ಲದೆ, ದೇಶದ ವಿವಿಧ ಭಾಗಗಳಲ್ಲಿ 1920ರ ಸುಮಾರಿಗೆ ಅನೇಕ ಕಮ್ಯುನಿಸ್ಟ್ ಗುಂಪುಗಳು ಉದಯವಾಗುತ್ತಿದ್ದವು. ಬಾಂಬೆಯಲ್ಲಿ ಎಸ್.ಎ ಡಾಂಗೆ, ಕಲ್ಕತ್ತಾದಲ್ಲಿ ಮುಝಾಫರ್ ಅಹಮದ್, ಮದ್ರಾಸಿನಲ್ಲಿ ಸಿಂಗಾರವೇಲು ಚೆಟ್ಟಿಯಾರ ಮತ್ತು ಲಾಹೋರನಲ್ಲಿ ಗುಲಾಮ ಹುಸೇನ್ ಈ ಕಮ್ಯುನಿಸ್ಟ್ ಗುಂಪುಗಳ ನೇತೃತ್ವ ವಹಿಸಿದ್ದರು. ವಲಸಿಗ ಭಾರತ ಕಮ್ಯುನಿಸ್ಟ್ ಪಕ್ಷ ತನ್ನ ಚಟುವಟಿಕೆಗಳ ಮೂಲಕ ಈ ಗುಂಪುಗಳಿಗೆ ಮಾರ್ಕ್ಸವಾದಿ–ಲೆನಿನವಾದಿ ಸಿದ್ಧಾಂತ ಮತ್ತು ಕಾರ್ಯಾಚರಣೆಯ ಶಿಕ್ಷಣವನ್ನು ನೀಡಲು ಪ್ರಾರಂಭಿಸಿತು.

ಎಂ.ಎನ್ ರಾಯ್ ಗೆ ಸಂಪರ್ಕವಿದ್ದ ಎಲ್ಲ ಕಮ್ಯುನಿಸ್ಟರು ಈಗ ಉತ್ತರಪ್ರದೇಶದಲ್ಲಿರುವ ಕಾನ್ಪುರನಲ್ಲಿ 1925ನೇ ಇಸವಿಯ ಡಿಸೆಂಬರ್ 25ರಿಂದ 28ರವರೆಗೆ ಬಹಿರಂಗ ಸಮ್ಮೇಳನವನ್ನು ಆಯೋಜಿಸಿದರು. ಈ ಸಮ್ಮೇಳನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಕಾರ್ಯಪ್ರವೃತ್ತಗೊಳಿಸಿ ಪಕ್ಷದ ಮುಖ್ಯ ಕಛೇರಿಯನ್ನು ಬಾಂಬೆಯಲ್ಲಿ ಆರಂಭಿಸಬೇಕೆಂದು ನಿರ್ಧರಿಸಲಾಯಿತು. ಇದು ಭಾರತ ನೆಲದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯ ಮೊದಲ ಹೆಜ್ಜೆಯಾಗಿತ್ತು ಮತ್ತು ಕೆಲ ಕಮ್ಯುನಿಸ್ಟರು ಇದು ಭಾರತ ಕಮ್ಯುನಿಸ್ಟ್ ಚಳುವಳಿಯ ಆರಂಭವಾಗಿತ್ತು ಎಂದು ಪರಿಗಣಿಸುತ್ತಾರೆ.


ಆರಂಭದ ವರ್ಷಗಳು

ಭಾರತದ ಕಮ್ಯುನಿಸ್ಟರು ಬ್ರಿಟಿಷ್ ವಸಾಹತುಶಾಹಿಯಿಂದ ಭಾರತವನ್ನು ಸಂಪೂರ್ಣವಾಗಿ ಸ್ವತಂತ್ರಗೊಳಿಸಿ ಅವರ ಕಣ್ಮುಂದೆ ಇದ್ದ ಸೋವಿಯತ್ ಒಕ್ಕೂಟದ ಮಾದರಿಯಲ್ಲಿ ದುಡಿಯುವ ಜನರೇ ಆಡಳಿತ ನಡೆಸುವ ಸಮಾಜವನ್ನು ಕಟ್ಟಬೇಕೆಂದು ನಿರ್ಧರಿಸಿದ್ದರು. ಈ ಗುರಿ ಸಾಧನೆಗಾಗಿ ಬೇರುಮಟ್ಟದಿಂದ ಸಂಘಟನೆಯನ್ನು ಕಟ್ಟಿ, 1920ರ ದಶಕದ ಕೊನೆಯ ಹೊತ್ತಿಗೆ ನಗರ ಪ್ರದೇಶಗಳಲ್ಲಿ ಕಾರ್ಮಿಕ ಸಂಘಟನೆಗಳ ಚಳುವಳಿಗಳನ್ನು ಪ್ರಬಲವಾಗಿಸಿದರು. 1928 ಮತ್ತು 1929ರಲ್ಲಿ ದೇಶದಲ್ಲೆಲ್ಲ ಕಾರ್ಮಿಕ ವರ್ಗದ ಹೋರಾಟಗಳ ಅಲೆಯೂ ಸೃಷ್ಟಿಯಾಯಿತು. ಅದರಲ್ಲಿ ಬಾಂಬೆ ಜವಳಿ ಕಾರ್ಖಾನೆ ಕಾರ್ಮಿಕರ ಹೋರಾಟ ಮತ್ತು ಬಂಗಾಳದ ರೈಲ್ವೆ ಕಾರ್ಮಿಕರ ಹೋರಾಟ ಅತ್ಯಂತ ಪ್ರಮುಖವಾದ ಹೋರಾಟಗಳಾಗಿದ್ದವು.

ವಸಾಹತುಶಾಹಿಯ ವಿರುದ್ಧದ ಹೋರಾಟದಲ್ಲಿ ಕಮ್ಯುನಿಸ್ಟರ ಮುನ್ನಡೆಯ ಪರಿಣಾಮವಾಗಿ, ಆ ಸಮಯದಲ್ಲಿ ಭಾರತ ರಾಷ್ಟ್ರಿಯ ಚಳುವಳಿಯ ನಾಯಕತ್ವ ವಹಿಸಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಬ್ರಿಟಿಷರ ವಿರುದ್ಧ ತೀವ್ರಗಾಮಿ ನಿಲುವುಗಳನ್ನು ಅನುಸರಿಸಲು ಪ್ರಾರಂಭಿಸಿತು. ಅಲ್ಲಿಯ ತನಕ ಅವರು ಹೋರಾಟದಲ್ಲಿ ಅಳವಡಿಸಿಕೊಂಡಿದ್ದ ಮಂದ ಪ್ರತಿರೋಧದ ನೀತಿಯನ್ನು ಕೈಬಿಟ್ಟರು. 1921ರಲ್ಲಿ ಅಹಮದಬಾದದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೇಸಿನ ಸಮಾವೇಶದಲ್ಲಿ ಕಮ್ಯುನಿಸ್ಟರಾದ ಹಸರತ ಮೊಹಾನಿ ಮತ್ತು ಸ್ವಾಮಿ ಕುಮಾರಾನಂದ ಬ್ರಿಟಿಷ್ ಆಡಳಿತದಿಂದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಿ ನಿರ್ಣಯವನ್ನು ಮುಂದಿಟ್ಟರು. ಆ ನಿರ್ಣಯವನ್ನು ಕಾಂಗ್ರೆಸು ತಿರಸ್ಕರಿಸಿತು, ಆದರೆ ಸಭೆಯಲ್ಲಿ ಇದರ ಪರವಾಗಿ ಪ್ರಬಲವಾಗಿ ಕೂಗು ಕೇಳಿ ಬಂದಿದ್ದು ಮತ್ತು ಅದನ್ನು ಗಂಭೀರವಾಗಿ ಪರಿಗಣಿಸಲಾಯಿತು ಎಂಬುದು, ಕಮ್ಯುನಿಸ್ಟ್ ವಿಚಾರಗಳು ವಸಾಹತುಶಾಹಿ ವಿರುದ್ಧದ ಚಳುವಳಿಯಲ್ಲಿ ಪರಿಣಾಮ ಬೀರಲಾರಂಭಿಸಿದ್ದವು ಎಂದು ತೋರಿಸಿದವು.

ಕಮ್ಯುನಿಸ್ಟ್ ವಿಚಾರಗಳು ದೇಶದಲ್ಲೆಲ್ಲ ಪಸರಿಸಲು ಆರಂಭಿಸುತ್ತಿದಂತೆ ತನ್ನ ಸಾಮ್ರಾಜ್ಯದ ಮೇಲೆ ಆಗಬಹುದಾದ ಪರಿಣಾಮಗಳಿಂದ ಬ್ರಿಟಿಷರು ನಿದ್ದೆಗೆಟ್ಟು ಕಮ್ಯುನಿಸ್ಟರ ವಿರುದ್ಧ ಪಿತೂರಿ ಮೊಕದ್ದಮೆಗಳನ್ನು ಹೂಡಿದರು. ಇದರ ಪರಿಣಾಮ 1921 ಮತ್ತು 1933ರ ನಡುವೆ ಹಲವಾರು ಕಮ್ಯುನಿಸ್ಟ್ ನಾಯಕರಿಗೆ ಜೈಲು ಶಿಕ್ಷೆ ವಿಧಿಸಲಾಯಿತು. ಅದರಲ್ಲಿ ಮೀರತ್ ಪಿತೂರಿ ಪ್ರಕರಣ (1929–1933) ಅತ್ಯಂತ ಪ್ರಮುಖವಾದುದು. ಕಮ್ಯುನಿಸ್ಟರನ್ನು ಹತ್ತಿಕ್ಕಲು ಈ ಪ್ರಕರಣವನ್ನು ಹೂಡಲಾಗಿತ್ತಾದರೂ, ಮಾರ್ಕ್ಸವಾದಿ ವಿಚಾರಗಳನ್ನು ಕೊಂಡೊಯ್ಯಲು ಇದೇ ಅತ್ಯುತ್ತಮ ವೇದಿಕೆಯಾಯಿತು. ಈ ಅವಕಾಶವನ್ನು ಬಳಸಿಕೊಂಡ ಕಮ್ಯುನಿಸ್ಟರು ನ್ಯಾಯಾಲಯದ ಕಟಕಟೆಯಲ್ಲಿ ತಮ್ಮ ಮಾರ್ಕ್ಸ್‌ವಾದಿ ವಿಚಾರಗಳನ್ನು ಸಮರ್ಥಿಸಿ ಉತ್ಸಾಹದಿಂದ ವಿವರಿಸಿದರು, ಇದರಿಂದ ಭಾರತದ ಜನಸಾಮಾನ್ಯರ ನಡುವೆ ಕಮ್ಯುನಿಸ್ಟ್ ವಿಚಾರಗಳು ಹರಡಲು ಸಹಾಯವಾಯಿತು. ಈ ಪಿತೂರಿಯಡಿ ಬಂಧಿತರಾದ 33 ಜನರಲ್ಲಿ 27 ಜನರನ್ನು ತಪ್ಪಿತಸ್ಥರೆಂದು ಪರಿಗಣಿಸಿ ಅವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು. 1934ರಲ್ಲಿ ಬ್ರಿಟಿಷ್ ಸರ್ಕಾರ ಕಮುನಿಸ್ಟ್ ಪಕ್ಷ ಮತ್ತು ಅದರ ಸಂಘಟನೆಗಳನ್ನು ನಿಷೇಧಗೊಳಿಸಿತು, ಅದರ ಸದಸ್ಯತ್ವ ಹೊಂದುವುದು ಅಪರಾಧ ಎಂದು ಫರ್ಮಾನು ಹೊರಡಿಸಿತು. ಇದಕ್ಕೆಲ್ಲ ಲೆಕ್ಕಿಸದ ಕಮ್ಯುನಿಸ್ಟರು ತಮ್ಮ ಕ್ರಾಂತಿಕಾರಿ ಚಟುವಟಿಕೆಗಳನ್ನು ರಹಸ್ಯವಾಗಿಯೇ ಮುಂದುವರೆಸಿ, ಪಕ್ಷದ ತಲುಪುವಿಕೆ ಮತ್ತು ಸದಸ್ಯತ್ವವನ್ನು ವಿಸ್ತರಿಸಿದರು.





ಬಂಡವಾಳಶಾಹಿ ಜಗತ್ತಿಗೆ ದೊಡ್ಡ ಪೆಟ್ಟನ್ನು ನೀಡಿದ ಜಾಗತಿಕ ಆರ್ಥಿಕ ಕುಸಿತದ ನಡುವೆಯೂ ಸೋವಿಯತ್ ಒಕ್ಕೂಟ ಯಶಸ್ವಿಯಾದದ್ದನ್ನು ಕಂಡು ವಿಶ್ವದ ಉದ್ದಕ್ಕೂ ಗಣನೀಯ ಸಂಖ್ಯೆಯಲ್ಲಿ ಜನರು ಸಮಾಜವಾದ ಮತ್ತು ಮಾರ್ಕ್ಸವಾದದ ಕಡೆ ಆಕರ್ಷಿತರಾದರು. ಭಾರತ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದ್ದರೂ ಕೂಡ ಕಮ್ಯುನಿಸ್ಟರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದಂತೆ ರಾಷ್ಟ್ರೀಯ ಚಳುವಳಿಯ ಭಾಗವಾಗಿದ್ದ ವಿವಿಧ ಸಂಘಟನೆಗಳಲ್ಲಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. ತಮ್ಮ ಪಕ್ಷದ ಚಟುವಟಿಕೆಗಳನ್ನು ರಹಸ್ಯವಾಗಿ ನಡೆಸಿ ಹಲವಾರು ಯುವಜನರನ್ನು ಪಕ್ಷದ ಕಡೆ ಸೆಳೆದರು. ಈ ರೀತಿಯಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಸೇರಿದ ಹಲವಾರು ಯುವಕರು ಮುಂದೆ ಪ್ರಭಾವಿ ನಾಯಕರಾಗಿ ಹೊರಹೊಮ್ಮಿದರು. ಕಾಂಗ್ರೆಸ್ ಸಮಾಜವಾದಿ ಪಾರ್ಟಿ (ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿದ್ದ ಎಡ ಬಣ) ಸೇರಿದಂತೆ ವಿವಿಧ ವೇದಿಕೆಗಳನ್ನು ಬಳಸಿ ವಿಶಾಲವಾದ ಜನಸಮುದಾಯವನ್ನು ವರ್ಗ ಮತ್ತು ಸಾಮೂಹಿಕ ಸಂಘಟನೆಗಳಾದ ರೈತ, ಕಾರ್ಮಿಕ, ವಿದ್ಯಾರ್ಥಿ ಮತ್ತು ಬರಹಗಾರರ ಸಂಘಟನೆಗಳ ಮೂಲಕ ಸಂಘಟಿಸಿ ಕಮ್ಯುನಿಸ್ಟರು ರಭಸವಾಗಿ ಚಳುವಳಿಗೆ ಮುನ್ನುಗ್ಗಿದರು

ಸಾಮೂಹಿಕ ಮತ್ತು ವರ್ಗ ಸಂಘಟನೆಗಳ ಬೆಳವಣಿಗೆ

ಚಳುವಳಿಯು ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದಂತೆ ಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಲು ಕಮ್ಯುನಿಸ್ಟರು ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗದ ಮೈತ್ರಿಯ ಪ್ರಾಮುಖ್ಯತೆಯನ್ನು ಗುರುತಿಸಿದರು. ವಸಾಹತುಶಾಹಿ ಆಡಳಿತ ಯಂತ್ರ ಮತ್ತು ಅದರ ಸಾರಿಗೆ – ಸಂಪರ್ಕವನ್ನು ದುರ್ಬಲಗೊಳಿಸಲು ಕ್ರಾಂತಿಕಾರಿ ಶ್ರಮಜೀವಿಗಳ ಪಾತ್ರ ಅತ್ಯಂತ ಮುಖ್ಯವಾದದು ಎಂದು ತಿಳಿದು ಕಮ್ಯುನಿಸ್ಟ್ ಚಟುವಟಿಕೆಗಳನ್ನು ನಡೆಸಿದ ಪರಿಣಾಮ ದೇಶದ ಉದ್ದಗಲಕ್ಕೂ 6 ಲಕ್ಷ ಕಾರ್ಮಿಕರನ್ನೊಳಗೊಂಡ ದುಡಿಯುವ ವರ್ಗದ ಹೋರಾಟದ ಅಲೆಯೇ ಮೂಡಿಬಂತು.

ಕಾರ್ಮಿಕ ವರ್ಗ ಮಾತ್ರವಲ್ಲದೆ, ರಾಷ್ಟ್ರೀಯ ಚಳುವಳಿಯಲ್ಲಿ ವಿದ್ಯಾರ್ಥಿಗಳು, ಯುವಜನ ಮತ್ತು ಬುದ್ಧಿಜೀವಿಗಳ ಪಾತ್ರವನ್ನು ಗುರುತಿಸಿದ ಕಮ್ಯುನಿಸ್ಟರು ಕ್ರಾಂತಿಕಾರಿ ಉದ್ದೇಶಕ್ಕಾಗಿ ಅವರನ್ನು ಕೂಡ ಅಣಿ ನೆರೆಸಲು ಮುಂದಾದರು.

ಮುಖ್ಯವಾಗಿ ಭಾರತದಲ್ಲಿ ಶೇಕಡ 80 ರಷ್ಟು ಜನಸಂಖ್ಯೆ ಕೃಷಿ ಅವಲಂಬಿತ ಸಮಾಜದಲ್ಲಿ ಬದುಕುತ್ತಿರುವುದನ್ನು ಗಮನಿಸಿದ ಕಮ್ಯುನಿಸ್ಟರು, ರೈತರನ್ನು ಸಂಘಟಿಸಿದಾಗ ಮಾತ್ರ ದೇಶದ ವಿಮೋಚನೆ ಸಾಧ್ಯ ಎಂದು ಅರಿತರು. ಈ ಕಾರಣ ಆರಂಭದಲ್ಲಿ ಕೇವಲ ನಗರ ಪ್ರದೇಶಗಳನ್ನೆ ಕೇಂದ್ರವಾಗಿಸಿಕೊಂಡಿದ್ದ ಕಮ್ಯುನಿಸ್ಟ್ ಚಟುವಟಿಕೆಗಳು ತರುವಾಯ ಭಾರತದ ಗ್ರಾಮೀಣ ಭಾಗದಲ್ಲಿ ವಿಸ್ತರಿಸಿದವು.

ಈ ಮೂಲಕ ಭಾರತದ ಕಮ್ಯುನಿಸ್ಟರು 1936ರಲ್ಲಿ ಹಲವಾರು ಸಾಮೂಹಿಕ ಸಂಘಟನೆಗಳನ್ನು ಹುಟ್ಟು ಹಾಕಿದರು: ಅವುಗಳೆಂದರೆ ಅಖಿಲ ಭಾರತ ಕಿಸಾನ್ ಸಭಾ (ಂಖಏಖ), ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ (ಂಖಖಈ), ಪ್ರಗತಿಪರ ಬರಹಗಾರರ ಸಂಘ (ಕಘಂ) ಮತ್ತು 1943ರಲ್ಲಿ ಆರಂಭವಾದ ಇಪ್ಟಾ (ಖಕಖಿಂ). ಮೊಟ್ಟಮೊದಲ ಬಾರಿಗೆ ಕೃಷಿಕೂಲಿಕಾರ್ಮಿಕರ ಸಂಘಟನೆಯನ್ನು ಕೂಡ ಕಮ್ಯುನಿಸ್ಟರೇ ಪ್ರಾರಂಭಿಸಿದರು. ಇವೆಲ್ಲ ಸಂಘಟನೆಗಳು ವಿವಿಧ ವರ್ಗಗಳ ಜನರ ಹಕ್ಕುಗಳಿಗಾಗಿ ಹೋರಾಡುತ್ತಲೆ ಜನರ ನಡುವೆ ಕ್ರಾಂತಿಕಾರಿ ಪ್ರಜ್ಞೆಯನ್ನು ಮೂಡಿಸಲು ಯತ್ನಿಸಿದವು.

ಕಮ್ಯುನಿಸ್ಟ್ ಚಳುವಳಿಯು ಭಾರತಕ್ಕೆ ಗ್ರಾಮೀಣ ಭಾಗಕ್ಕೆ ಕಾಲಿಡುತ್ತಿದ್ದಂತೆ, ಅಲ್ಲಿ ಬೇರೂರಿದ್ದ ಜಾತಿ ಮತ್ತು ವರ್ಗದ ಮಿಶ್ರಣವಾಗಿದ್ದ ಭಾರತದ ಪಾಳೆಗಾರಿ



ವ್ಯವಸ್ಥೆ ವಿರುದ್ಧ ಸೆಣಸಬೇಕಾಗಿತ್ತು. ಗ್ರಾಮೀಣ ಭಾರತದಲ್ಲಿ ರೈತರ ಮೇಲಿನ ಭೂಮಾಲಿಕ ವರ್ಗ, ಸಾಲದಾರರು ಮತ್ತು ಸರ್ಕಾರಿ ಅಧಿಕಾರಿಗಳ ವಿಪರೀತ ದಬ್ಬಾಳಿಕೆ, ಶೋಷಣೆ ವ್ಯಾಪಕವಾಗಿತ್ತು. ಸಾಲದಾರರಿಗೆ ಸಾಲ ಮತ್ತು ಗೇಣಿ ನೀಡಿದ ನಂತರ ತಾನು ಬೆಳೆದ ಆಹಾರವೇ ರೈತ ಕುಟುಂಬಕ್ಕೆ ಸಾಕಾಗುತ್ತಿರಲಿಲ್ಲ. ಸಾಲದ ಸುಳಿಯಲ್ಲಿ ಸಿಲುಕಿದ ರೈತರ ದೊಡ್ಡ ವಿಭಾಗ ಭೂಮಿಯನ್ನು ಕಳೆದುಕೊಂಡು ಗೇಣಿದಾರರಾಗಿ ದುಡಿಯುತ್ತಿದ್ದರು. ಹೆಚ್ಚಾಗಿ ಅಸ್ಪೃಶ್ಯ ಜಾತಿಗಳಿಗೆ ಸೇರಿದ ಭೂರಹಿತ ಕೂಲಿಕಾರರ ಪರಿಸ್ಥಿತಿ ಇದಕ್ಕಿಂತ ಕೆಳಮಟ್ಟದಲ್ಲಿತ್ತು. ಅವರನ್ನು ದೈಹಿಕ ದಂಡನೆಯ ಬೆದರಿಕೆ ಮತ್ತು ಸಮಾಜದ ಕಟ್ಟುಪಾಡುಗಳಿಂದ ಬಲಾತ್ಕಾರವಾಗಿ ವೇತನರಹಿತ ದುಡಿಮೆಗಾರರನ್ನಾಗಿ ಮಾಡಿ, ಸಾಮಾಜಿಕವಾಗಿ ವಿಧಿಸಿದ ಪಶುಸಮಾನ ಸ್ಥಿತಿಗೆ ದಬ್ಬಲಾಗಿತ್ತು. ಹಳ್ಳಿಗಳಲ್ಲಿ ಕಮ್ಯುನಿಸ್ಟರು ಮೊಟ್ಟಮೊದಲು ಇಟ್ಟ ಹೆಜ್ಜೆ ಅಸ್ಪೃಶ್ಯತೆಯ ವಿರುದ್ಧವೇ ಆಗಿತ್ತು, ಅದರ ಜೊತೆ ಅವರು ಕನಿಷ್ಠ ವೇತನಕ್ಕಾಗಿ ಮತ್ತು ಬಲವಂತದ ದುಡಿಮೆಯ ವಿರುದ್ಧವಾಗಿ ಅನೇಕ ಹೋರಾಟಗಳನ್ನು ಸಂಘಟಿಸಿದರು.

ಕಮ್ಯುನಿಸ್ಟರ ನಾಯಕತ್ವದಲ್ಲಿ ರೈತರು ಬಹುದೊಡ್ಡ ರೀತಿಯಲ್ಲಿ ಸಂಘಟಿತರಾದರು. ಕಮ್ಯುನಿಸ್ಟ್ ನಾಯಕತ್ವದ ಅಖಿಲ ಭಾರತ ಕಿಸಾನ್ ಸಭಾದ ಸದಸ್ಯತ್ವ ಮೇ 1938ರಲ್ಲಿ 6 ಲಕ್ಷ ಇದ್ದು ಏಪ್ರಿಲ್ 1939ರ ವೇಳೆಗೆ 8 ಲಕ್ಷಕ್ಕೆ ಏರಿತು. ರೈತ ಚಳುವಳಿ ಹಲವು ಬೇಡಿಕೆಗಳನ್ನು ಮುಂದಿಟ್ಟಿತು. ಭೂಮಾಲಿಕತ್ವವನ್ನು ನಾಶಗೊಳಿಸುವುದು, ಉಳುಮೆ ಮಾಡುವ ರೈತರಿಗೆ ಭೂಮಿಯ ಹಕ್ಕನ್ನು ನೀಡುವುದು, ಒತ್ತಾಯದ ದುಡಿಮೆ ಕೊನೆಗಾಣಿಸುವುದು ಮತ್ತು ಭೂಮಾಲಿಕರ ಅಡಿಯಿದ್ದ ಗೇಣಿದಾರ ರೈತರನ್ನು ಕಾನೂನುಬಾಹಿರ ಸುಲಿಗೆಗಳಿಂದ ಮತ್ತು ಬಲವಂತದ ದುಡಿಮೆಗಳಿಂದ ಮುಕ್ತಗೊಳಿಸುವುದು, ಭೂರಹಿತ ರೈತರಿಗೆ ಭೂಮಿ ಹಂಚಿಕೆ, ಭೂ ಕಂದಾಯದಲ್ಲಿ ತೀವ್ರವಾದ ಬದಲಾವಣೆ ತರುವುದು ಮತ್ತು ಬೆಳೆಗಳಿಗೆ ಉತ್ತಮ ದರವನ್ನು ನಿಗದಿಪಡಿಸುವುದು – ಇವು ರೈತ ಚಳುವಳಿ ಮುಂದಿಟ್ಟ ಪ್ರಮುಖ ಬೇಡಿಕೆಗಳಾಗಿದ್ದವು.

ಕಮ್ಯುನಿಸ್ಟರು ರೈತರನ್ನು ಅಣಿ ನೆರೆಸುತ್ತಿದ್ದಂತೆ, ದೇಶದ ಅನೇಕ ಭಾಗಗಳಲ್ಲಿ ಕಾಂಗ್ರೆಸ್ ನಾಯಕತ್ವವು ಭೂಮಾಲೀಕ ಮತ್ತು ಭಾರತದ ಕೈಗಾರಿಕೋದ್ಯಮಿಗಳ ಜೊತೆ ಕೈ ಜೋಡಿಸಿತು. ಭೂಮಾಲೀಕ ವರ್ಗ ಮತ್ತು ಭಾರತದ ಕೈಗಾರಿಕೋದ್ಯಮಿಗಳು ಕಾಂಗ್ರೆಸಿಗೆ ಎರಡು ಪ್ರಧಾನ ಆಧಾರ ಸ್ತಂಭಗಳಾದರು. ಇದರ ಪರಿಣಾಮ ಕಾಂಗ್ರೆಸಿನ ಒಳಗಡೆ ಕಮ್ಯುನಿಸ್ಟರು ಮತ್ತು ಬಲಪಂಥಿಯರ ನಡುವೆ ತಿಕ್ಕಾಟಗಳು ಪ್ರಾರಂಭವಾದವು. ಕಾಂಗ್ರೆಸ್ ನೇತೃತ್ವದಲ್ಲಿ ರಚನೆಯಾದ ತಾತ್ಕಾಲಿಕ ಸರ್ಕಾರಗಳು ಭೂಮಾಲಿಕ ಮತ್ತು ಕೈಗಾರಿಕೊದ್ಯಮಿಗಳ ಬೆನ್ನಿಗೆ ಬೆಂಬಲವಾಗಿ ನಿಂತವು, ಬಲಪಂಥೀಯರ ಒತ್ತಡದ ಪರಿಣಾಮವಾಗಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಕಮ್ಯುನಿಸ್ಟರನ್ನು ಉಚ್ಚಾಟಿಸಿತು. ಇದರ ಪರಿಣಾಮವಾಗಿ, ಧೀರ ಕಮ್ಯುನಿಸ್ಟ್ ನಾಯಕ ಮತ್ತು ಮುಂದೆ ಕೇರಳ ರಾಜ್ಯದ ಪ್ರಥಮ ಮುಖ್ಯಮಂತ್ರಿಯಾದ ಇ.ಎಂ.ಎಸ್ ನಂಬೂದರಿಪಾಡ್ ರವರು 'ವಿವಿಧ ರಾಜ್ಯಗಳಲ್ಲಿರುವ ಕಾಂಗ್ರೆಸ್ ಸಮಾಜವಾದಿ ಪಾರ್ಟಿಯ ಜಿಲ್ಲಾ ಮತ್ತು ಸ್ಥಳೀಯ ಶಾಖೆಗಳಿಗೆ (ಕೇರಳ ರಾಜ್ಯದ ಎಲ್ಲಾ ಕಾಂಗ್ರೆಸ್ ಸಮಾಜವಾದಿ ಪಾರ್ಟಿಯ ಶಾಖೆಗಳಿಗೆ) ಭಾರತ ಕಮ್ಯುನಿಸ್ಟ ಪಕ್ಷಕ್ಕೆ ಪರಿವರ್ತನೆಯಾಗಲು ಕರೆ ಕೊಡಲಾಯಿತು' ಎಂದು ನೆನಪಿಸಿಕೊಂಡಿದ್ದಾರೆ.

ಎರಡನೆ ಜಾಗತಿಕ ಮಹಾಯುದ್ಧ


1939ರಲ್ಲಿ ಎರಡನೆ ಜಾಗತಿಕ ಮಹಾಯುದ್ಧ ಸ್ಫೋಟವಾಯಿತು, ಬ್ರಿಟನ್ ಭಾರತದ ಜನ ಪ್ರತಿನಿಧಿಗಳ ಒಪ್ಪಿಗೆ ಪಡೆಯದೇ ಭಾರತವನ್ನು ಮಹಾಯುದ್ಧದ ಅಂಗಳಕ್ಕೆ ನೂಕಿತು. ಈ ಮಹಾಯುದ್ಧದಿಂದ ದಿನಬಳಕೆಯ ವಸ್ತುಗಳು ಗಗನಕ್ಕೇರಿದ್ದರಿಂದ ಭಾರತೀಯ ಜನರಿಗೆ ಸಂಕಷ್ಟ ಎದುರಾಯಿತು. ಆಗ ಭಾರತ ಕಮ್ಯುನಿಸ್ಟ್ ಪಕ್ಷ ಪ್ರಾಮಾಣಿಕವಾಗಿ ಯುದ್ಧವನ್ನು ವಿರೋಧಿಸಿ ಬೃಹತ್ ಹೋರಾಟಗಳನ್ನು ಸಂಘಟಿಸಿತು. ಇದರಿಂದ ಕುಪಿತರಾದ ಬ್ರಿಟಿಷರು ಹೆಚ್ಚಿನ ಸಂಖ್ಯೆಯಲ್ಲಿ ಕಮ್ಯುನಿಸ್ಟರನ್ನು ಬಂಧಿಸಿದರು. ಮೇ 1941ರ ಹೊತ್ತಿಗೆ ಇಡಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಜೈಲು ಸೇರಿತ್ತು.

22ನೇ ಜೂನ 1941ರಲ್ಲಿ ನಾಜಿ ಜರ್ಮನಿ ಸೋವಿಯತ ಒಕ್ಕೂಟದ ಮೇಲೆ ದಾಳಿ ಮಾಡಿದಾಗ ಯುದ್ಧದ ಸ್ವರೂಪವು ಬದಲಾಯಿತು, ಮೊದಲ ಹಂತದಲ್ಲಿ ಸಾಮ್ರಾಜ್ಯಶಾಹಿಗಳ ನಡುವಿನ ಯುದ್ಧವಾಗಿದ್ದ ಇದು ನಂತರ ಫ್ಯಾಸಿಸಂ ವಿರುದ್ಧ ವಿಶ್ವದ ಜನರ ಯುದ್ಧವಾಗಿ ಬದಲಾಯಿತು. ಆಗ ಹಿಟ್ಲರನ ಫ್ಯಾಸಿಸಂನ್ನು ಪ್ರಮುಖ ಶತ್ರು ಎಂದು ಪರಿಗಣಿಸಬೇಕೆಂದು ಕಾರ್ಮಿಕರ ಅಂತರ್ರಾಷ್ಟ್ರೀಯವು ವಿಶ್ವದ ಎಲ್ಲ ಕಮ್ಯುನಿಸ್ಟ್ ಪಕ್ಷಗಳಿಗೆ ಕರೆ ನೀಡಿತು. ಮಾನವಕುಲವನ್ನು ರಕ್ಷಿಸಿ, ವಿಶ್ವ ಕ್ರಾಂತಿಯ ನೆಲೆಯನ್ನು ಕಾಪಾಡಲು ಬ್ರಿಟನ್, ಅಮೇರಿಕಾ ಜೊತೆ ಸೇರಿ ಸೋವಿಯತ್ ಒಕ್ಕೂಟವು ಫ್ಯಾಸಿಸಂ ಮೇಲೆ ಯುದ್ಧವನ್ನು ಗೆಲ್ಲಬೇಕಿದೆ ಎಂದಿತು. (ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬುರೊ ನಿರ್ಣಯ, 15 ಡಿಸೆಂಬರ್ 1941)

ಬ್ರಿಟಿಷರೊಂದಿಗೆ ಕಾಂಗ್ರೆಸ್ ಸಂಧಾನದಲ್ಲಿತ್ತು. ಬ್ರಿಟಷರು ಅನೇಕ ರಿಯಾಯಿತಿಗಳನ್ನು ನೀಡಲು ಒಪ್ಪಿದರು, ಆದರೆ ಯುದ್ಧದ ನಂತರ ಮಾತ್ರ ಅಧಿಕಾರ ಹಸ್ತಾಂತರ ಮಾಡುವುದಾಗಿ ಹೇಳಿದರು. ಈ ಸಂಧಾನಗಳು ಮುರಿದು ಬಿದ್ದವು. ಜಪಾನ್ ಪಡೆಗಳು ಮುನ್ನುಗ್ಗಿ ಬ್ರಿಟಿಷ್ ಆಕ್ರಮಿತ ಪ್ರದೇಶಗಳಾದ ಸಿಂಗಾಪುರ, ಬರ್ಮಾ, ಮಲಯಾ ಮತ್ತು ಅಂಡಮಾನ್ ದ್ವೀಪಗಳನ್ನು ವಶಪಡಿಸಿಕೊಳ್ಳುತ್ತಿದ್ದಂತೆ ಭಾರತದ ಮೇಲೆ ಜಪಾನಿನ ಆಕ್ರಮಣದ ಬೆದರಿಕೆ ಹೆಚ್ಚಾಯಿತು. ಇದೇನೆ ಇದ್ದರೂ ಫ್ಯಾಸಿಸಂ ವಿರುದ್ಧ ದೀರ್ಘಕಾಲ ಪ್ರಚಾರ ಮಾಡಿದ್ದ ಕಾಂಗ್ರೆಸ್ 'ಕ್ವಿಟ್ ಇಂಡಿಯಾ' ಚಳುವಳಿಗೆ ಕರೆ ಕೊಟ್ಟಿತು. ವಸಾಹತುಶಾಹಿ ಆಡಳಿತಗಾರರು ಭಾರತವನ್ನು ಸಂಪೂರ್ಣವಾಗಿ ತೊರೆಯಬೇಕು ಎಂದು ಒತ್ತಾಯಿಸಿತು ಮತ್ತು ಬ್ರಿಟಿಷರು ಶೀಘ್ರವಾಗಿ ರಾಜಿ ಮಾಡಿಕೊಳ್ಳಲು ಒತ್ತಡ ಹೇರಿತು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕ್ವಿಟ್ ಇಂಡಿಯಾ ಕರೆಯನ್ನು ಕಮ್ಯುನಿಸ್ಟರು ವಿರೋಧಿಸಿದರು. ಫ್ಯಾಸಿಸ್ಟ್ ಶಕ್ತಿಗಳು ಜಾಗತಿಕವಾಗಿ ಬೆಳೆಯುತ್ತಿರುವ ಅಪಾಯವನ್ನು ಗಮನಿಸಿದ ಅವರು ಈ ಕರೆ ಈ ಸಮಯದಲ್ಲಿ ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟರು. ಮಿತ್ರರಾಷ್ಟ್ರಗಳ ದುರ್ಬಲಗೊಳಿಸುವಿಕೆ ಫ್ಯಾಸಿಸ್ಟ್ ವಿರೋಧಿ ಹೋರಾಟವನ್ನು ದುರ್ಬಲಗೊಳಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು. ಆದರೆ ವಸಾಹತುಶಾಹಿಯ ಯಾವುದೇ ಪ್ರಸ್ತಾಪವನ್ನು ಒಪ್ಪಲು ದೇಶದ ಜನರು ಸಿದ್ಧರಿರಲಿಲ್ಲ, ಹೀಗಾಗಿ ಕಮ್ಯುನಿಸ್ಟರ ಈ ನಿಲುವು ಆ ಸಮಯದಲ್ಲಿ ದೇಶದ ಜನರ ಭಾವನೆಗಳಿಗೆ ವಿರುದ್ಧವಾಗಿತ್ತು.

ಪುಟ 10 ಕ್ಕೆ



ಭಾರತದ ಕಮ್ಯುನಿಸ್ಟ್ ಚಳುವಳಿಗೆ ನೂರು ವರ್ಷ

ಪುಟ 9 ರಿಂದ

ಭಾರತ ಸ್ವಾತಂತ್ರ್ಯ ಪಡೆದ ನಂತರ ಈ ನಿಲುವನ್ನು ಕಮ್ಯುನಿಸ್ಟ್ ಪಕ್ಷ ಪುನಃ ಪರಿಶೀಲಿಸಿತು, ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ಜನರ ಮನಸ್ಥಿತಿಯ ವಿರುದ್ಧವಾಗಿ ಹೋಗಿದ್ದು ಗಂಭೀರ ತಪ್ಪು ಎಂದು ತೀರ್ಮಾನಿಸಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನತೆಯ ಯುದ್ಧವನ್ನು ಬೆಂಬಲಿಸುವ ಜೊತೆಗೆ, ಭಾರತದಲ್ಲಿ ಬ್ರಿಟಿಷ ವಸಾಹತುಶಾಹಿಗಳ ವಿರುದ್ಧದ ಕ್ವಿಟ್ ಇಂಡಿಯಾ ಚಳುವಳಿಯನ್ನು ಬೆಂಬಲಿಸಿ ಜನರ ಬೆನ್ನಿಗೆ ನಿಲ್ಲಬೇಕಾಗಿತ್ತು ಎಂದು ಸಿಪಿಐ ಅಭಿಪ್ರಾಯ ಪಟ್ಟಿತು. ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡುತ್ತಿದ್ದಂತೆ ಅದರ ಮುಂಚೂಣಿ ನಾಯಕರನ್ನು ಜೈಲಿಗೆ ತಳ್ಳಲಾಯಿತು, ಈ ಚಳುವಳಿಯನ್ನು ಹತ್ತಿಕ್ಕಲು ಬ್ರಿಟಿಷರು ತೀವ್ರ ಬಲ ಪ್ರಯೋಗಿಸಿದರು. ಕಾಂಗ್ರೆಸಿಗೆ ಇಂತಹ ಸಂದರ್ಭದಲ್ಲಿ ಹೋರಾಟವನ್ನು ಹೇಗೆ ಕೊಂಡೊಯ್ಯಬೇಕು ಎಂಬ ಕಣ್ಣೋಟ ಇರಲಿಲ್ಲ. ಈ ಕರೆಗೆ ವಿರುದ್ಧದ ಹೊರತಾಗಿಯೂ, ಕಮ್ಯುನಿಸ್ಟರು ಜೈಲಿನಲ್ಲಿದ್ದ ಕಾಂಗ್ರೆಸ್ ನಾಯಕರ ಬಿಡುಗಡೆಗಾಗಿ ಹೋರಾಟ ನಡೆಸಿದರು ಮತ್ತು ರಾಷ್ಟ್ರಿಯ ಏಕತಾ ಸರ್ಕಾರವನ್ನು ರಚಿಸಬೇಕೆಂದು ಒತ್ತಾಯಿಸಿದರು.

1934ರಲ್ಲಿ ಹೇರಿದ್ದ ಕಮ್ಯುನಿಸ್ಟ್ ಪಕ್ಷದ ನಿಷೇಧವನ್ನು 1942ರ ಜುಲೈ ತಿಂಗಳಲ್ಲಿ ತೆರವುಗೊಳಿಸಿ ಕಮ್ಯುನಿಸ್ಟರನ್ನು ಜೈಲಿನಿಂದ ಬಿಡುಗಡೆಗೊಳಿಸಲಾಯಿತು. ಈ ಜಾಗತಿಕ ಯುದ್ಧದ ಮಧ್ಯೆ 1943–44ರ ಸುಮಾರಿನಲ್ಲಿ ಭೀಕರ ಬಂಗಾಳ ಬರಗಾಲದ ಪರಿಣಾಮವಾಗಿ ಬಂಗಾಳ, ಓರಿಸ್ಸಾ, ಬಿಹಾರ ಮತ್ತು ಅಸ್ಸಾಂನಲ್ಲಿ 30 ಲಕ್ಷ ಜನ ಸಾವನ್ನಪ್ಪಿದರು. ಅರ್ಥಶಾಸ್ತ್ರಜ್ಞೆ ಉತ್ಸಾ ಪಟ್ನಾಯಕ್ ಹೇಳುವ ಪ್ರಕಾರ "ಬ್ರಿಟಿಷರು ದಕ್ಷಿಣ ಏಷ್ಯಾದಲ್ಲಿ ಜಪಾನಿನ ವಿರುದ್ಧದ ಯುದ್ಧಕ್ಕಾಗಿ ಮಿತ್ರರಾಷ್ಟ್ರಗಳಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಲು 'ಲಾಭದ–ಉಬ್ಬರ' ಸೃಷ್ಟಿಸಿದ ಮತ್ತು ಜನರ ಜೀವನಾವಶ್ಯಕ ವಸ್ತುಗಳನ್ನುಕಡಿತಗೊಳಿಸಿದ ಪ್ರಜ್ಞಾಪೂರ್ವಕ ನೀತಿಯ ಪರಿಣಾಮವಾಗಿ ಈ ಬರಗಾಲ ಸಂಭವಿಸಿತು." ಈ ಸಂದರ್ಭದಲ್ಲಿ ಕಮ್ಯುನಿಸ್ಟರು ಜನರಿಗೆ ಆಹಾರ ಮತ್ತು ಅಗತ್ಯ ವಸ್ತುಗಳನ್ನು ಪೂರೈಸಲು ಹಗಲು ರಾತ್ರಿಯೆನ್ನದೇ ದುಡಿದರು, ಅಕ್ರಮವಾಗಿ ಆಹಾರ ಧಾನ್ಯಗಳು ಸೇರಿದಂತೆ ಜೀವನಾವಶ್ಯಕ ವಸ್ತುಗಳನ್ನು ದಾಸ್ತಾನು ಮಾಡಿದ್ದ ವ್ಯಾಪಾರಿ ವರ್ಗ ಮತ್ತು ಭೂಮಾಲೀಕ ವರ್ಗದ ವಿರುದ್ಧ ಚಳುವಳಿಯನ್ನು ಕಟ್ಟಿದರು ಮತ್ತು ಅವರಿಗೆ ನೆರವು ನೀಡುತ್ತಿದ್ದ ಬ್ರಿಟಿಷ್ ಆಡಳಿತಗಾರರ ಜನವಿರೋಧಿ ಪಾತ್ರವನ್ನು ಬಯಲಿಗೆಳೆದರು. ಮಾನವ ಕಳ್ಳಸಾಗಾಣಿಕೆಯಿಂದ ಯುವತಿಯರನ್ನು ರಕ್ಷಿಸಲು ಮಹಿಳಾ ಆತ್ಮರಕ್ಷಾ ಸಮಿತಿಯನ್ನು ರಚಿಸಲಾಯಿತು, ಸ್ವಯಂಸೇವಕರು ಮತ್ತು ವೈದ್ಯಕೀಯ ತಂಡಗಳನ್ನು ಸಜ್ಜುಗೊಳಿಸಿ ಪರಿಹಾರ ಕಾರ್ಯಗಳಿಗೆ ಕಳುಹಿಸಲಾಯಿತು. ಇಂತಹ ದಣಿವಿಲ್ಲದ ಕೆಲಸದ ಪರಿಣಾಮವಾಗಿ, ಯುದ್ಧದ ಕುರಿತು ಜನರ ಭಾವನೆಗಳ ವಿರುದ್ಧದ ನಿಲುವನ್ನು ತೆಗೆದುಕೊಂಡಿದ್ದರೂ ಸಹ, ಕಮ್ಯುನಿಸ್ಟ್ ಪಕ್ಷಕ್ಕೆ ಜನಸಮೂಹದ ಬೆಂಬಲ ಗಮನಾರ್ಹವಾಗಿ ಹೆಚ್ಚಾಯಿತು. ಇದರ ಮೂಲಕ ಕಮ್ಯುನಿಸ್ಟರು ತಮ್ಮ ಸ್ವತಂತ್ರ ಶಕ್ತಿಯನ್ನು ಉಳಿಸಿಕೊಂಡರು.

ಯುದ್ಧಾನಂತರದ ಹೋರಾಟಗಳ ಅಲೆ

ಎರಡನೇ ಜಾಗತಿಕ ಮಹಾಯುದ್ಧವು ಅಂತ್ಯವಾದ ನಂತರ, ಭಾರತದಲ್ಲಿ ಜನಸಮೂಹದ ಹೋರಾಟಗಳ ಅಲೆಯೇ ಎದ್ದಿತು. ಅವುಗಳಲ್ಲಿ ಹಲವು ಹೋರಾಟಗಳ ನೇತೃತ್ವವನ್ನು ಕಮ್ಯುನಿಸ್ಟ್ ಪಕ್ಷ ವಹಿಸಿತ್ತು. ಯುದ್ಧದ ಸಮಯದಲ್ಲಿ ದೇಶದ ವಿವಿಧ ಪ್ರದೇಶಗಳಲ್ಲಿ ಕಟ್ಟಿದ್ದ ಪಕ್ಷದ ಬಲವನ್ನು ಜನಸಮೂಹದ ಕಾರ್ಯಾಚರಣೆಗೆ ಸಜ್ಜುಗೊಳಿಸಲಾಯಿತು.

ಜಾಗತಿಕ ಯುದ್ಧ ಅಂತ್ಯ ಆಗುತ್ತಿದ್ದಂತೆ, ದೇಶದಲ್ಲಿ 50 ಲಕ್ಷದಿಂದ 70 ಲಕ್ಷದಷ್ಟು ಕಾರ್ಮಿಕರನ್ನು ಕೆಲಸದಿಂದ ವಜಾಮಾಡಲಾಯಿತು ಮತ್ತು ಅಗತ್ಯವಸ್ತುಗಳ ಬೆಲೆ ಗಗನಕ್ಕೇರಿತು. ಇದರ ವಿರುದ್ಧ ಪ್ರತಿಭಟನೆಗಳ ಜೊತೆಗೆ ಭಾರತದ ಸ್ವಾತಂತ್ರಕ್ಕಾಗಿ ನಡೆಯುತ್ತಿರುವ ಚಳುವಳಿಯನ್ನು ಬಲಪಡಿಸಲು ಕಾರ್ಮಿಕ ವರ್ಗದ ಹೋರಾಟಗಳ ಅಲೆಯೇ ಮೂಡಿ ಬಂದಿತು. ಇದರಲ್ಲಿ ಅಂಚೆ ಕಛೇರಿ ಕಾರ್ಮಿಕರ ಹೋರಾಟ ಮತ್ತು 1946ರಲ್ಲಿ ನಡೆದ ರೈಲ್ವೆ ಕಾರ್ಮಿಕರ ಹೋರಾಟಗಳು ಸೇರಿದ್ದವು.

1946ರ ಫೆಬ್ರುವರಿಯಲ್ಲಿ ನಡೆದ ರಾಯಲ್ ಇಂಡಿಯನ್ ನೇವಿ (ಆರ್.ಐ.ಎನ್ – ರಿನ್) ನೌಕಾದಳದ ಸೈನಿಕರ ದಂಗೆ ಇತಿಹಾಸದಲ್ಲಿಯೇ ಮಹತ್ವದ ಹೋರಾಟವಾಗಿದೆ. ಬಾಂಬೆಯ ನೌಕಾದಳದ ಸೈನಿಕರು ಮುಷ್ಕರ ನಡೆಸಿ ರಾಷ್ಟ್ರೀಯ ಹೋರಾಟದಲ್ಲಿ ಮುಂಚೂಣಿ ನಾಯಕತ್ವ ವಹಿಸಿದ್ದ ಪಕ್ಷಗಳ ಧ್ವಜಗಳನ್ನು ನೌಕೆಯಲ್ಲಿ ಹಾರಿಸಿದರು. ಅದರಲ್ಲಿ ಕೆಂಪು ಧ್ವಜವು ಸೇರಿತ್ತು. ನೌಕಾದಳದ ಸೈನಿಕರು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಉನ್ನತ ಅಧಿಕಾರಿಗಳನ್ನೆಲ್ಲ ಬಂಧಿಸಿದರು. ಈ ಬಂಡಾಯಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ ಸಂಪೂರ್ಣ ಬೆಂಬಲ ಸೂಚಿಸಿ 1946ರ ಫೆಬ್ರುವರಿ 22ರಂದು ದೇಶವ್ಯಾಪಿ ಹೋರಾಟಕ್ಕೆ ಕರೆ ನೀಡಿತು. ಇದರ ಭಾಗವಾಗಿ ಲಕ್ಷಾಂತರ ಕಾರ್ಮಿಕರು ಬೀದಿಗಿಳಿದು ಹೋರಾಟ ನಡೆಸಿದರು, ವ್ಯಾಪಾರಿಗಳು ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಪ್ರತಿಭಟಿಸಿದರು ಮತ್ತು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು. ಆದರೆ ಅಂತಿಮವಾಗಿ, ದಂಗೆಯೆದ್ದ ನೌಕಾ ಪಡೆ ಮುಷ್ಕರ ವಾಪಸ್ಸು ಪಡೆದು ಶರಣಾಯಿತು. ಆದರೆ ಕಮ್ಯುನಿಸ್ಟ್ ನೇತೃತ್ವದ ಹೋರಾಟಗಳ ಫಲವಾಗಿ ಅವರು ಗಳಿಸಿದ್ದ ಅಭೂತಪೂರ್ವ ಜನ ಬೆಂಬಲ ಅವರ ಪೂರ್ಣ ವಿನಾಶವನ್ನು ತಡೆಯಿತು.

ಈ ಅವಧಿಯಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಭೂಮಾಲೀಕರ ಶೋಷಣೆಯ ವಿರುದ್ಧವಾಗಿ ಕಮ್ಯುನಿಸ್ಟರ ನೇತೃತ್ವದಲ್ಲಿ ರೈತರು ಬೃಹತ್ ರೀತಿಯಲ್ಲಿ ಸಂಘಟಿತರಾದರು. ಎಲ್ಲೆಡೆ ಸಿಪಿಐ ಪಕ್ಷ ಶತಮಾನಗಳಿಂದ ಹಳ್ಳಿಗಳಲ್ಲಿದ ಆರ್ಥಿಕ ಮತ್ತು ಸಾಮಾಜಿಕ ಶೋಷಣೆಯ ವಿವಿಧ ರಚನೆಗಳನ್ನು ಕೊನೆಗಾಣಿಸಲು ಪ್ರಯತ್ನಿಸಿತು. ಕೆಲವು ಪ್ರದೇಶಗಳಲ್ಲಿ ಕಮ್ಯುನಿಸ್ಟರ ನೇತೃತ್ವದ ರೈತ ಹೋರಾಟಗಳು ಸಶಸ್ತ್ರ ದಂಗೆಗಳಾಗಿ ಬದಲಾದವು. ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರ, ಬಂಗಾಳ, ಅಸ್ಸಾಂ, ತ್ರಿಪುರ ಮತ್ತು ಕಾಶ್ಮೀರದುದ್ದಕ್ಕೂ ರೈತರು ಮತ್ತು ರೈತ ಮಹಿಳೆಯರು ಬೃಹತ ರೀತಿಯಲ್ಲಿ ಸಂಘಟಿತರಾದರು. ಈ ಸಂಘಟಿತ ರೈತರ ಐಕ್ಯತೆಯು ಆಳುವ ವರ್ಗಗಳನ್ನು ಬೆಚ್ಚಿ ಬೀಳಿಸಿತು, ಇದನ್ನು ಅಡಗಿಸಲು ಆಳುವ ವರ್ಗಗಳು ತೀವ್ರ ಹಿಂಸಾಚಾರದ ಮಾರ್ಗವನ್ನು ಬಳಸಿದವು. ಅಂತಿಮವಾಗಿ ರೈತರು ತಾವು ಹೋರಾಡುತ್ತಿದ್ದ ಹಲವಾರು ಹಕ್ಕುಗಳಿಗಾಗಿ ವಿಜಯ ಸಾಧಿಸಿ ಕಮ್ಯುನಿಸ್ಟ್ ಚಳುವಳಿಗೆ ಹೆಚ್ಚಿನ ಬಲ ತುಂಬಿದರು.

ತೇಭಾಗ ಚಳುವಳಿ

1946ರಿಂದ 1950ರವರೆಗೆ ಕಮ್ಯುನಿಸ್ಟ್ ನೇತೃತ್ವದ ಅಖಿಲ ಭಾರತ ಕಿಸಾನ ಸಭಾದ ಅಡಿಯಲ್ಲಿ ಬಂಗಾಳದಲ್ಲಿ ನಡೆದ ತೇಭಾಗ ಚಳುವಳಿಯು ರೈತವರ್ಗದ ಅತ್ಯಂತ ಪ್ರಮುಖವಾದ ಭಾರೀ ಹೋರಾಟವಾಗಿತ್ತು. ಪಾಲುದಾರ ಗೇಣಿ ರೈತರು ತಾವು ಬೆಳೆದ ಬೆಳೆಯಲ್ಲಿ ಕೇವಲ ಅರ್ಧದಷ್ಟು ಪಾಲನ್ನು ಮಾತ್ರ ಪಡೆದು, ಉಳಿದ ಅರ್ಧ ಬೆಳೆಯನ್ನು ಭೂಮಾಲಿಕರಿಗೆ ನೀಡುತ್ತಿದ್ದರು. ಪಾಲುದಾರ ಗೇಣಿ ರೈತರಿಗೆ ಅವರು ಬೆಳೆದ ಬೆಳೆಯಲ್ಲಿ ಮೂರನೇ ಎರಡರಷ್ಟು ಪಾಲನ್ನು ನೀಡಬೇಕೆಂದು ಮತ್ತು ಭೂಮಿಯ ಗೇಣಿಯನ್ನು ಇಳಿಸಲು ತೇಭಾಗ ಚಳುವಳಿಯು ಒತ್ತಾಯಿಸಿತು. ತೇಭಾಗ ಎಂದರೆ "ಮೂರು ಪಾಲು" ಎಂದರ್ಥ. ಬೆಳೆಯನ್ನು ಮೂರು ಪಾಲುಗಳನ್ನಾಗಿ ಮಾಡಿ, ಅದರಲ್ಲಿ ಎರಡು ಪಾಲುಗಳನ್ನು ಪಾಲುದಾರ ಗೇಣಿ ರೈತನಿಗೆ ಸಲ್ಲಬೇಕೆಂಬ ಬೇಡಿಕೆಯನ್ನು ಚಳುವಳಿ ಒಳಗೊಂಡಿತ್ತು. ಈ ಚಳುವಳಿಯ ಅವಧಿಯಲ್ಲಿ ಕಲ್ಕತ್ತಾ ಮತ್ತು ಪೂರ್ವ ಬಂಗಾಳದ ನೌಖಾಲಿ ಜಿಲ್ಲೆಯಲ್ಲಿ ಕೋಮುಗಲಭೆಗಳು ಘಟಿಸಿದವು. ಆದರೆ ಅದಕ್ಕೆ ತದ್ವಿರುದ್ಧವಾಗಿ ತೇಭಾಗ ಚಳುವಳಿಯು ವರ್ಗ ಹೋರಾಟದ ಮೂಲಕ ಹಿಂದು–ಮುಸ್ಲಿಂ ಐಕ್ಯತೆಯ ಅದ್ಭುತ ಉದಾಹರಣೆಯನ್ನು ನೀಡಿತು. ಕಿಸಾನ ಸಭಾ ಪ್ರಭಾವಕ್ಕೆ ಒಳಗಾಗಿದ್ದ ಪ್ರದೇಶಗಳು ಕೋಮುಗಲಭೆಗಳಿಂದ ಮುಕ್ತವಾಗಿದ್ದವು. ತೇಭಾಗ ಚಳುವಳಿಯಲ್ಲಿ ಹಿಂದು, ಮುಸ್ಲಿಂ ಮತ್ತು ಬುಡಕಟ್ಟು ಸಮುದಾಯಗಳ ಪುರುಷರು, ಮಹಿಳೆಯರು ಸೇರಿದಂತೆ 73 ಜನರು ಪೋಲಿಸ್ ಹಿಂಸಾಚಾರದಲ್ಲಿ ಸಾವನ್ನಪ್ಪಿದರು. ಬಂಗಾಳ ಮುಸ್ಲಿಂ ಲೀಗ್ ಮಂತ್ರಿಮಂಡಲದ ಕ್ರೂರ ದಬ್ಬಾಳಿಕೆಗಳ ನಡುವೆಯೂ ತೇಭಾಗ ಚಳುವಳಿಯು ಯಶಸ್ವಿಯಾಯಿತು, ಅನೇಕ ಪ್ರದೇಶಗಳಲ್ಲಿ ಪಾಲುದಾರ ರೈತರು ತಮ್ಮ ಬೇಡಿಕೆಯ ಹಕ್ಕುಗಳನ್ನು ಗಳಿಸುವಲ್ಲಿ ವಿಜಯಶಾಲಿಯಾದರು.

ತೆಲಂಗಾಣ ಸಶಸ್ತ್ರ ಹೋರಾಟ

ತೆಲಂಗಾಣ ಹೋರಾಟವು ಭಾರತದ ಇತಿಹಾಸದಲ್ಲಿಯೇ ಕಮ್ಯುನಿಸ್ಟ್ ನೇತೃತ್ವದಲ್ಲಿ ನಡೆದ ಅತಿ ದೊಡ್ಡ ಸಶಸ್ತ್ರ ಹೋರಾಟ. ತೆಲುಗು ಮಾತನಾಡುವ ತೆಲಂಗಾಣ ಪ್ರಾಂತದಲ್ಲಿ 1946ರಿಂದ 1951ರವರೆಗೆ ಈ ಹೋರಾಟ ನಡೆಯಿತು. ಆ ಸಂದರ್ಭದಲ್ಲಿ ತೆಲಂಗಾಣವು ನಿಜಾಮ ಆಡಳಿತದ ಹೈದರಬಾದ್ ಸಂಸ್ಥಾನದ ಭಾಗವಾಗಿತ್ತು. ಈ ಸಂಸ್ಥಾನವು ಬ್ರಿಟಿಷ್ ಅಧೀನತೆಯನ್ನು ಒಪ್ಪಿ ಪರೋಕ್ಷವಾಗಿ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಸಂಸ್ಥಾನಗಳಲ್ಲೊಂದಾಗಿತ್ತು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ತೆಲಂಗಾಣ ಹೋರಾಟವು ನಿಜಾಮನ ನಿರಂಕುಶ ಆಡಳಿತ ಮತ್ತು ಭೂಮಾಲೀಕರ ಶೋಷಣೆಯ ವಿರುದ್ಧ ವೀರೋಚಿತ ಹೋರಾಟ ನಡೆಸಿತು. ಅನ್ಯಾಯದ ತೆರಿಗೆ ಮತ್ತು ಜೀತ ಪದ್ಧತಿಯನ್ನು ರದ್ದುಪಡಿಸುವುದು ಮತ್ತು ಉಳುವ ರೈತನಿಗೆ ಭೂಮಿ ಒಡೆತನ ನೀಡುವ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಈ ಹೋರಾಟವು ಆರಂಭವಾಯಿತು. ಈ ಹೋರಾಟವು ಪ್ರಬಲವಾಗುತ್ತಿದ್ದಂತೆ ನಿಜಾಮನ ಸೈನಿಕರಾದ ರಜಾಕಾರರು ಮತ್ತು ಪೋಲಿಸರು ತೀವ್ರ ಹಿಂಸೆಯ ಮೂಲಕ ಚಳುವಳಿಯನ್ನು ಅಡಗಿಸಲು ಪ್ರಯತ್ನಿಸಿದರು. ಈ ಹಿಂಸೆಯಲ್ಲಿ ಹಲವಾರು ಕಮ್ಯುನಿಸ್ಟರು ಸಾವನ್ನಪ್ಪಿದರು. ಇದರ ಪರಿಣಾಮ ಹೋರಾಟವು ಸಶಸ್ತ್ರ ಹೋರಾಟವಾಗಿ ಬದಲಾಯಿತು. ಈ ಸಶಸ್ತ್ರ ಚಳುವಳಿಯು 30 ಲಕ್ಷ ಜನಸಂಖ್ಯೆಯುಳ್ಳ 3000 ಹಳ್ಳಿಗಳನ್ನು ಹಿಡಿತಕ್ಕೆ ತೆಗೆದುಕೊಂಡಿತು. ಈ ಹೋರಾಟದ ಫಲವಾಗಿ ಪಡೆದಿದ್ದ 10 ಲಕ್ಷ ಎಕರೆ ಭೂಮಿಯನ್ನು ರೈತರಿಗೆ ಹಂಚಲಾಯಿತು. ಅಲ್ಲದೇ ಜೀತ ಪದ್ಧತಿಯನ್ನು ನಿಷೇಧಗೊಳಿಸಲಾಯಿತು, ದಿನಗೂಲಿ ಕಾರ್ಮಿಕರ ವೇತನವನ್ನು ಹೆಚ್ಚಿಸಲಾಯಿತು ಮತ್ತು ಕನಿಷ್ಠ ವೇತನವನ್ನು ನಿಗದಿಪಡಿಸಲಾಯಿತು. ಈ ಹಳ್ಳಿಗಳಲ್ಲಿ ಸ್ವಯಂ–ಸಂಘಟಿತ ಸಮಿತಿಗಳನ್ನು ರಚಿಸಿ ಶಿಕ್ಷಣ, ಆರೋಗ್ಯ ಮತ್ತು ಇತರ ಸೇವೆಗಳನ್ನು ಆರಂಭಿಸಲಾಯಿತು.

ಸೆಪ್ಟೆಂಬರ್ 13, 1948ರಂದು ಕೇಂದ್ರದ ಕಾಂಗ್ರೆಸ್ ಸರ್ಕಾರವು ಕಮ್ಯುನಿಸ್ಟ್ ನೇತೃತ್ವದ ಹೋರಾಟವನ್ನು ಹತ್ತಿಕ್ಕಲು ಮತ್ತು ನಿಜಾಮ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ವಿಲೀನಗೊಳಿಸಲು ಪೋಲಿಸ್ ಕಾರ್ಯಾಚರಣೆಗೆ ಮುಂದಾಯಿತು. ಪರಿಣಾಮವಾಗಿ ಹೈದರಾಬಾದ್‌ನ ನಿಜಾಮನು ಶರಣಾಗತನಾಗಿ ತನ್ನ ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ವಿಲೀನಗೊಳಿಸಿದ್ದಾಗಿ ಪ್ರಕಟಿಸಿದ. ಆದರೆ ಇಡಿ ಹೈದರಾಬಾದ್ ಪ್ರದೇಶವನ್ನು ಪೂರ್ಣವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳಲು ಕಾಂಗ್ರೆಸ್ ಸರ್ಕಾರಕ್ಕೆ ಆಗಲಿಲ್ಲ. ಭಾರತದ ಸೇನೆ ರೈತ ಹೋರಾಟವನ್ನು ಹತ್ತಿಕ್ಕಲು ಹಳ್ಳಿಗಳಿಗೆ ಪ್ರವೇಶಿಸಿತು. ಈ ಹಿಂದೆ ನಿಜಾಮನ ಅಧೀನದಲ್ಲಿದ್ದ ಸ್ಥಳೀಯ ಆಡಳಿತಾಧಿಕಾರಿಗಳು ಮತ್ತು ಪಾಳೆಗಾರರು ಭಾರತೀಯ ಸೇನೆಯ ಜೊತೆ ಕೈ ಜೋಡಿಸಿ ತಮ್ಮ ಭೂಮಿಯನ್ನು ಪುನಃ ವಶಪಡಿಸಿಕೊಳ್ಳಲು ಮುಂದಾದರು. ಆಗ ಹಲವಾರು ಕಡೆ ಇದರ ವಿರುದ್ಧ ಜನರು ಪ್ರತಿರೋಧ ಒಡ್ಡಿ ಯಶಸ್ವಿಯಾದರು. ಆದರೆ ಸೇನೆಯ ದಮನದಿಂದ 4 ಸಾವಿರ ಕಮ್ಯುನಿಸ್ಟರು ಮತ್ತು ರೈತ ನಾಯಕರು ಕೊಲೆಗೀಡಾದರು, ಅಲ್ಲದೇ 10 ಸಾವಿರಕ್ಕಿಂತಲೂ ಹೆಚ್ಚಿನ ಜನರನ್ನು ಯಾತನಾ ಶಿಬಿರಗಳಲ್ಲಿ ಬಂಧಿಸಿ ಮೂರರಿಂದ ನಾಲ್ಕು ವರ್ಷಗಳ ಕಾಲ ಚಿತ್ರಹಿಂಸೆಯನ್ನು ನೀಡಲಾಯಿತು.

ಪುನ್ನಪ್ರ ವಯಲಾರ್ ದಂಗೆ

ಪುನ್ನಪ್ರ ಮತ್ತು ವಯಲಾರ್, ಕೇರಳ ರಾಜ್ಯದ ಅಲಪ್ಪುಳ ಜಿಲ್ಲೆಯ ಎರಡು ಹಳ್ಳಿಗಳು. ಈ ಹಳ್ಳಿಗಳು 1946ರಲ್ಲಿ ತಿರುವಾಂಕೂರು ರಾಜ ಮತ್ತು ಅವನ ಪ್ರಧಾನ ಮಂತ್ರಿಯ ನಿರಂಕುಶ ಆಡಳಿತದ ವಿರುದ್ಧ ನಡೆದ ಧೀರೋದ್ದಾತ ಹೋರಾಟದ ಪ್ರಮುಖ ಕೇಂದ್ರ ಬಿಂದುಗಳಾಗಿವೆ. ತಿರುವಾಂಕೂರು ಸಂಸ್ಥಾನ ಹೈದರಾಬಾದ್ ಸಂಸ್ಥಾನದ ರೀತಿಯ ರಾಜಪ್ರಭುತ್ವವಾಗಿತ್ತು. ಅದನ್ನು ಆಳುತ್ತಿದ್ದ ತಿರುವಾಂಕೂರು ರಾಜ ಸ್ವತಂತ್ರ ಭಾರತಕ್ಕೆ ಸೇರಲು ಸಿದ್ಧವಿರಲಿಲ್ಲ. ಭಾರತವು ಅಂಗೀಕರಿಸಿದ ಸಂಸದೀಯ ವ್ಯವಸ್ಥೆಗೆ ಪ್ರತಿಯಾಗಿ 'ಅಮೇರಿಕನ್ ಮಾದರಿ'ಯ ಅಧ್ಯಕ್ಷೀಯ ಕಾರ್ಯಾಂಗ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಬಯಸಿದ್ದ. ಇದರ ವಿರುದ್ಧ ಕಮ್ಯುನಿಸ್ಟ್ ಪಕ್ಷ ನೇತೃತ್ವದ ಕಾರ್ಮಿಕ ವರ್ಗವು ಸಿಡಿದು ನಿಂತಿತು, ಕಾರ್ಮಿಕರು ಮತ್ತು ಪೋಲಿಸರ ನಡುವೆ ತೀವ್ರ ಸಂಘರ್ಷಗಳಾದವು. ಅಕ್ಟೋಬರ್ 24ರಿಂದ 27ರ ನಡುವೆ ಪೋಲಿಸರು ಗುಂಡಿನ ದಾಳಿಗೈದು ನೂರಾರು ಕಾರ್ಮಿಕರನ್ನು ಕೊಂದರು. ಈ ಘಟನೆ ನಡೆದು ವರ್ಷದ ಒಳಗೆ ಜನರಿಂದ ತೀವ್ರ ಅಪಖ್ಯಾತಿಗೆ ಒಳಗಾದ ಪ್ರಧಾನಮಂತ್ರಿ ತಿರುವಾಂಕೂರನ್ನು ಬಿಡಬೇಕಾಯಿತು. ತದನಂತರ ಕಮ್ಯುನಿಸ್ಟರ ಬೇಡಿಕೆಯಂತೆ ತಕ್ಷಣವೇ ತಿರುವಾಂಕೂರು ಸಂಸ್ಥಾನ ಭಾರತದ ಜೊತೆ ವಿಲೀನವಾಗಿ ವಾಸ್ತವದಲ್ಲಿ ಈಡೇರಿತು. ಮತ್ತು ಈ ಹೋರಾಟವು ಮಲಯಾಳಂ ಮಾತನಾಡುವ ಪ್ರದೇಶಗಳಾದ ತಿರುವಾಂಕೂರು, ಕೊಚ್ಚಿ ಮತ್ತು ಮದ್ರಾಸ ಪ್ರೆಸಿಡೆನ್ಸಿಯ ಭಾಗವಾಗಿದ್ದ ಮಲಬಾರ್ ಜಿಲ್ಲೆಗಳನ್ನು ಒಂದುಗೂಡಿಸಿ ಏಕಭಾಷೆಯ ಆಧಾರದ ಮೇಲೆ ಕೇರಳ ರಾಜ್ಯ ರಚನೆಯಾಗಲೂ ಮುನ್ನುಡಿ ಹಾಡಿತು. ●

ಶತಮಾನೋತ್ಸವ ಲೇಖನಮಾಲೆ-48

100

1920-2020

ಪಕ್ಷದ ಮೇಲೆ ದಾಳಿ : 1962–63

ಭಾರತ–ಚೀನಾ ಗಡಿ ವಿವಾದ ಅಕ್ಟೋಬರ್ 1962ರಲ್ಲಿ ಹೊತ್ತಿಕೊಂಡಾಗ ಕಾಂಗ್ರೆಸ್ ಸರ್ಕಾರವು ಭಾರತ ರಕ್ಷಣಾ ಕಾಯಿದೆಯ ಅಡಿಯಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿತು ಮತ್ತು ವಿಚಾರಣೆಯಿಲ್ಲದೇ ಜನರನ್ನು ಬಂಧಿಸಲು ಶುರುಮಾಡಿತು. ಈ ಅಸಾಧಾರಣ ಕ್ರಮಗಳನ್ನು ಬಳಸಿ ಪಕ್ಷದ ನಾಯಕತ್ವದ ಒಂದು ವಿಭಾಗವನ್ನು –ವರ್ಗ ಸಹಕಾರ ನಿಲುವನ್ನು ವಿರೋಧಿಸುತ್ತಿದ್ದ ಹಾಗೂ ಎರಡು ನೆರೆಹೊರೆಯ ದೇಶಗಳ ನಡುವಿನ ವಿವಾದವನ್ನು ಶಾಂತಿಯುತ ಸಂಧಾನಗಳ ಮೂಲಕ ಶಾಂತಿಯುತವಾಗಿ ಪರಿಹರಿಸಿಕೊಳ್ಳಬೇಕು ಎಂದು ಪ್ರತಿಪಾದಿಸುತ್ತಿದ್ದ ವಿಭಾಗವನ್ನು – ಬಂಧಿಸಲಾಯಿತು.

ಡಾಂಗೆಯ ನೇತೃತ್ವದ ಪರಿಷ್ಕರಣವಾದಿ ನಾಯಕತ್ವವು, ಈ ಹಲ್ಲೆಗಳನ್ನು ಖಂಡಿಸುವ ಬದಲು ತಮ್ಮ ವರ್ಗ ಹೊಂದಾಣಿಕೆಯ ನಿಲುವನ್ನು ಮುಂದುವರಿಸಲು. 'ದೇಶವಿರೋಧಿಗಳು' ಮತ್ತು 'ಚೈನಾಪರ' ಎಂಬ ಆರೋಪ ಹೊರಿಸಿತು.

ಆದ್ದರಿಂದ, 1962–63ರ ಅವಧಿಯನ್ನು ಪಕ್ಷದ ಮೇಲಿನ, ನಿರ್ದಿಷ್ಟವಾಗಿ ವರ್ಗ ಹೋರಾಟದ ಧೋರಣೆ ಹೊಂದಿದವರ ಮೇಲಿನ ಹಲ್ಲೆಯ ಅವಧಿ ಎಂದು ಗುರುತಿಸಲಾಗುತ್ತದೆ. 1954ರಿಂದಲೂ ಇದ್ದ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳು ಇನ್ನೂ ಹೆಚ್ಚಾದವು, ಹಿಂದೆ ತಿರುಗಿ ಹೋಗಲಾರದಂತಹ ಹಂತ ತಲುಪಿತು. ಈ ಭಿನ್ನಾಭಿಪ್ರಾಯಗಳು ಪಕ್ಷದ ಉನ್ನತ ಸ್ಥಾನದಲ್ಲಿನ ಮುಖಂಡರ ನಡುವೆ ಮಾತ್ರ ಇದ್ದದ್ದು, ಈಗ ಪಕ್ಷದ ಕೆಳಗಿನ ಮಟ್ಟದವರೆಗೂ ಪಸರಿಸಿತು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

1962ರ ಮೂರನೇ ಸಾರ್ವತ್ರಿಕ ಚುನಾವಣೆ ಎದುರಿಸುವ ಸಲುವಾಗಿ, ಪಕ್ಷದ ಭಿನ್ನಾಭಿಪ್ರಾಯಗಳನ್ನು ಹಿನ್ನೆಲೆಗೆ ಸರಿಸಲಾಯಿತು. ಪ್ರಜಾಪ್ರಭುತ್ವದ ಬೆಳವಣಿಗೆಗೆ ಮತ್ತು 'ಜನಸಮೂಹದ ಮುನ್ನಡೆಯ ಉದ್ದೇಶ'ಕ್ಕೆ ಕಾಂಗ್ರೆಸ್ ಪಕ್ಷವು ಅಡ್ಡಿಯಾಗುತ್ತಿದ್ದುದು ಸಾಬೀತಾಗಿದ್ದರಿಂದ ಅದರ ಏಕಸ್ವಾಮ್ಯವನ್ನು ಭೇದಿಸಿ ಮುಂದೆ ಹೋಗುವುದು ಚುನಾವಣಾ ತಂತ್ರದ ತಿರುಳಾಗಬೇಕೆಂದು ತೀರ್ಮಾನಿಸಲಾಯಿತು. ಸಂಸತ್ತು ಮತ್ತು ಹಲವಾರು ರಾಜ್ಯ ವಿಧಾನಸಭೆಗಳಲ್ಲಿ ಕಮ್ಯುನಿಸ್ಟರ ಪ್ರಾತಿನಿಧ್ಯವನ್ನು ಹೆಚ್ಚಿಸಬೇಕೆಂದು ಕರೆನೀಡಲಾಯಿತು.

ಹೆಚ್ಚುತ್ತಿದ್ದ ನಿರುದ್ಯೋಗಿಗಳ ಸಂಖ್ಯೆ ಮತ್ತು ಆಶ್ವಾಸನೆಗೆ ತಕ್ಕಂತೆ ಆರ್ಥಿಕತೆಯನ್ನು ಉತ್ತಮಗೊಳಿಸುವಲ್ಲಿನ ವೈಫಲ್ಯತೆಯ ಹಿನ್ನೆಲೆಯಲ್ಲಿ ಈ ಚುನಾವಣೆಗಳನ್ನು ನಡೆಸಲಾಯಿತು. ಹದಿನೈದು ವರ್ಷಗಳ ಸ್ವತಂತ್ರ ಭಾರತದ ಆರ್ಥಿಕ ಹಾದಿಯ ಬಹು ಮುಖ್ಯ ಫಲಾನುಭವಿಗಳಾಗಿ ಆಗತಾನೇ ರೂಪುಗೊಳ್ಳುತ್ತಿದ್ದ ಭಾರತೀಯ ದೊಡ್ಡ ಬಂಡವಾಳಗಾರರು ಹೊರಹೊಮ್ಮಿದ್ದರು, ಏಕೆಂದರೆ ಅವರ ಸಂಪತ್ತು ಒಂದೇ ಸಮನಾಗಿ ಹೆಚ್ಚಾಗುತ್ತಿತ್ತು. ಮತ್ತೊಂದೆಡೆ, ಕಾರ್ಮಿಕ ವರ್ಗದವರಿಗೆ ಸಾಕಾಗುವಷ್ಟು, ಅಗತ್ಯ ವಸ್ತುಗಳ ಬೆಲೆಯು ನಿರಂತರವಾಗಿ ಏರುತ್ತಿದ್ದರಿಂದ ಹೆಚ್ಚಾಗುತ್ತಿದ್ದ ಜೀವನ ವೆಚ್ಚವನ್ನು ಸರಿದೂಗಿಸುವಷ್ಟು ಸಂಬಳವನ್ನೂ ನಿರಾಕರಿಸಲಾಗಿತ್ತು. ಅದೂ ಸಾಲದೆಂಬಂತೆ, ದೇಶದ ಬಹಳಷ್ಟು ಕಡೆಗಳಲ್ಲಿ ಆಹಾರದ ಕೊರತೆಯಿಂದಾಗಿ ಜನರ ಗೋಳು ಹೇಳತೀರದಷ್ಟಾಗಿತ್ತು. ಅದರ ಪರಿಣಾಮವಾಗಿ, ದೇಶದಾದ್ಯಂತ ಜನರ ಅತೃಪ್ತಿ ಮುಗಿಲು ಮುಟ್ಟಿತ್ತು. ಹಲವಾರು ರಾಜ್ಯಗಳಲ್ಲಿ ದೊಡ್ಡ ಹೋರಾಟಗಳು ಎದ್ದುಬಂದವು. ಈ ಪ್ರತಿಭಟನೆಗಳ ಮೇಲೆ ಸರ್ಕಾರವು ಭೀಕರ ದಾಳಿ ಶುರುಮಾಡಿತು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿ ಹೆಚ್ಚುತ್ತಾ ಹೋದವು.

ಕಾಂಗ್ರೆಸ್ ಅನುಸರಿಸುತ್ತಿದ್ದ ನೀತಿಗಳು ದೇಶದಲ್ಲಿ ಹಲವಾರು ವಿಚ್ಛಿದ್ರಕಾರಕ ಪ್ರವೃತ್ತಿಗಳಿಗೆ ಎಡೆಮಾಡಿಕೊಡುತ್ತಿವೆ ಎಂದು ಪಕ್ಷದ ಚುನಾವಣಾ ಪ್ರಣಾಳಿಕೆಯು ಹೇಳಿತ್ತು. ಕೋಮುವಾದಿ ಮತ್ತು ಪ್ರತಿಗಾಮಿ ಪಕ್ಷಗಳಾದ ಹಿಂದೂ ಮಹಾಸಭಾ, ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ಹೆಚ್ಚಾಗುತ್ತಿದ್ದ ಜನರ ಅತೃಪ್ತಿಗಳಿಗೆ ಗ್ರಾಸ ಒದಗಿಸುತ್ತಿದ್ದವು. ಅಲ್ಪಸಂಖ್ಯಾತ ಸಮುದಾಯಗಳ ಮೇಲಿನ ದಾಳಿಗಳು 'ಸಾಮಾನ್ಯ ವಿದ್ಯಮಾನಗಳಾಗಿವೆ' ಎಂದು ಕೂಡ ಪ್ರಣಾಳಿಕೆ ಹೇಳಿತ್ತು. ಪ್ರಣಾಳಿಕೆ ಸ್ಪಷ್ಟಪಡಿಸಿತ್ತು: "ಕಾಂಗ್ರೆಸ್ಸಿನ ಗಂಭೀರ ವಿಫಲತೆಗಳು ಹಾಗೂ ಅದರ ನೀತಿಗಳ ಕಾರಣವಾಗಿ ಉದ್ಭವಿಸಿರುವ ಅತೃಪ್ತಿ ಮತ್ತು ಹತಾಶೆಗಳಿಲ್ಲದಿದ್ದರೆ ಈ ಪ್ರವೃತ್ತಿಗಳು ಮತ್ತು ಅವುಗಳಿಂದಾಗಿಯೇ ಬೆಳೆಯುತ್ತಿರುವ ಪಕ್ಷಗಳು ಇಂದಿನ ಶಕ್ತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಎಂದು ನಾವು ಒತ್ತಿಹೇಳದೇ ಗತ್ಯಂತರವಿಲ್ಲ . . ಹೇಗಾದರೂ ಮಾಡಿ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಬೇಕೆನ್ನುವ ಉದ್ದೇಶದಿಂದಾಗಿಯೇ, ಹಲವಾರು ಕಾಂಗ್ರೆಸ್ ಮುಖಂಡರುಗಳೇ ಕೋಮುವಾದ, ಜಾತಿವಾದ, ಸ್ಥಳೀಯವಾದ, ಪ್ರಾಂತೀಯವಾದ ಮುಂತಾದವುಗಳ ಆಧಾರದಲ್ಲಿ ಮನವಿ ಮಾಡಲು ಶುರುಮಾಡಿದ್ದಾರೆ."

ಉಗ್ರ ಬಲಪಂಥೀಯ ಪಕ್ಷಗಳ ಬೆಳವಣಿಗೆ ಮತ್ತು ಯಶಸ್ಸುಗಳು ಪ್ರತಿಗಾಮಿ ಹಾಗೂ ಗೊಡ್ಡು ಸಂಪ್ರದಾಯಶರಣತೆಯ ಪಕ್ಷಗಳಾಗಿ, ಈ ರಾಷ್ಟ್ರೀಯ ವಿಮೋಚನೆ, ರಾಷ್ಟ್ರೀಯ ಮುನ್ನಡೆ ಮತ್ತು ಪ್ರಜಾಪ್ರಭುತ್ವದ ಮೂಲ ಉದ್ದೇಶಗಳಿಗೇ ಅಪಾಯಕಾರಿಯಾಗಲಿವೆ ಎಂದು ಪಕ್ಷ ಮುಚ್ಚುಮರೆಯಿಲ್ಲದೇ ಹೇಳಿತು. ಎಲ್ಲಾ ದೇಶಪ್ರೇಮಿ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಂದು ವಿಶಾಲ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟಬೇಕೆಂದು ಪಕ್ಷ ಕರೆ ನೀಡಿತು ಮತ್ತು ಜನರ ಬೆಂಬಲವನ್ನು ಕೋರಿತು. ಕಾಂಗ್ರೆಸ್ ಮತ್ತು ಪ್ರತಿಗಾಮಿ ಪಕ್ಷಗಳು ಒಂದೇ ರೀತಿಯ ಆಶ್ರಯದಾತರನ್ನು ಹೊಂದಿವೆ, ಮುಖ್ಯ ವಿರೋಧ ಪಕ್ಷದ ಸ್ಥಾನದಿಂದ ಕಮ್ಯುನಿಸ್ಟ್ ಪಕ್ಷವನ್ನು ಕೆಳಗಿಳಿಸಬೇಕೆಂದು ಅವು ಬಯಸಿವೆ ಮತ್ತು ತಮ್ಮ ಬಲಪಂಥೀಯವಾದದ ಕಡೆ ಸರ್ಕಾರದ ನೀತಿಗಳು ಬದಲಾಗಬೇಕೆಂಬ ಆಶಯ ಹೊಂದಿವೆ ಎಂದು ಪಕ್ಷ ಹೇಳಿತು.

ಆದಕಾರಣ ಈ ಸಾರ್ವತ್ರಿಕ ಚುನಾವಣೆಗಳಲ್ಲಿ ಪಕ್ಷದ ತಂತ್ರವನ್ನು ಪ್ರತಿಫಲಿಸುವ ಮೂರು ಘೋಷಣೆಗಳಿದ್ದವು: 1) ಕಾಂಗ್ರೆಸ್ಸಿನ ಏಕಸ್ವಾಮ್ಯ ಅಧಿಕಾರವನ್ನು ದುರ್ಬಲಗೊಳಿಸಬೇಕು; 2) ಬಲಪಂಥೀಯ ಪಕ್ಷಗಳನ್ನು ಬಗ್ಗು ಬಡಿಯಬೇಕು ಮತ್ತು 3) ಕಮ್ಯುನಿಸ್ಟ್ ಪಕ್ಷ ಹಾಗೂ ನಿಜವಾದ ಪ್ರಜಾಪ್ರಭುತ್ವ ಶಕ್ತಿಗಳ ಸ್ಥಾನಮಾನವನ್ನು ಉತ್ತಮಪಡಿಸಬೇಕು.

ಕಮ್ಯುನಿಸ್ಟ್ ಪಕ್ಷವು ಶೇಕಡಾ 10ರಷ್ಟು ಮತ ಮತ್ತು ಸಂಸತ್ತಿನಲ್ಲಿ 29 ಸ್ಥಾನಗಳನ್ನು ಗಳಿಸಿತು ಮತ್ತು ತನ್ನ ಶೇಕಡಾವಾರು ಮತವನ್ನು ಶೇಕಡಾ ಒಂದರಷ್ಟು ಹೆಚ್ಚಿಸಿಕೊಂಡಿತು. ಕಾಂಗ್ರೆಸ್ಸಿನ ಶೇಕಡಾವಾರು ಮತ ಶೇಕಡಾ 3 ರಷ್ಟು ಇಳಿಯಿತು. ಚುನಾವಣಾ ಫಲಿತಾಂಶಗಳನ್ನು ಗಮನಿಸಿದ ಪಕ್ಷದ ಕೇಂದ್ರ ಕಾರ್ಯಕಾರಿಯು ಕಾಂಗ್ರೆಸ್ಸಿನ ಸ್ಥಾನ ದುರ್ಬಲವಾಗುತ್ತಿರುವ ಪ್ರಕ್ರಿಯೆ ಮುಂದುವರಿದಿದೆ ಎಂದು ನಿಸ್ಸಂಕೋಚವಾಗಿ ತೀರ್ಮಾನಿಸಿತು. ಚುನಾವಣೆಯ ಅತ್ಯಂತ ಶಾಂತಿಗೆಡಿಸಿದ ಸಂಗತಿಯೆಂದರೆ ಕೋಮುವಾದಿ ಮತ್ತು ಬಲಪಂಥೀಯ ಪ್ರತಿಗಾಮಿ ಶಕ್ತಿಗಳು ತಮ್ಮ ಸ್ಥಾನವನ್ನು ಬಲಪಡಿಸಿಕೊಂಡದ್ದು. ಪಕ್ಷದೊಳಗಿನ ತೀವ್ರ ಭಿನ್ನಾಭಿಪ್ರಾಯಗಳನ್ನು ಬಿಂಬಿಸುವ, ಚುನಾವಣೆಯನ್ನು ವಿಶ್ಲೇಷಿಸುವ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಎರಡು ಕರಡು ವರದಿಗಳನ್ನು ಮಂಡಿಸಲಾಯಿತು. ತಮ್ಮ ನಿಲುವಿಗೆ ಸೋಲುಂಟಾಗಬಹುದೆಂದು ಎಣಿಸಿದ ಪರಿಷ್ಕರಣವಾದಿಗಳು, 'ಚುನಾವಣೆಗಳನ್ನು ಕುರಿತು ಚರ್ಚೆ ಮಾಡುವ ಅಗತ್ಯವಿಲ್ಲವೆಂದು' ಪ್ರತಿಪಾದಿಸಿದರು.

ಚುನಾವಣೆಯಾದ ಕೂಡಲೇ, ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯ್ ಘೋಷ್ ನಿಧನರಾದರು. ಅಜಯ್ ಘೋಷ್ ಅವರ ಸ್ಮರಣಾರ್ಥ ಪಕ್ಷದ ಕೇಂದ್ರ ಕಛೇರಿ ನಿರ್ಮಾಣಕ್ಕಾಗಿ ನಿಧಿ ಸಂಗ್ರಹಕ್ಕೆ ಕರೆ ನೀಡಿತು. ನೂತನ ಪ್ರಧಾನ ಕಾರ್ಯದರ್ಶಿಯನ್ನು ಚುನಾಯಿಸುವ ಪ್ರಶ್ನೆ ಪಕ್ಷದ ಮುಂದೆ ಬಂತು, ಅದರ ಬಗ್ಗೆ ರಾಷ್ಟ್ರೀಯ ಮಂಡಳಿಯಲ್ಲಿ ಚರ್ಚೆಯಾಯಿತು. ಮಂಡಳಿಯ ಕೆಲವು ಸದಸ್ಯರ ಡೋಲಾಯಮಾನ ಸ್ಥಿತಿಯ ಪ್ರಯೋಜನ ಪಡೆದ ಪರಿಷ್ಕರಣವಾದಿಗಳು, ಅಂತಹ ಯಾವುದೇ ಅವಕಾಶ ಸಂವಿಧಾನದಲ್ಲಿ ಇಲ್ಲದಿದ್ದಾಗ್ಯೂ ಪಕ್ಷದಲ್ಲಿ ಹೊಸ ಅಧ್ಯಕ್ಷ ಸ್ಥಾನವನ್ನು ಸೃಷ್ಟಿಸಿತು. ರಾಜಿ ಸಂಧಾನದ ಭಾಗವಾಗಿ, ಎಸ್.ಎ.ಡಾಂಗೆಯವರನ್ನು ಅಧ್ಯಕ್ಷರನ್ನಾಗಿ ಮತ್ತು ಇ.ಎಂ.ಎಸ್.ನಂಬೂದಿರಿಪಾಡ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಕೇಂದ್ರ ಕಾರ್ಯಕಾರಿ ಸಮಿತಿಗೆ ಇನ್ನೂ ಆರು ಹೆಚ್ಚಿನ ಸದಸ್ಯರನ್ನು ಚುನಾಯಿಸಲು ನಿರ್ಣಯಿಸಲಾಯಿತು, ಪಿ.ಸುಂದರಯ್ಯ, ಜಿ.ಅಧಿಕಾರಿ, ಜ್ಯೋತಿ ಬಸು, ಹರ್ಕಿಶನ್ ಸಿಂಗ್ ಸುರ್ಜಿತ್, ಹೆಚ್. ಕೆ.ವ್ಯಾಸ್ ಮತ್ತು ಅವತಾರ್ ಸಿಂಗ್ ಮಲ್ಹೋತ್ರ ಅವರನ್ನು ಆರಿಸಲಾಯಿತು. ನೂತನ ಸದಸ್ಯರೊಂದಿಗೆ ಕಾರ್ಯಕಾರಿಯನ್ನು ಪುನರ್ರಚಿಸಲಾಯಿತು. ಡಾಂಗೆ ಮತ್ತು ಇಎಂಎಸ್ ನಂಬೂದಿರಿಪಾಡ್ ಹೊರತಾಗಿ, ಭೂಪೇಶ್ ಗುಪ್ತಾ, ಜಡ್.ಎ.ಅಹಮದ್, ಎಂ.ಎನ್. ಗೋವಿಂದನ್ ನಾಯರ್, ಪಿ.ಸುಂದರಯ್ಯ, ಜ್ಯೋತಿ ಬಸು, ಹರ್ಕಿಶನ್ ಸಿಂಗ್ ಸುರ್ಜಿತ್ ಮತ್ತು ಯೋಗೀಂದ್ರ ಶರ್ಮಾ ಅವರನ್ನು ಇದು ಒಳಗೊಂಡಿತು.

ನಾಲ್ಕು ದಸ್ತಾವೇಜುಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಕಾರ್ಯಕಾರಿಗೆ ವಹಿಸಲಾಯಿತು: 1) ಕಮ್ಯುನಿಸ್ಟ್ ಚಳುವಳಿಯು ಎದುರಿಸುತ್ತಿರುವ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಪ್ರಶ್ನೆಗಳ ಕುರಿತು; 2) ಸಿಪಿಎಸ್‌ಯು ನ 22ನೇ ಮಹಾಧಿವೇಶನದ ತೀರ್ಮಾನಗಳ ಮಹತ್ವ; 3) ದೇಶದಲ್ಲಿನ ಚುನಾವಣೋತ್ತರ ರಾಜಕೀಯ ಪರಿಸ್ಥಿತಿ ಮತ್ತು 4) ಸಂಘಟನಾತ್ಮಕ ಸಮಸ್ಯೆಗಳು. ತದನಂತರದ ರಾಷ್ಟ್ರೀಯ ಮಂಡಳಿಯಲ್ಲಿ, ಸಿಪಿಎಸ್‌ಯು ನ 22ನೇ ಮಹಾಧಿವೇಶನ ಕುರಿತು ಒಂದು ನಿರ್ಣಯವನ್ನು ಅಂಗೀಕರಿಸಲಾಯಿತು, ಸಿಪಿಎಸ್‌ಯು ದಸ್ತಾವೇಜುಗಳಲ್ಲಿದ್ದ ಅನೇಕ ತಪ್ಪು ನಿರ್ಧಾರಗಳನ್ನು ವಿಮರ್ಶೆ ಮಾಡದೆ ಒಪ್ಪಿಕೊಂಡು ಹಾಡಿ ಹೊಗಳಲಾಯಿತು. ಸೋವಿಯತ್ ಯೂನಿಯನ್ ಈಗ ಕಮ್ಯುನಿಸ್ಟ್ ಸಮಾಜ ನಿರ್ಮಾಣದತ್ತ ಸಾಗಿದೆ, ಈಗಿನ ತಲೆಮಾರಿನವರು ಕಾಣಲು ಸಾಧ್ಯವಾಗುವಂತೆ ಪೂರ್ಣಗೊಳಿಸಲಾಗುತ್ತದೆ ಎಂಬುದು ಅವುಗಳಲ್ಲಿ ಪ್ರಮುಖವಾಗಿತ್ತು. ಸಾಮ್ರಾಜ್ಯಶಾಹಿ ಶಕ್ತಿಗಳ ಬಲವನ್ನು ತೀರ ಕಡಿಮೆ ಅಂದಾಜು ಮಾಡಲಾಗಿತ್ತು. ದೇಶಗಳ ಶಾಂತಿಯುತ ಸಹಬಾಳ್ವೆ ವಾದವನ್ನು ಬಲಪಡಿಸಲು ಈ ತೀರ್ಮಾನಗಳನ್ನು ಬಳಸಲಾಗಿತ್ತು. ಅಂತರ್‍ರಾಷ್ಟ್ರೀಯ ಹಾಗೂ ರಾಷ್ಟ್ರೀಯ ರಾಜಕೀಯ ಸನ್ನಿವೇಶಗಳ ಅಂದಾಜು ಮಾಡುವ ಮತ್ತು ಕಮ್ಯುನಿಸ್ಟ್ ಪಕ್ಷಗಳ ಪಾತ್ರ ಹಾಗೂ ಮಧ್ಯಪ್ರವೇಶ ಮಾಡುವ ಕುರಿತ ಈಗಾಗಲೇ ತೀವ್ರವಾಗಿದ್ದ ಪಕ್ಷದ ಆಂತರಿಕ ಭಿನ್ನಾಭಿಪ್ರಾಯಗಳಿಗೆ ಈ ತೀರ್ಮಾನಗಳೂ ಸೇರಿಕೊಂಡವು.

ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಈ ಅಂಶಗಳ ಬಗ್ಗೆ ಬಹಳ ಮುಖ್ಯವಾಗಿ ಸಿಪಿಎಸ್‌ಯು ಹಾಗೂ ಅಲ್ಬೇನಿಯನ್ ಲೇಬರ್ ಪಕ್ಷ ಮತ್ತು ಸಿಪಿಎಸ್‌ಯು ಹಾಗೂ ಸಿಪಿಸಿ ನಡುವೆ ಎದ್ದಿದ್ದ ಭಿನ್ನಾಭಿಪ್ರಾಯಗಳು ಕೂಡ ಪಕ್ಷದೊಳಗಿನ ವಾಗ್ವಾದಗಳ ಮೇಲೆ ಪ್ರಭಾವ ಬೀರಿದ್ದವು. ಪಕ್ಷವು ಒಂದು ನಿರ್ಣಯ ಅಂಗೀಕರಿಸಿ, ಜಗತ್ತಿನ ಎಲ್ಲಾ ಕಮ್ಯುನಿಸ್ಟ್ ಹಾಗೂ ಕಾರ್ಮಿಕರ ಪಕ್ಷಗಳ ಸಭೆಯೊಂದನ್ನು, ಈ ಹಿಂದೆ 1960ರಲ್ಲಿ ಮಾಸ್ಕೋದಲ್ಲಿ ನಡೆದಂತಹ 81 ಪಕ್ಷಗಳ ಸಭೆಯ ರೀತಿಯಲ್ಲೇ, ಕರೆಯಲು ಮುತುವರ್ಜಿ ವಹಿಸಬೇಕೆಂದು ಸಿಪಿಎಸ್‌ಯುವನ್ನು ಕೇಳಿಕೊಂಡಿತು.

ಈ ಹಿನ್ನೆಲೆಯಲ್ಲೇ ಒಳಗೊಳಗೇ ಹೊಗೆಯಾಡುತ್ತಿದ್ದ ಭಾರತ–ಚೀನಾ ಗಡಿ ವಿವಾದ ಅಕ್ಟೋಬರ್ 1962ರಲ್ಲಿ ಹೊತ್ತಿಕೊಂಡಿತು. ಕಾಂಗ್ರೆಸ್ ಸರ್ಕಾರವು ಭಾರತ ರಕ್ಷಣಾ ಕಾಯಿದೆ(ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ –ಡಿಐಆರ್)ಯ ಅಡಿಯಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿತು ಮತ್ತು ವಿಚಾರಣೆಯಿಲ್ಲದೇ ಜನರನ್ನು ಬಂಧಿಸಲು ಶುರುಮಾಡಿತು. ಈ ಅಸಾಧಾರಣ ಕ್ರಮಗಳನ್ನು ಬಳಸಿ ಪಕ್ಷದ ನಾಯಕತ್ವದ ಒಂದು ವಿಭಾಗವನ್ನು –ವರ್ಗ ಸಹಕಾರ ನಿಲುವನ್ನು ವಿರೋಧಿಸುತ್ತಿದ್ದ ಹಾಗೂ ಎರಡು ನೆರೆಹೊರೆಯ ದೇಶಗಳ ನಡುವಿನ ವಿವಾದವನ್ನು ಶಾಂತಿಯುತ ಸಂಧಾನಗಳ ಮೂಲಕ ಶಾಂತಿಯುತವಾಗಿ ಪರಿಹರಿಸಿಕೊಳ್ಳಬೇಕು ಎಂದು ಪ್ರತಿಪಾದಿಸುತ್ತಿದ್ದ ವಿಭಾಗವನ್ನು – ಬಂಧಿಸಲಾಯಿತು. ಪ್ರಮುಖ ಕಮ್ಯುನಿಸ್ಟ್ ಮುಖಂಡರುಗಳಾದ ಮುಜಾಫರ್ ಅಹಮದ್, ಎ.ಕೆ.ಗೋಪಾಲನ್, ಬಿ.ಟಿ.ರಣದಿವೆ, ಪಿ.ಸುಂದರಯ್ಯ, ಜ್ಯೋತಿಬಸು, ಪ್ರಮೋದ್ ದಾಸ್ ಗುಪ್ತಾ, ಹರ್ಕಿಶನ್ ಸಿಂಗ್ ಸುರ್ಜಿತ್, ಎಂ.ಬಸವಪುನ್ನಯ್ಯ, ಹರೇಕೃಷ್ಣ ಕೋನಾರ್ ಮತ್ತಿತರನ್ನು ಬಂಧಿಸಲಾಯಿತು ಮತ್ತು ಬಹಳ ದಿಗಳ ಕಾಲ ಬಂಧನದಲ್ಲಿಡಲಾಯಿತು. ಪಕ್ಷದ ರಾಷ್ಟ್ರೀಯ ಮಂಡಳಿಯ ಸುಮಾರು 50 ಸದಸ್ಯರನ್ನು, 10 ಸಂಸತ್ ಸದಸ್ಯರನ್ನು ಮತ್ತು ವಿವಿಧ ರಾಜ್ಯ ವಿಧಾನಸಭೆಗಳ ಸುಮಾರು 40 ಶಾಸಕರನ್ನು, ಕಾರ್ಮಿಕ ಮುಖಂಡರು, ಹಾಗೂ ಹಲವಾರು ಪ್ರಜಾಸತ್ತಾತ್ಮಕ ಚಳುವಳಿಯ ನಾಯಕರುಗಳನ್ನು ಒಳಗೊಂಡಂತೆ 800ಕ್ಕೂ ಹೆಚ್ಚಿನ ಜನರನ್ನು ಆ ಕರಾಳ ಕಾಯಿದೆಯಡಿಯಲ್ಲಿ ಬಂಧಿಸಲಾಯಿತು.

ಈ ಅಸಾಧಾರಣ ಅಧಿಕಾರವನ್ನು ಬಳಸಿ ಸರ್ಕಾರವು ಕಾರ್ಮಿಕ ಸಂಘಗಳ, ಕಿಸಾನ್ ಸಭಾಗಳ ಕೆಲಸ ಕಾರ್ಯಗಳನ್ನು ನಿತ್ರಾಣಗೊಳಿಸಿತು ಮತ್ತು ಕಾರ್ಮಿಕರು ಹಾಗೂ ನೌಕರರನ್ನು ಬೆದರಿಸಿತು, ಅವರಿಗೆ ಹಿಂಸೆ ನೀಡಿ ನಿರ್ದಯವಾಗಿ ನಡೆಸಿಕೊಂಡಿತು. ಹಲವಾರು ಸ್ಥಳಗಳಲ್ಲಿ, ಕಾಂಗ್ರೆಸ್ ಪಕ್ಷದ ಅನುಯಾಯಿಗಳು ಕಮ್ಯುನಿಸ್ಟ್ ಪಕ್ಷದ ಕಛೇರಿಗಳ ಮೇಲೆ ದಾಳಿ ಮಾಡಿದರು, ದಾಖಲೆಗಳನ್ನು ಮತ್ತು ಪೀಠೋಪಕರಣಗಳನ್ನು ಸುಟ್ಟರು, ಪಕ್ಷದ ಮುಖಂಡರ ಮನೆಗಳ ಮೇಲೆ ದಾಳಿ ಮಾಡಿದರು ಮತ್ತು ಬೆದರಿಸಿದರು.

ಡಾಂಗೆಯ ನೇತೃತ್ವದ ಪರಿಷ್ಕರಣವಾದಿ ನಾಯಕತ್ವವು, ಪಕ್ಷದ ನಾಯಕತ್ವದಲ್ಲಿನ ಕ್ರಾಂತಿಕಾರಿ ವಿಭಾಗದವರ ಮೇಲೆ ನಡೆಯುತ್ತಿದ್ದ ಹಲ್ಲೆಗಳನ್ನು ತಮ್ಮ ವರ್ಗ ಹೊಂದಾಣಿಕೆಯ ನಿಲುವನ್ನು ಮುಂದುವರಿಸಲು ಸಕಾಲಿಕ ಎಂದು ಬಗೆಯಿತು. ಎಲ್ಲಾ ಬಗೆಯ ಹಾಗೂ

ಪುಟ 15 ನೋಡಿ

ದಲಿತರು, ಮಹಿಳೆಯರು, ದುರ್ಬಲ ವರ್ಗಗಳ ವಿರುದ್ಧದ ದೌರ್ಜನ್ಯಗಳಿಗೆ ಲಾಕ್ ಡೌನ್, ಬಿಡುವೇ ಇಲ್ಲ–ರಾಮಚಂದ್ರ ಡೋಮ್



ವರದಿ: ನಾಗರಾಜ ನಂಜುಂಡಯ್ಯ

ಸಾಂಕ್ರಾಮಿಕ ಅವಧಿಯಲ್ಲಿ ಸಹ, ದಲಿತರು, ಮಹಿಳೆಯರು ಮತ್ತು ಇತರ ದುರ್ಬಲ ವರ್ಗಗಳ ವಿರುದ್ಧದ ದೌರ್ಜನ್ಯಗಳಿಗೆ ಲಾಕ್ ಡೌನ್ ಮತ್ತು ಬಿಡುವು ಇಲ್ಲ. ದಲಿತರ ವಿರುದ್ಧ ಜಾತಿ ಆಧಾರಿತ ದೌರ್ಜನ್ಯಗಳು ದೊಡ್ಡ ಪ್ರಮಾಣದಲ್ಲಿ ದಾಖಲಾಗಿವೆ. ದೈನಂದಿನ ದಾಳಿ, ನಿಂದನೆ ತಾರತಮ್ಯದ ಪ್ರಕರಣಗಳು ಅನೇಕ ರಾಜ್ಯಗಳಿಂದ ವರದಿಯಾಗುತ್ತಿವೆ ಎಂದು ಎಂದು ದಲಿತ ಶೋಷಣ ಮುಕ್ತಿಮಂಚ್ (ಡಿಎಸ್ಎಂಎಂ) ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಡೋಮ್ ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕ, ಆರ್ಥಿಕ ಮಂದಗತಿ ಮತ್ತು ಬಿಜೆಪಿ ಸರ್ಕಾರದ ಹಾನಿಕಾರಕ ನೀತಿಗಳಿಂದ ಉಂಟಾಗುವ ಸಂಕಟಗಳು, ದುಃಖಗಳು ಜಾತಿ, ಧರ್ಮ, ಭಾಷೆ ಮತ್ತು ಪ್ರದೇಶವನ್ನು ಲೆಕ್ಕಿಸದೆ ಎಲ್ಲಾ ವರ್ಗದ ಬಡವರ ಮೇಲೆ ಪರಿಣಾಮ ಬೀರುತ್ತಿವೆ. ನಮಗೆ ತಿಳಿದಂತೆ, ಈ ವಿಭಾಗಗಳಲ್ಲಿ, ದಲಿತರು ಹೆಚ್ಚು ದುಷ್ಪರಿಣಾಮ ಗಳಿಗೆ ತುತ್ತಾಗುತ್ತಾರೆ. ಆದ್ದರಿಂದ ಜನರ ಬೇಡಿಕೆಗಳಿಗಾಗಿ ಮತ್ತು ಬಿಜೆಪಿ ಸರ್ಕಾರದ ನೀತಿಗಳಿಗೆ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿರುವುದು ನಮ್ಮ ಆದ್ಯತೆಯಾಗಿದೆ. ಎಲ್ಲಾ ವರ್ಗಗಳು ಮತ್ತು ಸಾಮಾಜಿಕ ವರ್ಗಗಳ ವ್ಯಾಪಕ ಐಕ್ಯತೆಯಿಂದ ಮಾತ್ರ ಬಿಜೆಪಿ ಮೋದಿ ಸರ್ಕಾರ ಪ್ರತಿನಿಧಿಸುವ ಕೋಮು ಮತ್ತು ಸಾಂಸ್ಥಿಕ ಶಕ್ತಿಗಳ ದಾಳಿಯನ್ನು ಎದುರಿಸಲು ಸಾಧ್ಯವಾಗುತ್ತದೆ ಎಂದು ರಾಮಚಂದ್ರ ಡೋಮ್ ಕರೆ ನೀಡಿದ್ದಾರೆ.

ಕಾರ್ಯಕಾರಿ ಸಮಿತಿಯ ಈ ಸಭೆ ಆನ್‌ಲೈನ್ ಮೂಲಕ ನಡೆಯಿತು. ಕರ್ನಾಟಕ ದಿಂದ ಗೋಪಾಲಕೃಷ್ಣ ಹರಳ ಹಳ್ಳಿ ಮತ್ತು ನಾಗರಾಜ ನಂಜುಂಡಯ್ಯ ಈ ಆನ್ ಲೈನ್–ವರ್ಚ್ಯುಯಲ್ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆಯನ್ನು ಡಿಎಸ್ಎಂಎಂ ನ ಅಧ್ಯಕ್ಷರಾದ ರಾಧಾಕೃಷ್ಣರವರು ವಹಿಸಿದ್ದರು. ಹಾಗೂ ಬಿ.ವಿ.ರಾಘವುಲು ಮತ್ತು ಸುಭಾಶಿಣಿ ಅಲಿ, ಶ್ರೀನಿವಾಸರಾವ್ ಹಾಗೂ ಜಿ.ಮಮತಾ ಭಾಗವಹಿಸಿದ್ದರು.

ಮೋದಿ ಸರ್ಕಾರವು ತನ್ನ ಜವಾಬ್ದಾರಿಯಿಂದ ನುಣಿಚಿಕೊಂಡು ತ್ಯಜಿಸಿದೆ. ಎಲ್ಲಾ ವಿಭಾಗಗಳಲ್ಲಿ, ದಲಿತರು ಕರುಣಾಜನಕ ಪರಿಸ್ಥಿತಿಯಿಂದ ಹೆಚ್ಚು ಬಳಲುತ್ತಿದ್ದಾರೆ. ಕೇಂದ್ರ ಸರ್ಕಾರ ಘೋಷಿಸಿರುವ ಪರಿಹಾರ ಕ್ರಮಗಳು ಅಲ್ಪವಾಗಿದ್ದು ಅವು ಜನರಿಗೆ ಸಾಕಷ್ಟು ಪರಿಹಾರ ನೀಡಲು ಸಾಧ್ಯವಾಗಿಲ್ಲ. ಸರ್ಕಾರವು ಪ್ರತಿ ವ್ಯಕ್ತಿಗೆ 15 ಕಿ.ಗ್ರಾಂ ಅಕ್ಕಿ ಮತ್ತು ಕುಟುಂಬಕ್ಕೆ 6 ತಿಂಗಳವರೆಗೆ 7500 ರೂಪಾಯಿ ಹಣವನ್ನು ನೀಡದ ಹೊರತು, ಬಡವರು ವಿಶೇಷವಾಗಿ ದಲಿತರು ಮತ್ತು ಬುಡಕಟ್ಟು ಜನಾಂಗದವರು ಹಸಿವು, ಅಪೌಷ್ಟಿಕತೆ ಮತ್ತು ಋಣಭಾರದ ಅಪಾಯವನ್ನು ಎದುರಿಸುತ್ತಿದ್ದಾರೆ ಎಂದು ರಾಮಚಂದ್ರ ಡೋಮ್ ಅವರು ತಮ್ಮ ಪ್ರಸ್ತಾವಿಕ ಭಾಷಣದಲ್ಲಿ ಆರಂಭದಲ್ಲಿ ಹೇಳಿದರು.

ಬಿಜೆಪಿ ಕೇಂದ್ರ ಸರ್ಕಾರ ಸುಧಾರಣಾ ಕ್ರಮಗಳ ಸರಣಿಯನ್ನು ಘೋಷಿಸಿದ್ದು ಅದು ದಲಿತರ ಹಿತಾಸಕ್ತಿಗೆ ಪ್ರತಿಕೂಲ ಪರಿಣಾಮ ಬೀರಲಿದೆ. ಅಭೂತಪೂರ್ವ ಖಾಸಗೀಕರಣ ಕಾರ್ಯಕ್ರಮವನ್ನು ಘೋಷಿಸಲಾಗಿದೆ. ರೈಲ್ವೆ, ರಕ್ಷಣಾ, ಬಾಹ್ಯಾಕಾಶ, ವಿದ್ಯುತ್, ತೈಲ, ಹಣಕಾಸು ವಲಯಗಳಾದ, ಬ್ಯಾಂಕ್ ಮತ್ತು ವಿಮೆ ಮತ್ತು ಇತರ ಕಾರ್ಯತಂತ್ರದ ಸಾರ್ವಜನಿಕ ವಲಯದ ಶೇರುಗಳನ್ನು ಮಾರಾಟಕ್ಕೆ ಇಡಲಾಗಿದೆ.

ಈ ಖಾಸಗೀಕರಣ ಕಾರ್ಯಕ್ರಮವು ನಮ್ಮ ರಾಷ್ಟ್ರೀಯ ಸ್ವತ್ತುಗಳನ್ನು ವಿದೇಶಿ ಮತ್ತು ಭಾರತೀಯ ಕಾರ್ಪೊರೇಟ್ ಸಂಸ್ಥೆಗಳಿಗೆ ನೀಡಿದ ಉಡುಗೊರೆಯಾಗಿದೆ. ಇದು ದಲಿತರು ಮತ್ತು ಇತರ ದುರ್ಬಲ ವರ್ಗದವರು ಅನುಭವಿಸುವ ಮೀಸಲಾತಿಯ ಲಾಭದ ಮೇಲೆ ನೇರ ದಾಳಿಯಾಗಿದೆ, ಏಕೆಂದರೆ ಸಾರ್ವಜನಿಕ ವಲಯವು ದುರ್ಬಲ ವರ್ಗಗಳಿಗೆ ಮೀಸಲಾತಿ ನೀಡುವಲ್ಲಿ ದೊಡ್ಡ ಪಾತ್ರ ನಿರ್ವಹಿಸಿವೆ. ಐಐಟಿಯಂತಹ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಅನುಷ್ಠಾನಕ್ಕೆ ಸರ್ಕಾರ ಪದೇ ಪದೇ ನೀಡಿದ ಭರವಸೆಗಳ ಹೊರತಾಗಿಯೂ, ಐಐಟಿ ಮತ್ತು ಐಐಎಂ ನಲ್ಲಿ ಕೆಟ್ಟದಾಗಿ ನಿರ್ವಹಣೆ ಮಾಡಲಾಗುತ್ತಿದೆ.

ಬಿಜೆಪಿ ಮಂಡಿಸಿದ ಹೊಸ ಶಿಕ್ಷಣ ನೀತಿಯು ಬಡ ವರ್ಗಗಳಿಗೆ ವಿಶೇಷವಾಗಿ ದಲಿತರಿಗೆ ಹಾನಿ ಮಾಡಲಿದೆ ಏಕೆಂದರೆ ಅದು ವ್ಯಾಪಾರೀಕರಣ, ಖಾಸಗೀಕರಣ ಮತ್ತು ಶಿಕ್ಷಣದ ಕೋಮುವಾದಿಕರಣವನ್ನು ಉತ್ತೇಜಿಸುತ್ತದೆ. ಎಸ್ಇ / ಎಸ್‌ಟಿ / ಒಬಿಸಿ ಮತ್ತು ಅವುಗಳ ಮೀಸಲಾತಿ, ವಿದ್ಯಾರ್ಥಿವೇತನ ಇತ್ಯಾದಿಗಳ ಬಗ್ಗೆ ಎನ್ಇಪಿಯಲ್ಲಿ ನಿರ್ದಿಷ್ಟ ಉಲ್ಲೇಖವಿಲ್ಲ. ಎನ್ಇಪಿ ಜಾರಿಗೆ ಬಂದ ನಂತರ ವಾಸ್ತವವಾಗಿ ಮೀಸಲಾತಿ ಮತ್ತು ವಿದ್ಯಾರ್ಥಿವೇತನವನ್ನು ನಿಲ್ಲಿಸಲಾಗುವುದು ಎಂಬ ಭಾವನೆ ನ್ಯಾಯೋಚಿತ ಗೊಂಡಂತಿದೆ.

ಮುಂಬೈನಲ್ಲಿ, ಬುಡಕಟ್ಟು ಜನಾಂಗದ ವೈದ್ಯೆ ಆತ್ಮಹತ್ಯೆ ಮಾಡಿ ಕೊಂಡಿದ್ದರು, ಅಪರಾಧಿಗೆ ಯಾವುದೇ ಗಂಭೀರ ಶಿಕ್ಷೆ ವಿಧಿಸದ ಆಸ್ಪತ್ರೆ ಯವರು ಅವರು ಮತ್ತೆ ಕರ್ತವ್ಯಕ್ಕೆ ಸೇರಲು ಅನುಮತಿ ನೀಡಿದ್ದಾರೆ. ಇದನ್ನು ಪ್ರಶ್ನಿಸಿ, ಕೋರ್ಟ್ ನಲ್ಲಿ ಪ್ರಕರಣ ದಾಖಲಾಗಿದೆ.

ಇತ್ತೀಚಿನ ಸಮೀಕ್ಷೆಯಲ್ಲಿ ಜೈಲಿನಲ್ಲಿರುವ ಎಸ್‌ಸಿ / ಎಸ್‌ಟಿಗಳು – ಅಪರಾಧಿಗಳು ಮತ್ತು ಅಪರಾಧಿಗಳು ಜನಸಂಖ್ಯೆಯ ಶೇಕಡಾವಾರು ಪ್ರಮಾಣವನ್ನು ಮೀರಿದ್ದಾರೆ. ಇದಕ್ಕೆ ಕಾರಣ ತಾರತಮ್ಯ ಮತ್ತು ಬಡತನ.

ಬಿಜೆಪಿ ಮತ್ತು ಸಂಘ ಪರಿವಾರ ರಚಿಸಿದ ಮನುವಾದಿ ವಾತಾವರಣವು ಜಾತಿವಾದಿ ಊಳಿಗಮಾನ್ಯ ಪಡೆಗಳನ್ನು ದಲಿತರ ವಿರುದ್ಧ ಭಂಡತನದಿಂದ ವರ್ತಿಸಲು ಧೈರ್ಯ ತುಂಬಿದೆ. ಕೆಲವು ನ್ಯಾಯಾಲಯದ ತೀರ್ಪುಗಳಿಂದ ಎಸ್‌ಸಿ /ಎಸ್‌ಟಿ ದೌರ್ಜನ್ಯ ತಡೆಗಟ್ಟುವ ಕಾಯಿದೆಯ ವ್ಯಾಖ್ಯಾನವು ಈ ಕಾನೂನಿನಿಂದ ನೀಡಲ್ಪಟ್ಟ ರಕ್ಷಣೆಯನ್ನು ಮತ್ತಷ್ಟು ದುರ್ಬಲಗೊಳಿಸಿತು. ಜಾತಿ ಆಧಾರಿತ ಮೀಸಲಾತಿ 'ಮೂಲಭೂತ ಹಕ್ಕುಗಳಲ್ಲ', ಆದರೆ ರಾಜ್ಯ ಸರ್ಕಾರಗಳು ತಮ್ಮ ತಿಳುವಳಿಕೆ ಇತ್ಯಾದಿಗಳಿಗೆ ಅನುಗುಣವಾಗಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ ಎಂಬುದು ಅತ್ಯಂತ ಅಪಾಯಕಾರಿ ಮತ್ತು, ಮನುವಾದಿ ನೀತಿಗಳನ್ನು ನಿರ್ಧರಿಸುವ ಪರಿಸ್ಥಿತಿ ಮತ್ತು ಅವುಗಳ ಅನುಷ್ಠಾನದಲ್ಲಿ ಅದು ಸಾಮಾಜಿಕ ನ್ಯಾಯದ ಈ ಪ್ರಮುಖ ಅಂಶಗಳ ಮರಣದಂಡನೆಯನ್ನು ಸುಪ್ರೀಂಕೋರ್ಟ್ ಧ್ವನಿಸುತ್ತಿದೆ ಎಂದು ಈ ತೀರ್ಪುಗಳು ಎತ್ತಿ ತೋರುತ್ತವೆ.

ಅದೇ ನ್ಯಾಯಾಲಯದ ಹಿಂದಿನ ನ್ಯಾಯಪೀಠದ ಅಭಿಪ್ರಾಯವನ್ನು ರದ್ದುಪಡಿಸಿದ ಐದು ಸದಸ್ಯರ ಸುಪ್ರೀಂ ಕೋರ್ಟ್ ನ್ಯಾಯಪೀಠದ ಇತ್ತೀಚಿನ ತೀರ್ಪು ದಲಿತರ ಉಪ ವರ್ಗೀಕರಣಕ್ಕೆ ಅನುಮತಿ ನೀಡಿತು. ಆದರೆ ಅಂತಿಮ ತೀರ್ಪುಗಾಗಿ ಈ ವಿಷಯವನ್ನು ದೊಡ್ಡ ನ್ಯಾಯ ಪೀಠಕ್ಕೆ ಉಲ್ಲೇಖಿಸಿತು. ಇದು ಎಸ್‌ಸಿಗಳ ವಿವಿಧ ವಿಭಾಗಗಳಲ್ಲಿ ವ್ಯತ್ಯಾಸಗಳನ್ನು ಉಂಟು ಮಾಡಬಹುದು ಸದ್ಯಕ್ಕೆ, ಉಪ–ವರ್ಗೀಕರಣ ಇರುವ ರಾಜ್ಯಗಳಲ್ಲಿ, ತೊಂದರೆಗೊಳಗಾಗಬಾರದು ಎಂಬ ನಿಲುವನ್ನು ಡಿಎಸ್ಎಂಎಂ ತೆಗೆದುಕೊಳ್ಳುತ್ತದೆ ಎಂದು ರಾಮಚಂದ್ರ ಡೋಮ್ ಹೇಳಿದರು.

ವರದಿ ಮೇಲಿನ ಚರ್ಚೆ ಯಲ್ಲಿ ಸುಮಾರು 11 ಸದಸ್ಯರು ಪಾಲ್ಗೊಂಡಿದ್ದರು. ಚರ್ಚೆಯಲ್ಲಿ ಪ್ರಮುಖವಾಗಿ ಮೂಡಿ ಬಂದ ವಿಷಯಗಳು :

- ಕೇರಳ ರಾಜ್ಯ ಸರ್ಕಾರವು, ಎಸ್‌ಸಿ ಮತ್ತು ಎಸ್ ಟಿ ಸಮುದಾಯ ಗಳಿಗೆ, ಶಿಕ್ಷಣಕ್ಕಾಗಿ, ಟಿ.ವಿ, ಲ್ಯಾಪ್ ಟಾಪ್, ಸ್ಮಾರ್ಟ್ ಫೋನ್ ಇತ್ಯಾದಿ ಗಳನ್ನು ಉಚಿತವಾಗಿ ಒದಗಿಸಿದೆ. ಪ್ರತ್ಯೇಕ ಕಟ್ಟಡಗಳನ್ನು ನಿರ್ಮಿಸಿ ಕೊಟ್ಟಿದೆ. ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಮನೆಗಳು ಇಲ್ಲದವರಿಗೆ ಓದಲು ಅನುಕೂಲಕರವಾದ ಇಂತಹ ಹಲವು ಸೌಲಭ್ಯಗಳನ್ನು ಒದಗಿಸಿ ಕೊಡಲಾಗಿದೆ.
- ಬಿಜೆಪಿ ತಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ) ಯಿಂದಾಗಿ, ದೊಡ್ಡ ಪ್ರಮಾಣದಲ್ಲಿ ದಲಿತರಿಗೆ ಶಿಕ್ಷಣ ವಂಚಿಸಲ್ಪಡುತ್ತದೆ. ಮತ್ತೆ ದಲಿತರನ್ನು ಗುಲಾಮಗಿರಿಗೆ ತಳ್ಳುವಂತ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹಾಗಾಗಿ, ವಿದ್ಯಾರ್ಥಿ ಗಳನ್ನು ಪ್ರಮುಖವಾಗಿ ಹಾಸ್ಟಲ್ ವಿದ್ಯಾರ್ಥಿಗಳ ನಡುವೆ ಹೆಚ್ಚು ಪ್ರಚಾರ ನಡೆಸಬೇಕು. ವಿದ್ಯಾವಂತ ದಲಿತರನ್ನು ಅದರಲ್ಲಿ ಯೂ, ವಿಶೇಷವಾಗಿ ಎಸ್.ಸಿ/ ಎಸ್ ಟಿ, ವೆಲ್ ಫೇರ್ ಅಸೋಸಿಯೇಷನ್ ಗಳನ್ನು, ದಲಿತ ನೌಕರರನ್ನು ಈ ವಿಚಾರದಲ್ಲಿ ಜಾಗೃತ ಗೊಳಿಸಬೇಕು.
- ಬಿಜೆಪಿ ಸರ್ಕಾರ ಸಂಪೂರ್ಣವಾಗಿ ಸಾರ್ವಜನಿಕ ಉದ್ಯಮ ಗಳನ್ನು ನಾಶಗೊಳಿಸಲು, ಎಲ್ಲಾ ಸರ್ಕಾರಿ ಸಾಮ್ಯದ ಉದ್ಯಮಗಳನ್ನು ಖಾಸಗಿ ಕರಣ ಗೊಳಿಸುತ್ತಿದೆ. ಇದರಿಂದ ಸಂವಿಧಾನ ಬದ್ದವಾಗಿ ಜಾರಿಯಲ್ಲಿರುವ ಮೀಸಲಾತಿ ವಿನಾಶವಾಗುತ್ತದೆ. ಇದು ಸಂಘ ಪರಿವಾರದ ಮೂಲ ಉದ್ದೇಶ ಮತ್ತು ಅವರ ಕಾರ್ಯಸೂಚಿಯಾಗಿದೆ. ಹಾಗಾಗಿ, ಖಾಸಗಿ ಕ್ಷೇತ್ರದಲ್ಲಿ ಯೂ, ಮೀಸಲಾತಿಯನ್ನು ಕಡ್ಡಾಯವಾಗಿ ಸಂವಿಧಾನ ದ ಅಡಿಯಲ್ಲಿ ಅನುಷ್ಠಾನ ಗೊಳಿಸುವಂತಾಗಬೇಕು.

ಈ ಹಿನ್ನೆಲೆಯಲ್ಲಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಈ ವಾರ ನ್ಯೂಇಂಡಿಯಾದಲ್ಲಿ



ಇದು ಇಂದಿರಾಗಾಂಧಿ ಮಾಡಿದ ತಪ್ಪು!

ವ್ಯಂಗ್ಯಚಿತ್ರ ಕೃಪೆ: ಆರ್.ಪ್ರಸಾದ್ , ಇಕನಾಮಿಕ್ ಟೈಮ್ಸ್

ರಿಪಬ್ಲಿಕ್ ಟಿವಿ ಸೇರಿದಂತೆ ಕೆಲವು ಹೊಸ ಟಿವಿ ಚಾನೆಲ್‌ಗಳ ಟಿಆರ್‌ಪಿ ಯನ್ನು ಹಿಗ್ಗಿಸಿ ತೋರಿಸುವ ಹಗರಣ ಪತ್ತೆಯಾಗಿದೆ, ಈ ಸಂಬಂಧದದಲ್ಲಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಮುಂಬೈ ಪೋಲೀಸ್ ಹೇಳಿದ್ದಾರೆ.



ಅತ್ಯಂತ ಜನಪ್ರಿಯ ಮುಖಂಡ–ಅತ್ಯುತ್ತಮ ಆಳ್ವಿಕೆಯ ದೇಶ–ಅತ್ಯತ್ತಮ ಪಕ್ಷ –ಎಲ್ಲೂ ಅತಿ ದೊಡ್ಡ ಹಗರಣಕಾರೀ ಚಾನೆಲ್‌ನಲ್ಲಿ !

ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಗಾಳಿ ಟರ್ಬೈನ್‌ಗಳನ್ನು ಬಳಸಿ ಶುದ್ಧ ಕುಡಿಯುವ ನೀರು, ಆಮ್ಲಜನಕ, ಅಲ್ಲದೆ ಇಂಧನ ಉತ್ಪಾದನೆ–ಪ್ರಧಾನಿ ಪ್ರಸ್ತಾವನೆ



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಸಿಫಿ.ಕಾಂ

ಆರ್ಥಿಕ ಬೆಳವಣಿಗೆಯಿರಲಿ, ಸ್ಥಗಿತತೆಯಿರಲಿ ಬಡತನ ಮಾತ್ರ ಬೆಳೆಯುತ್ತಲೇ ಹೋಗುತ್ತದೆ



ಜಿಡಿಪಿ ಬೆಳವಣಿಗೆಯೊಂದಿಗೆ ಬಡತನದ ಹೆಚ್ಚಳದ ಬಗ್ಗೆ ಬರೆದ ಅನೇಕ ಅಂಕಣಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಆದರೆ, ಈ ಅಂಶಕ್ಕೆ ಸಂಬಂಧಿಸಿದಂತೆ ಆಗಾಗ್ಗೆ ಎರಡು ತಪ್ಪು ತೀರ್ಮಾನಗಳಿಗೆ ಬರಲಾಗುತ್ತಿದೆ. ಮೊದಲನೆಯದು, ಆರ್ಥಿಕ ಬೆಳವಣಿಗೆಯು ಬಡತನದ ಹೆಚ್ಚಳವನ್ನು ಉಂಟುಮಾಡಿದ ಪಕ್ಷದಲ್ಲಿ, ಬೆಳವಣಿಗೆಯು ಸ್ಥಗಿತಗೊಂಡಾಗ, ಬಡತನದ ಇಳಿಕೆಯಾಗದಿದ್ದರೂ ಕೊನೆಯ ಪಕ್ಷ ಬಡತನವು ಮತ್ತಷ್ಟು ಏರದೆ ಸ್ಥಗಿತಗೊಳ್ಳಬೇಕಾಗುತ್ತದೆ.
ಎರಡನೆಯದು, ಅಭಿವೃದ್ಧಿಯು ಪುನರಾರಂಭವಾದರೆ ಬಡತನ ಇಳಿಯುತ್ತದೆಯೇ? ಹೌದು ಎಂದು ಹೇಳುವ ಮನಸ್ಸಾಗುತ್ತದೆ. ಆದರೆ ನಿಜವಾಗಿ, ಇಳಿಯುವುದಿಲ್ಲ. ಏಕೆಂದರೆ ನವ ಉದಾರವಾದಿ ಬಂಡವಾಳಶಾಹಿಯು ಇಂದು ಎದುರಿಸುತ್ತಿರುವ ಬಿಕ್ಕಟ್ಟು ಕೇವಲ ಒಂದು ಆವರ್ತಕ ಬಿಕ್ಕಟ್ಟು ಮಾತ್ರವಲ್ಲ; ಬಂಡವಾಳಶಾಹಿಯು ತಲುಪಿರುವ ಇಡೀ ವ್ಯವಸ್ಥೆಗೆ ಮುಂದೆ ದಾರಿಗಾಣದಂತಾಗಿರುವ ಸಂರಚನಾತ್ಮಕ ಬಿಕ್ಕಟ್ಟು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂನಾಗರಾಜ್

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆರ್ಥಿಕ ಬೆಳವಣಿಗೆಯ ಜತೆಗೆ ಬಡತನವೂ ನಿಚ್ಚಳವಾಗಿ ಬೆಳೆಯುತ್ತದೆ. ಈ ಅಂಶದ ಬಗ್ಗೆ ಮಾರ್ಕ್ಸ್ ಹೀಗೆ ಹೇಳಿದ್ದಾರೆ: "ಒಂದು ಧ್ರುವದಲ್ಲಿ ಸಂಪತ್ತಿನ ಶೇಖರಣೆಯಾಗುವ ಸಮಯದಲ್ಲೇ, ಇನ್ನೊಂದು ಧ್ರುವದಲ್ಲಿ, ದುರವಸ್ಥೆ, ಯಮಯಾತನೆ, ಗುಲಾಮಗಿರಿ, ಅಜ್ಞಾನ, ಕ್ರೌರ್ಯ ಮತ್ತು ನೈತಿಕ ಅಧಃಪತನಗಳು ವಿರುದ್ಧ ಧ್ರುವದಲ್ಲಿ, ಅಂದರೆ ಯಾವ ವರ್ಗವು ತನ್ನ ಪರಿಶ್ರಮದ ಮೂಲಕವೇ ಬಂಡವಾಳವನ್ನು ಸೃಷ್ಟಿಸುತ್ತದೆಯೋ ಅದೇ ವರ್ಗದ ಕಡೆಯಲ್ಲಿ ಶೇಖರಣೆಗೊಳ್ಳುತ್ತವೆ" (ಬಂಡವಾಳ ಸಂಪುಟ–1). ಈ ವರ್ಗದ ದುರವಸ್ಥೆಯ ಬಗ್ಗೆ ಇನ್ನೊಂದೆಡೆಯಲ್ಲಿ ಮಾರ್ಕ್ಸ್ ಹೀಗೆ ಹೇಳುತ್ತಾರೆ: "ಸರಕುಗಳನ್ನು ಉತ್ಪಾದಿಸುವ ಸಾಮರ್ಥ್ಯವುಳ್ಳ ಬಂಡವಾಳವು ಬೆಳೆದಂತೆಯೇ... ಕೆಲಸ ಬೇಕೆಂದು ಕೇಳಲು ಮೇಲೆತ್ತಿದ ದುಡಿಯುವ ತೋಳುಗಳ ದೃಶ್ಯ ಒಂದು ಅಡವಿಯಂತೆ ದಟ್ಟವಾಗುತ್ತ ಹೋಗುತ್ತದೆ, ಅದೇ ವೇಳೆಗೆ ಆ ತೋಳುಗಳು ತೆಳುವಾಗುತ್ತಾ ಹೋಗುತ್ತವೆ" (ಕೂಲಿ ಕಾರ್ಮಿಕ ಮತ್ತು ಬಂಡವಾಳ).

ಈ ವಿದ್ಯಮಾನಗಳನ್ನು ಭಾರತದ ಅನುಭವವೂ ಧೃಢೀಕರಿಸುತ್ತದೆ. ನವ ಉದಾರವಾದೀ ಅವಧಿಯಲ್ಲಿ ಬಂಡವಾಳವು ವೇಗವಾಗಿ ಮತ್ತು ಅಗಾಧವಾಗಿ ಶೇಖರಣೆಯಾಗಿದೆ. ಜಿಡಿಪಿಯು ತ್ವರಿತವಾಗಿ ಬೆಳೆದ ಕಾರಣದಿಂದ, ಈ ಅವಧಿಯನ್ನು ಭಾರತದ ಆರ್ಥಿಕ ಇತಿಹಾಸದಲ್ಲಿ ಹೊಸ ಶಕೆಯನ್ನು ಆರಂಭಿಸಿದ ಒಂದು ಹೊಸ ಯುಗವೆಂದೇ ಶ್ಲಾಘಿಸಲಾಗಿದೆ. ಆದರೆ, ಬಡತನದ ನಿಚ್ಚಳ ಗಾತ್ರವೂ ಈ ಯುಗದಲ್ಲೇ ಬೆಳೆದಿರುವದೂ ವಾಸ್ತವವೇ. ವಸಾಹತುಶಾಹಿ ಆಳ್ವಿಕೆಯ ಕೊನೆಯ ಅರ್ಧ ಶತಮಾನದಲ್ಲಿ ಸಂಭವಿಸಿದ ತಲಾ ಆಹಾರ ಲಭ್ಯತೆಯ ವಿನಾಶಕಾರಿ ಕುಸಿತದ ನಂತರ 1991ರ ಹೊತ್ತಿಗೆ ತಲುಪಿದ್ದ ತಲಾ ಆಹಾರ ಲಭ್ಯತೆಯ ಉನ್ನತ ಮಟ್ಟವನ್ನು (ಈ ಮಟ್ಟವನ್ನು ಸಂಪೂರ್ಣವಾಗಿ ಸಮರ್ಪಕ ಎಂದು ಹೇಳದಿದ್ದರೂ), 1991ರ ನಂತರದ ಯಾವುದೇ ವರ್ಷದಲ್ಲಿ ಮತ್ತೆ ತಲುಪಲೇ ಇಲ್ಲ.

ಆಹಾರ ಲಭ್ಯತೆಯ ವಿನಾಶಕಾರಿ ಕುಸಿತದ ಅಂಶವನ್ನು ಆಹಾರ ಸೇವನೆಯ ದತ್ತಾಂಶಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಹೇಳುತ್ತವೆ. 1993–94ರಲ್ಲಿ ಎನ್‌ಎಸ್‌ಎಸ್ ಸಂಸ್ಥೆಯು ನಡೆಸಿದ ಒಂದು ವಿಶಾಲ ಮಾದರಿ ಸಮೀಕ್ಷೆಯ ಪ್ರಕಾರ, ಗ್ರಾಮೀಣ ಪ್ರದೇಶದ ಬಡತನವನ್ನು ವ್ಯಾಖ್ಯಾನಿಸುವ ದಿನಂಪ್ರತಿ 2200 ಕ್ಯಾಲೋರಿ ಬಳಕೆಯ ಮಾನದಂಡದ ಪ್ರಕಾರ, ನವ ಉದಾರವಾದಿ ನೀತಿಗಳು ಜಾರಿಗೆ ಬಂದ ನಂತರದ ಮೊದಲ ವರ್ಷದಲ್ಲಿ (1993–94ರಲ್ಲಿ), ದಿನಂಪ್ರತಿ ತಲಾ 2200 ಕ್ಯಾಲೋರಿ ಮೌಲ್ಯದ ಆಹಾರವನ್ನು ಪಡೆಯಲಾಗದ ಗ್ರಾಮೀಣ ಜನಸಂಖ್ಯೆಯ ಪ್ರಮಾಣವು ಶೇ.58ರಷ್ಟಿತ್ತು. 2011–12ರಲ್ಲಿ ನಡೆಸಿದ ಇನ್ನೊಂದು ಸುತ್ತಿನ ಇದೇ ಸಮೀಕ್ಷೆಯ ಪ್ರಕಾರ, ದಿನಂಪ್ರತಿ ತಲಾ 2200 ಕ್ಯಾಲೋರಿ ಮೌಲ್ಯದ ಆಹಾರವನ್ನು ಪಡೆಯಲಾಗದ ಗ್ರಾಮೀಣ ಜನಸಂಖ್ಯೆಯ ಪ್ರಮಾಣವು ಶೇ.68ಕ್ಕೆ ಏರಿತ್ತು. ಅದೇ ರೀತಿಯಲ್ಲಿ, ನಗರ ಪ್ರದೇಶಗಳ ಬಡತನವನ್ನು ವ್ಯಾಖ್ಯಾನಿಸುವ ದಿನಂಪ್ರತಿ ತಲಾ 2100 ಕ್ಯಾಲೋರಿ ಬಳಕೆಯ ಮಾನದಂಡದ ಪ್ರಕಾರ, ದಿನಂಪ್ರತಿ ತಲಾ 2100 ಕ್ಯಾಲೋರಿ ಮೌಲ್ಯದ ಆಹಾರವನ್ನು ಪಡೆಯಲಾಗದ ನಗರ ಪ್ರದೇಶಗಳ ಜನಸಂಖ್ಯೆಯ ಪ್ರಮಾಣವು 1993–94ರಲ್ಲಿ ಶೇ.57ರಷ್ಟಿತ್ತು. ಈ ಪ್ರಮಾಣವು 2011–12ರಲ್ಲಿ ಶೇ.65ಕ್ಕೆ ಏರಿತ್ತು. ವರ್ಷ 2011–12ರ ನಂತರದ ದತ್ತಾಂಶಗಳು ಲಭ್ಯವಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ನವ ಉದಾರವಾದಿ ಬಂಡವಾಳಶಾಹಿಯ ಅವಧಿಯಲ್ಲಿ, ನಿಚ್ಚಳ ಬಡತನದ ಪ್ರಮಾಣವು ಏರಿಕೆಯಾಗಿದೆ. ಅತ್ಯಂತ ಸರಳವಾಗಿ ಮತ್ತು ಸಹಜವಾಗಿ ಹಸಿವಿನ ರೂಪದಲ್ಲಿ ಪ್ರಕಟಗೊಳ್ಳುವ ಬಡತನವನ್ನು ಅಧಿಕೃತವಾಗಿ ವ್ಯಾಖ್ಯಾನಿಸುತ್ತಿದ್ದ ಕ್ಯಾಲೋರಿ ಬಳಕೆಯ ಮಾನದಂಡವು ಸರ್ಕಾರಕ್ಕೆ ಮುಜುಗರ ಉಂಟುಮಾಡುವವರೆಗೂ ಒಂದು ಅಧಿಕೃತ ಆಧಾರವಾಗಿತ್ತು. ಆದರೆ, ಈಗ ಅಪ್ರಿಯವಾದುದನ್ನು ಮರೆಮಾಚಿ ಚಂದಗೊಳಿಸಿದ ಚಿತ್ರವನ್ನು ತೋರಿಸಲು ಎಲ್ಲ ಬಗೆಯ ಕಪಟ ವ್ಯಾಖ್ಯಾನಗಳಿಗೆ ಆತುಕೊಳ್ಳಲಾಗುತ್ತಿದೆ.

ಬಡತನ ಹೆಚ್ಚುತ್ತಿರುವುದರ ವಾಸ್ತವಾಂಶವನ್ನು ಅಸಮಾನತೆಯ ಬಗ್ಗೆ ಲಭ್ಯವಿರುವ ಪುರಾವೆಗಳೂ ಸಮರ್ಥಿಸುತ್ತವೆ. ಥಾಮಸ್ ಪಿಕೆಟಿ ಮತ್ತು ಚಾನ್ಸೆಲ್ ಎಂಬ ಇಬ್ಬರು ಫ್ರೆಂಚ್ ಅರ್ಥಶಾಸ್ತ್ರಜ್ಞರು, ಭಾರತದಲ್ಲಿ 1922ರಲ್ಲಿ ಜಾರಿಗೆ ಬಂದ ಆದಾಯ ತೆರಿಗೆಯ ದತ್ತಾಂಶಗಳ ಆಧಾರದಲ್ಲಿ, 2013ರ ರಾಷ್ಟ್ರೀಯ ಆದಾಯದಲ್ಲಿ, ಭಾರತದ ಜನಸಂಖ್ಯೆಯ ಶೇ.1ರಷ್ಟು ಮಂದಿಯು ಶೇ.22ಪಾಲು ಹೊಂದಿದ್ದರು ಎಂದು ಅಂದಾಜು ಮಾಡಿದ್ದಾರೆ. ಅವರು ನಡೆಸಿದ ಈ ಅಧ್ಯಯನದ ಪ್ರಕಾರ, 1982ರಲ್ಲಿ, ರಾಷ್ಟ್ರೀಯ ಆದಾಯದ ಕೇವಲ ಶೇ.6ರಷ್ಟು ಪಾಲು ಹೊಂದಿದ್ದ ಶೇ.1ರಷ್ಟು ಮಂದಿಯ ಈ ಪಾಲು 2013ರಲ್ಲಿ ಅತ್ಯಧಿಕ ಮಟ್ಟ (ಶೇ.22) ತಲುಪಿದೆ. ಈ ಇಬ್ಬರು ಅರ್ಥಶಾಸ್ತ್ರಜ್ಞರು ಬಳಸಿದ ವಿಧಾನದ ಬಗ್ಗೆ ಟೀಕೆ ಏನೇ ಇರಲಿ, ಅದರ ಫಲಿತಾಂಶವನ್ನಂತೂ ಅಲ್ಲಗಳೆಯುವಂತಿಲ್ಲ. ನವ ಉದಾರವಾದಿ ಬಂಡವಾಳಶಾಹಿ ಭಾರತದಲ್ಲಿ ಅಸಮಾನತೆಗಳು ಅದೆಷ್ಟು ತೀಕ್ಷ್ಣವಾಗಿ ಬೆಳೆದಿವೆ ಎಂದರೆ, ವಾಸ್ತವವಾಗಿ, ಬಡತನದ ಹೆಚ್ಚಳದಲ್ಲಿ ಪರಿಣಮಿಸಿವೆ.

ಬಡತನದ ಹೆಚ್ಚಳವು ಯಾವ ನಿರ್ದಿಷ್ಟ ವಿಧಾನದ ಮೂಲಕ ನಡೆಯುತ್ತದೆ ಎಂಬುದು, ರೈತರೂ ಸೇರಿದಂತೆ ಕಿರು ಉತ್ಪಾದಕರ ಜೀವನೋಪಾಯವನ್ನು ಧೂಳೀಪಟಗೊಳಿಸುವ ಮತ್ತು ನಿರ್ಗತಿಕರಾದ ಅವರ ಪೈಕಿ ಹೆಚ್ಚಿನವರು ದುರ್ಲಭವಾಗಿರುವ ಉದ್ಯೋಗಗಳನ್ನು ಅರಸಿ ನಗರಗಳಿಗೆ ವಲಸೆ ಹೋಗುವ ಪ್ರಕ್ರಿಯೆಯು, ಮಾರ್ಕ್ಸ್ ಅದಾಗಲೇ ಹೇಳಿದ್ದ ರೀತಿಯಲ್ಲೇ ನಡೆಯುತ್ತಿದೆ. ಇಂತಹ ವಲಸಿಗರು ಮತ್ತು ಕಾರ್ಮಿಕ ವರ್ಗದ ಸ್ವಾಭಾವಿಕ ಹೆಚ್ಚಳದ ಒಂದು ಭಾಗವೂ ಸಹ, ಉದ್ಯೋಗ ದೊರೆಯದೆ, ಕಾರ್ಮಿಕರ ಮೀಸಲು ಪಡೆಯ (ದುರ್ಲಭವಾಗಿರುವ ಉದ್ಯೋಗಗಳನ್ನು ಈಗಾಗಲೇ ಕೆಲಸ ಮಾಡುತ್ತಿರುವವರೊಂದಿಗೆ ಹಂಚಿಕೊಳ್ಳುವ ಅರ್ಥದಲ್ಲಿ) ಗಾತ್ರವನ್ನು ಹೆಚ್ಚಿಸುತ್ತವೆ. ಈ ಕಾರಣದಿಂದಾಗಿ ಸಂಘಟಿತ ಕಾರ್ಮಿಕರ ಚೌಕಾಸಿಯ ಶಕ್ತಿಯೇ ಇಳಿಯುತ್ತದೆ. ಹಾಗಾಗಿ, ಅಸಮಾನತೆ ಮತ್ತು ಬಡತನದ ಪರಿಸ್ಥಿತಿಯು ಮತ್ತಷ್ಟು ಹದಗೆಡುತ್ತದೆ.

ಬಡತನದ ಹೆಚ್ಚಳದ ಬಗ್ಗೆ ಬರೆದ ಅನೇಕ ಅಂಕಣಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಹಾಗಾಗಿ, ಈ ಅಂಶವನ್ನು ವಿವರಿಸುವ ಅಗತ್ಯವಿಲ್ಲ. ಆದರೆ, ಈ ಅಂಶಕ್ಕೆ ಸಂಬಂಧಿಸಿದಂತೆ ಆಗಾಗ್ಗೆ ಎರಡು ತಪ್ಪು ತೀರ್ಮಾನಗಳಿಗೆ ಬರಲಾಗುತ್ತಿದೆ. ಮೊದಲನೆಯದು, ಆರ್ಥಿಕ ಬೆಳವಣಿಗೆಯು ಬಡತನದ ಹೆಚ್ಚಳವನ್ನು ಉಂಟುಮಾಡಿದ ಪಕ್ಷದಲ್ಲಿ, ಬೆಳವಣಿಗೆಯು ಸ್ಥಗಿತಗೊಂಡಾಗ, ಬಡತನದ ಇಳಿಕೆಯಾಗದಿದ್ದರೂ ಕೊನೆಯ ಪಕ್ಷ ಬಡತನವು ಮತ್ತಷ್ಟು ಏರದೆ ಸ್ಥಗಿತಗೊಳ್ಳಬೇಕಾಗುತ್ತದೆ. ಈ ಊಹೆಯು ತಪ್ಪಾಗುತ್ತದೆ, ಏಕೆಂದರೆ, ಬೆಳವಣಿಗೆ ಮತ್ತು ಸ್ಥಗಿತತೆಗಳು ಬಡತನದ ಮೇಲೆ ಉಂಟುಮಾಡುವ ಪರಿಣಾಮಗಳು ಒಂದೇ ರೀತಿಯಲ್ಲಿರುವುದಿಲ್ಲ. ಬೆಳವಣಿಗೆಯು ಬಡತನವನ್ನು ವೃದ್ಧಿಸುತ್ತದೆ ಎಂದಾದರೆ, ಆಗ, ಬೆಳವಣಿಗೆ ಕುಂಠಿತವಾದರೆ ಅದಕ್ಕೂ ಹೆಚ್ಚಿನ ಮಟ್ಟದಲ್ಲಿ ಬಡತನವು ಹೆಚ್ಚಾಗುತ್ತದೆ.


ಆರ್ಥಿಕ ಬೆಳವಣಿಗೆಯು ಬಡತನದ ಹೆಚ್ಚಳವನ್ನು ಉಂಟುಮಾಡುತ್ತದೆ, ಹೇಗೆಂದರೆ, ಕಿರು ಉತ್ಪಾದಕರು ಮತ್ತು ರೈತರನ್ನು ನಿರ್ಗತಿಕರನ್ನಾಗಿಸುವ ಮೂಲಕ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಅವರು ಭೂಮಿ ಅಥವಾ ಇತರ ಆಸ್ತಿಗಳನ್ನು ಕಳೆದುಕೊಳ್ಳುವ ಮೂಲಕ ಬಂಡವಾಳದ ಆದಿಮ ಶೇಖರಣೆಗೆ ಒಳಗಾಗದಿದ್ದರೂ ಸಹ, ಅವರ ಆದಾಯದ ಮೇಲೆ ಒಂದಲ್ಲಾ ಒಂದು ರೀತಿಯ ಕತ್ತರಿ ಬೀಳುತ್ತದೆ. ಬೆಳವಣಿಗೆಯ ಸ್ಥಗಿತತೆ ಎಂದರೆ (ಬೆಳವಣಿಗೆ ಕುಂಠಿತ ಎಂದರೆ) ಒಬ್ಬ ರೈತ ಅಥವಾ ಸಣ್ಣ ಉತ್ಪಾದಕನ ಸರಾಸರಿ ಆದಾಯವು ಹೆಚ್ಚಾಗುತ್ತದೆ ಎಂದು ಅರ್ಥವಲ್ಲ. ಅದಕ್ಕೆ ವಿರುದ್ಧವಾಗಿ, ಅವರ ಆದಾಯವು ಮತ್ತಷ್ಟು ಕಡಿಮೆಯಾಗುತ್ತದೆ, ಬೇರೊಂದು ಕಾರಣದಿಂದಾಗಿ.

ಈಗ ಒಂದು ಸರಳ ಉದಾಹರಣೆಯನ್ನು ನೋಡೋಣ. ಒಬ್ಬ ರೈತನ ಹಣ ಆದಾಯವು ಈ ಹಿಂದೆ 100 ರೂಪಾಯಿ ಇತ್ತು ಎಂದುಕೊಳ್ಳೋಣ – ಅವನ ಉತ್ಪನ್ನದ 200 ರೂ ಮೌಲ್ಯದಲ್ಲಿ 100 ರೂ ಲಾಗುವಾಡು ವೆಚ್ಚಗಳನ್ನು ಕಳೆಯಲಾಗಿದೆ. ಆದರೆ, ಆರೋಗ್ಯ ಸೇವೆಗಳು ಖಾಸಗೀಕರಣಗೊಂಡ ಪರಿಣಾಮವಾಗಿ ಅವನ ವೈದ್ಯಕೀಯ ವೆಚ್ಚಗಳು ಹೆಚ್ಚುತ್ತವೆ. ಈ ಕಾರಣದಿಂದಾಗಿ ಅವನ ನಿಜ ಆದಾಯವು ಹಿಂಡಿಕೆಗೆ ಒಳಗಾಗಿದೆ. ಆರ್ಥಿಕ ಬೆಳವಣಿಗೆ ಈಗ ಕುಂಠಿತವಾಗಿದೆಯಾದರೂ ವೈದ್ಯಕೀಯ ವೆಚ್ಚಗಳೇನೂ ಕಡಿಮೆಯಾಗಿಲ್ಲ. ಅಲ್ಲದೆ, ಲಾಗುವಾಡು ವೆಚ್ಚಗಳು ಇಳಿಯದಿದ್ದರೂ ಸಹ, ರೈತನು ತನ್ನ ಉತ್ಪನ್ನಗಳಿಗೆ ಹಿಂದಿನ ಬೆಲೆಯನ್ನು ಪಡೆಯಲಾರ. ಹಾಗಾಗಿ, ಅವನ ಹಣ ಆದಾಯವು ಇಳಿಯುತ್ತದೆ. ರೈತನನ್ನು ಈ ಹಿಂದೆ ಒಂದು ವಿಧಾನದ ಮೂಲಕ ಹಿಂಡುತ್ತಿದ್ದರೆ ಈಗ ಮತ್ತೊಂದು ವಿಧಾನದ ಮೂಲಕ ಹಿಂಡಲಾಗುತ್ತಿದೆ, ಇದರೊಂದಿಗೆ ಹಳೆಯ ಹಿಂಡಿಕೆ ವಿಧಾನವು ಮುಂದುವರೆಯುತ್ತದೆ.

ಅದೇ ರೀತಿಯಲ್ಲಿ, ಒಬ್ಬ ದುಡಿಯುವ ವ್ಯಕ್ತಿಯ ನಿಜ ಆದಾಯವು, ಆತನ ದಿನದ ಕೆಲಸಕ್ಕೆ ಸಿಗುವ ಕೂಲಿ ಮತ್ತು ಆತನಿಗೆ ಕೆಲಸ ದೊರೆಯುವ ದಿನಗಳ ಸಂಖ್ಯೆ, ಈ ಎರಡೂ ರೀತಿಯ ಅಂಶಗಳ ಫಲವಾಗಿದ್ದರೆ, ಬೆಳವಣಿಗೆಯೊಂದಿಗೆ ಸಂಬಂಧಿಸಿದ ನಿರ್ಗತಿಕತನವು ಮೂಲತಃ ದಿನಗೂಲಿಯನ್ನು (ದಿನದ ಆದಾಯವನ್ನು) ಕಡಿಮೆಗೊಳಿಸುವ ಮೂಲಕ ಸಂಭವಿಸುತ್ತದೆ. ಬೆಳವಣಿಗೆಯ ಸ್ಥಗಿತತೆಯು ದಿನದ ಕೆಲಸಕ್ಕೆ ದೊರೆಯುವ ನಿಜವಾದ ಪ್ರತಿಫಲವನ್ನು ಹೆಚ್ಚಿಸುವುದಿಲ್ಲ, ಬದಲಿಗೆ, ಕೆಲಸ ದೊರೆಯುವ ದಿನಗಳ ಸಂಖ್ಯೆಯನ್ನು ಕಡಿಮೆಮಾಡುತ್ತದೆ. ಹೀಗೆ, ಉನ್ನತ ಬೆಳವಣಿಗೆಯ ಜೊತೆಯಲ್ಲೇ ಹೆಚ್ಚಿದ ಬಡತನವು, ಬೆಳವಣಿಗೆಯು ಕುಂಠಿತಗೊಂಡಾಗ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತದೆ.

ಆರ್ಥಿಕ ಹಿಂಜರಿತ ಕಾರಣವಲ್ಲದ ನಿರ್ಗತಿಕತನ ಮತ್ತು ಆರ್ಥಿಕ ಹಿಂಜರಿತ ಕಾರಣದ ನಿರ್ಗತಿಕತನ ಇವುಗಳ ನಡುವಿನ ವ್ಯತ್ಯಾಸವನ್ನು ಸಾಧಾರಣವಾಗಿ ಗುರುತಿಸಬಹುದು. ಬೆಳವಣಿಗೆಯ ಕಾಲಮಾನದ ಬಡತನ ಬೆಳೆಯಲು ಮೊದಲ ಪ್ರಕ್ರಿಯೆಯೇ ಕಾರಣವಾದರೆ, ಆರ್ಥಿಕ ಹಿಂಜರಿತದ ಕಾಲಮಾನದ ಬಡತನವು ಮತ್ತಷ್ಟು ಬೆಳೆಯಲು ಎರಡನೆಯ ಪ್ರಕ್ರಿಯೆಯು ಕಾರಣವಾಗುತ್ತದೆ, ಮೊದಲನೆಯ ಕಾರಣವು ಮಾಯವಾಗದಿದ್ದರೂ ಸಹ. ಹಾಗಾಗಿ, ಆರ್ಥಿಕ ಹಿಂಜರಿತ ಮತ್ತು ಸ್ಥಗಿತತೆಗಳು, ಬೆಳವಣಿಗೆ ಹಂತದಲ್ಲಿ ಕಾರ್ಯಪ್ರವೃತ್ತವಾಗಿರುವ ಅಂಶಗಳ ಮೇಲೆ ಹೆಚ್ಚುವರಿಯಾಗಿ ಇನ್ನೂ ಕೆಲವು ಅಂಶಗಳನ್ನು

ಪುಟ 15 ನೋಡಿ



ಕ್ವಾಡ್ ಎಂಬ ಏಷ್ಯಾದ ನ್ಯಾಟೋ ಕೂಟ ಭಾರತದ ಹಿತಾಸಕ್ತಿ ಕಾಪಾಡುವುದಿಲ್ಲ

– ಪ್ರಕಾಶ್ ಕಾರಟ್
ಅನು: ನಾಗರಾಜ ನಂಜುಂಡಯ್ಯ

ಜಮ್ಮು ಮತ್ತು ಕಾಶ್ಮೀರದ ಸ್ಥಿತಿಯನ್ನು ಬದಲಾಯಿಸುವ ಭಾರತದ ಕ್ರಮಗಳು ಮತ್ತು ಯುಎಸ್–ಭಾರತ ಸಂಬಂಧಗಳು' ಚೀನಾ ವಿರುದ್ಧ ಘನಿಷ್ಠವಾಗುತ್ತಿರುವುದು; ಗಡಿ ವಿಷಯದ ಬಗ್ಗೆ ಚೀನಾದ ನಿಲುವುಗಳ ಮೇಲೆ ಪರಿಣಾಮ ಬೀರಿವೆ ಎಂದು ಕಳೆದ ಆರು ತಿಂಗಳುಗಳ ವಿದ್ಯಮಾನಗಳಂದ ಸ್ಪಷ್ಟವಾಗಿದೆ.ಚೀನಾ–ವಿರೋಧಿ ಗುಂಪಿನಲ್ಲಿ ಗುರುತಿಸಿಕೊಳ್ಳದೆ, ಯು.ಎಸ್ ಮತ್ತು ಅದರ ಮಿತ್ರರಾಷ್ಟ್ರಗಳೊಂದಿಗೆ ಯಾವುದೇ ಚೀನಾ–ವಿರೋಧಿ ಗುಂಪು ಕಟ್ಟಿಕೊಳ್ಳದೆ, ಗಡಿಯಲ್ಲಿ ತನ್ನ ಪ್ರಸ್ತುತ ವಿವಾದಗಳನ್ನು ಬಗೆಹರಿಸಲು ಚೀನಾದೊಂದಿಗೆ ನೇರವಾಗಿ ಮಾತುಕತೆ ನಡೆಸುವಲ್ಲಿ ಭಾರತದ ರಾಷ್ಟ್ರೀಯ ಹಿತಾಸಕ್ತಿ ಅಡಗಿದೆ. ಈ ಸಮಸ್ಯೆಯನ್ನು ನಿಭಾಯಿಸುವ ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳನ್ನು ಭಾರತ ಹೊಂದಿದೆ. ಇದಕ್ಕಾಗಿ ಭಾರತ ಯು.ಎಸ್ ನ ಅಡಿಯಾಳು ಆಗುವ ಅಗತ್ಯವಿಲ್ಲ. ಆ ನಿಟ್ಟಿನಲ್ಲಿ ಭಾರತ ಮುಂದುವರಿಯಬೇಕಾಗಿದೆ.

ಯು.ಎಸ್ (ಅಮೆರಿಕದ ಸಂಯುಕ್ತ ಸಂಸ್ಥಾನಗಳು) ಜಪಾನ್, ಆಸ್ಟ್ರೇಲಿಯಾ ಮತ್ತು ಭಾರತವನ್ನು ಒಳಗೊಂಡ ಮಂತ್ರಿ ಮಂಡಲದ ಚತುರ್ಭುಜ ಸಭೆ ಅಕ್ಟೋಬರ್ 6 ರಂದು, ಟೋಕಿಯೊ ನಗರದಲ್ಲಿ ನಡೆಯಿತು. ಕ್ವಾಡ್ ಎಂದು ಕರೆಯಲ್ಪಡುವ ಈ ನಾಲ್ಕು ದೇಶಗಳ ಗುಂಪು ಚೀನಾವನ್ನು ಗುರಿ ಯಾಗಿಸಿಕೊಂಡು ಮಿಲಿಟರಿ ಮೈತ್ರಿಯಾಗಿ ವೇಗವಾಗಿ ರೂಪುಗೊಳ್ಳುತ್ತಿರುವುದು ಕಂಡು ಬಂದಿದೆ.

ಭಾರತವು ಈ "ಮೈತ್ರಿ ವ್ಯವಸ್ಥೆ' ಯ ಭಾಗವಾಗುವುದಿಲ್ಲ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಸೆಪ್ಟೆಂಬರ್ ನಲ್ಲಿ ಹೇಳಿಕೆ ನೀಡಿದ್ದರು. ಆದರೆ ಕ್ವಾಡ್ ಗೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದಾಗ ಈ ನಿಲುವನ್ನು ನಂಬಲು ಅಸಾಧ್ಯವೆನಿಸುತ್ತದೆ. ಯು.ಎಸ್ ನೊಂದಿಗಿನ ವ್ಯೂಹಾತ್ಮಕ ಮೈತ್ರಿ ಪಡೆದುಕೊಳ್ಳುತ್ತಿರುವ ಒಟ್ಟಾರೆ ತಿರುವು, ಮೋದಿ ಸರ್ಕಾರದ ವರ್ತನೆಯು ವಾಸ್ತವದ ಮರೆಮಾಚುವಿಕೆ ಮತ್ತು ಎರಡು ನಾಲಗೆಗಳ ಮಾತಿನ ಮಿಶ್ರಣದಂತೆ ಕಾಣುತ್ತದೆ.

ಲಡಾಖ್ ನಲ್ಲಿ ಚೀನಾದೊಂದಿಗೆ ಗಡಿಯಲ್ಲಿ ಬಿಗುವಿನಪರಿಸ್ಥಿತಿಯ ಪರಿಣಾಮವಾಗಿ, ಕ್ವಾಡ್ ನಲ್ಲಿ ಪಾಲ್ಗೊಳ್ಳಲುಭಾರತ ಅತಿ ಉತ್ಸಾಹವನ್ನು ತಳೆಯುತ್ತಿದೆ ಎಂದಿದ್ದಾರೆಕೆಲವು ವ್ಯಾಖ್ಯಾನಕಾರರು. ಅವರ ಪ್ರಕಾರ, ಚೀನಾದ ಗಡಿ ವಿಸ್ತರಣಾವಾದಿ ನಡೆಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಯು. ಎಸ್ ನೇತೃತ್ವದ ಭದ್ರತಾ ಮೈತ್ರಿಕೂಟಕ್ಕೆ ಭಾರತ ಸೇರಬೇಕಾದ ಒತ್ತಡವಿದೆ.ಹಲವು ವ್ಯೂಹಾತ್ಮಕ ತಜ್ಞರು ಮತ್ತು ಯುಎಸ್ ಪರ ಭದ್ರತಾ ವಿಶ್ಲೇಷಕರು ಈ ನಿಲುವಿಗೆ ಬೆಂಬಲವಾಗಿದ್ದಾರೆ.

ಆದರೆ ಇದು ಸತ್ಯವಲ್ಲ. ಲಡಾಖ್ ನಲ್ಲಿ ಪ್ರಸ್ತುತ ಬಿಗುವಿನಪರಿಸ್ಥಿತಿಗಿಂತಮುಂಚೆಯೇ, ಚತುರ್ಭುಜ ಮೈತ್ರಿಯಲ್ಲಿ ಪಾಲುದಾರರಾಗಲು ಭಾರತವು ಸಂಪೂರ್ಣವಾಗಿ ಬದ್ಧವಾಗಿತ್ತು ಎಂಬುದು ವಾಸ್ತವಿಕ ಸಂಗತಿ.

ಜನವರಿ 2015 ರಲ್ಲಿ ಅಧ್ಯಕ್ಷ ಒಬಾಮಾ ಅವರ ದೆಹಲಿ ಭೇಟಿಯ ಸಂದರ್ಭದಲ್ಲಿಯೇ, ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ "ಏಷ್ಯಾ–ಪೆಸಿಫಿಕ್ ಮತ್ತು ಹಿಂದೂ ಮಹಾಸಾಗರ ಪ್ರದೇಶಕ್ಕೆ ಜಂಟಿ ವ್ಯೂಹಾತ್ಮಕ ದೃಷ್ಟಿ" ಕುರಿತು ಜಂಟಿ ಹೇಳಿಕೆ ನೀಡಲಾಗಿತ್ತು. ಹಾಗಾಗಿ, ಈ ಪ್ರದೇಶಕ್ಕಾಗಿ ಭಾರತವು, ಆಗಲೇ ಅಮೆರಿಕದ ವ್ಯೂಹಾತ್ಮಕಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಂಡ್ಡಿತ್ತು ಎಂಬುದು ವಾಸ್ತವ. "ಕಡಲ ಸುರಕ್ಷತೆಯನ್ನು ಕಾಪಾಡುವ ಪ್ರಾಮುಖ್ಯತೆಯನ್ನು ನಾವು ದೃಢೀಕರಿಸುತ್ತೇವೆ ಮತ್ತು ಈ ಪ್ರದೇಶದಾದ್ಯಂತ, ವಿಶೇಷವಾಗಿ ದಕ್ಷಿಣದ ಚೀನಾ ಸಮುದ್ರದಲ್ಲಿ ಸಂಚಾರ ಮತ್ತು ಹಾರಾಟದ ಸ್ವಾತಂತ್ರ್ಯವನ್ನು ಖಾತ್ರಿಪಡಿಸಿಕೊಳ್ಳುತ್ತೇವೆ" ಎಂದು ಹೇಳಿಕೆಯಲ್ಲಿ ಇದು ತುಂಭಾ ಸ್ಪಷ್ಟವಾಗಿತ್ತು. ಈ ಕುರಿತಂತೆ, ಅಂದಿನ ರಕ್ಷಣಾ ಕಾರ್ಯದರ್ಶಿ ಲಿಯಾನ್ ಪನೆಟ್ಟಾ ಅವರ ಮಾತಿನ ಪ್ರಕಾರ, 2012 ರಲ್ಲಿಯೇ ಒಬಾಮಾ ನೇತೃತ್ವದ ಆಡಳಿತ ಏಷ್ಯಾ ಪ್ರದೇಶದಲ್ಲಿ ಭಾರತವನ್ನು ಕ್ವಾಡ್ ನ ಪ್ರಮುಖ ಕೊಂಡಿ ಎಂದು ಪರಿಗಣಿಸಿತ್ತು ಎಂದಿದ್ದರು.

ಕ್ವಾಡ್ ಅನ್ನು ರೂಪಿಸುವ ಪ್ರಯತ್ನಗಳ ಹಿಂದೆ ಒಂದು ಇತಿಹಾಸವಿದೆ. ಕ್ವಾಡ್ ರಚಿಸುವ ಮೊದಲ ಪ್ರಯತ್ನ 2007 ರಲ್ಲಿ ಜಪಾನಿನ ಪ್ರಧಾನಿ ಶಿಂಜೊ ಅಬೆ ಅವರಿಂದ ನಡೆದಿತ್ತು. ಆಗ, ಚೀನಾ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಭಾರತ ಮತ್ತು ಇತರ ಪಾಲುದಾರ ರಾಷ್ಟ್ರಗಳಿಗೆ ಸೂಚನೆ ಕಳುಹಿಸಿದ ನಂತರ, ಆಗ ಆಸ್ಟ್ರೇಲಿಯಾದ ಹೊಸ ಆಡಳಿತ ಮತ್ತು ಮನಮೋಹನ್ ಸಿಂಗ್ ಸರ್ಕಾರ ಹಿಂದೆ ಸರಿದಿದ್ದವು

ಆಸಿಯಾನ್ ಶೃಂಗಸಭೆಯಲ್ಲಿ 2017 ರ ನವೆಂಬರ್ ನಲ್ಲಿ ಮನಿಲಾದಲ್ಲಿ ನಡೆದ ಸಭೆಯಲ್ಲಿ ನಾಲ್ಕು ದೇಶಗಳ ಮುಖಂಡರು ಭೇಟಿಯಾಗಿ ಈ ನಿಟ್ಟಿನಲ್ಲಿ ಹೆಜ್ಜೆ ಮುಂದಿಡಲು ಒಪ್ಪಿಕೊಂಡಾಗ ಕ್ವಾಡ್ ನ ಕಲ್ಪನೆಯನ್ನು ಪುನರುಜ್ಜೀವನ ಗೊಳಿಸಲಾಯಿತು. ಆ ಹೊತ್ತಿಗೆ, ಎಲ್ಲಾ ನಾಲ್ಕು ದೇಶಗಳು ಬಲಪಂಥೀಯ ಸರ್ಕಾರಗಳನ್ನು ಹೊಂದಿದ್ದು, ಯಾವ ದೇಶಕ್ಕೂ ಚೀನಾವನ್ನು ಎದುರಿಸುವ ಬಗ್ಗೆ ಸೈದ್ಧಾಂತಿಕ ಮುಜುಗರ ಅಥವಾ ಆಕ್ಷೇಪ ಇರಲಿಲ್ಲ. ಆನಂತರ ನಡೆದ ಕ್ವಾಡ್ ಸಭೆಯಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಭಾಗವಹಿಸಿದ್ದರು.

ಅಮೆರಿಕದ ಒತ್ತಡದಿಂದಾಗಿಯೇ , ಕ್ವಾಡ್ ಫೋರಂ ಅನ್ನು ಸಚಿವ ಮಟ್ಟಕ್ಕೆ ಏರಿಸಲಾಯಿತು ಮತ್ತು ಯುಎನ್ ಜನರಲ್ ಅಸೆಂಬ್ಲಿ ಅಧಿವೇಶನದ ಹೊರತಾಗಿ 2019 ರ ಸೆಪ್ಟೆಂಬರ್ ನಲ್ಲಿ ನ್ಯೂಯಾರ್ಕ್ ನಲ್ಲಿ ಮೊದಲ ಸಚಿವ ಮಟ್ಟದ ಸಭೆ ನಡೆಯಿತು. ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಹೆಚ್ಚುತ್ತಿರುವ ಪ್ರಭಾವವನ್ನು ಆರ್ಥಿಕ ಮತ್ತು ವ್ಯೂಹಾತ್ಮಕವಾಗಿಎದುರಿಸಲು ಈ ಸಹಭಾಗಿತ್ವವು ಇದ ಎಂಬುದು ಸ್ಪಷ್ಟವಾಗಿತ್ತು. ಯು. ಎಸ್ ಪ್ರಾರಂಭಿಸಿದ "ಮುಕ್ತ ಇಂಡೋ ಪೆಸಿಫಿಕ್" ನ ಮುಕ್ತ ಮಾತುಕತೆ, ಕ್ವಾಡ್ ನ ಪುನರುಜ್ಜೀವನಕ್ಕೆ ಆಧಾರವನ್ನು ಒದಗಿಸಿತು. ಇಲ್ಲಿ ಯುಎಸ್ ಗೆ ಇದ್ದ ಸ್ವಹಿತಾಸಕ್ತಿಯನ್ನು ಗಮನಿಸಬೇಕು.

ಕ್ವಾಡ್ ನ ಸಚಿವ ಮಟ್ಟದ ಸಭೆಗೆ ಮುನ್ನಾ, ಸೆಪ್ಟೆಂಬರ್ 25 ರಂದು, ನಾಲ್ಕು ದೇಶಗಳ ವಿದೇಶಾಂಗ ಸಚಿವಾಲಯದ ಅಧಿಕಾರಿಗಳ ನಡುವೆ ನಡೆದ ಸಭೆಯಲ್ಲಿನ ಮಾತುಕತೆಗಳಿಂದ ಅದರ ಉದ್ದೇಶ ಸ್ಪಷ್ಟವಾಗಿತ್ತು. ವ್ಯಾಪಾರ ತಂತ್ರಜ್ಞಾನ ಮತ್ತು ವ್ಯೂಹಾತ್ಮಕ ಕ್ಷೇತ್ರಗಳಲ್ಲಿ ಚೀನಾದೊಂದಿಗಿನ ಸಂಘರ್ಷವನ್ನು ಹೆಚ್ಚಿಸುವ ಟ್ರಂಪ್ ಆಡಳಿತದ ಧೋರಣೆಗಳು ಈ ಸಭೆಯ ಅಜೆಂಡಾವನ್ನು ನಿರ್ಣಯಿಸಿದ್ದವು. ಸಚಿವರ ಸಭೆಯ ನಂತರ ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, "ವಿಶ್ವಾಸಾರ್ಹ ಮಾರಾಟಗಾರರ ಬಳಕೆಯನ್ನು ಹೇಗೆ ಉತ್ತೇಜಿಸುವುದು, ಅದರಲ್ಲೂ ವಿಶೇಷವಾಗಿ 5 ಜಿ ಮೊಬೈಲ್ ಉತ್ಪನ್ನಗಳದ್ದನ್ನು ಹೇಗೆ ಉತ್ತೇಜಿಸುವುದು' ಎಂಬುದನ್ನು ಚರ್ಚಿಸಲಾಯಿತು. ಅಮೆರಿಕದ ಪ್ರಮುಖ ಕಾರ್ಯಸೂಚಿಯಾದ, ಚೀನಾದ ಹುವಾವೇ ಯ 5 ಜಿ, ತಂತ್ರಜ್ಞಾನದ ರಫ್ತನ್ನು ತಡೆಹಿಡಿಯುವುದು ಸಭೆಯಲ್ಲಿ ಮುಖ್ಯ ಚರ್ಚೆಯ ವಿಷಯವಾಗಿತ್ತು. ಭಯೋತ್ಪಾದನಾ ನಿಗ್ರಹ, ಸೈಬರ್ ಮತ್ತು ಕಡಲ ಸುರಕ್ಷತೆ ಮತ್ತು ಈ ಪ್ರದೇಶದ ಗುಣಮಟ್ಟದ ಮೂಲ ಸೌಕರ್ಯಗಳು ಇತ್ಯಾದಿಇತರ ವಿಷಯಗಳೂ ಇದ್ದವು.

ಏಷ್ಯಾ–ಪೆಸಿಫಿಕ್ ಪ್ರದೇಶವನ್ನು 'ಇಂಡೋ–ಫೆಸಿಪಿಕ್ ಪ್ರದೇಶ' ವೆಂದು ಮರು ನಾಮಕರಣ ಮಾಡಿದಾಗಲೇ, ಮತ್ತು ಯುಎಸ್–ಪೆಸಿಫಿಕ್ ಕಮಾಂಡ್'ನ್ನು "ಯುಎಸ್ ಇಂಡೋ –ಪೆಸಿಫಿಕ್ ಕಮಾಂಡ್" ಎಂದು ಮರು ನಾಮಕರಣ ಮಾಡುವ ಸಮಾರಂಭದಲ್ಲಿ ಪಾಲ್ಗೊಳ್ಳಲು ಭಾರತ ಹಿರಿಯ ಮಿಲಿಟರಿ ಅಧಿಕಾರಿಯನ್ನು ಕಳುಹಿಸಿದಾಗಲೇ, ಪೂರ್ಣ ಪ್ರಮಾಣದ ಭದ್ರತಾ ಮೈತ್ರಿಕೂಟದಲ್ಲಿ ಭಾರತವನ್ನು ಸೆಳೆಯುವ ಟ್ರಂಪ್ ಆಡಳಿತದ ಪ್ರಯತ್ನವು ಸ್ಪಷ್ಟವಾಗಿತ್ತು.

ಇದೇ ಸಂದರ್ಭದಲ್ಲಿ, ಮಿಲಿಟರಿ ಮೈತ್ರಿಯ ಸಂರಚನೆಯನ್ನುಸಹ ಪೂರ್ಣಗೊಳಿಸಬೇಕಾಗಿತ್ತು. ಲಾಜಿಸ್ಟಿಕ್ಸ್ ಎಕ್ಸ್ಚೇಂಜ್ ಮೆಮೋರಾಂಡಮ್ ಆಫ್ ಅಗ್ರಿಮೆಂಟ್ (ಎಲ್.ಇ.ಎಂ.ಓ.ಎ.– ಲೆಮೊಎ) ಎಂದು ಕರೆಯಲ್ಪಡುವ ಲಾಜಿಸ್ಟಿಕ್ (ಮೂಲಸೌಲಭ್ಯ) ಒಪ್ಪಂದಕ್ಕೆ, 2016 ರಲ್ಲಿ ಯು.ಎಸ್ ನೊಂದಿಗೆ ಭಾರತ ಸಹಿ ಹಾಕಿತು. ಪರಸ್ಪರರ ದೇಶಗಳಲ್ಲಿ ಎರಡು ಸಶಸ್ತ್ರ ಪಡೆಗಳ ರಿಪೇರಿ, ಇಂಧನ ಮತ್ತು ಸೇವೆಗಾಗಿ ಮೂಲ ಸೌಲಭ್ಯಗಳನ್ನು ಬಳಸುವ ಒಪ್ಪಂದ ಇದಾಗಿತ್ತು. ಯು. ಎಸ್ ತನ್ನ ಮಿತ್ರ ರಾಷ್ಟ್ರಗಳೊಂದಿಗೆ ಬಳಸುವ ಈ ಒಪ್ಪಂದದ ನಿಜವಾದ ಹೆಸರು "ಸ್ವಾಧೀನ ಮತ್ತು ಪರಸ್ಪರ–ಸೇವೆ ಒಪ್ಪಂದವೆಂದು". ಕ್ವಾಡ್ ನಾಲ್ಕು ದೇಶಗಳ ನಡುವೆ ಪೂರ್ಣ ಪ್ರಮಾಣದ ಮಿಲಿಟರಿ ಸಹಕಾರ ಏರ್ಪಾಡು ಆಗಬೇಕಾದರೆ, ಭಾರತವು, ಆಸ್ಟ್ರೇಲಿಯಾ ಮತ್ತು ಜಪಾನ್ ನೊಂದಿಗೆ ಇಂತಹ ಸಹ ಲಾಜಿಸ್ಟಿಕ್ಸ್ ಒಪ್ಪಂದಗಳನ್ನು ಮಾಡಿಕೊಳ್ಳುವುದು ಅಗತ್ಯವಾಗಿತ್ತು. ಈ ವರ್ಷದ ಮೇ ತಿಂಗಳಲ್ಲಿ ಲಡಾಖ್ ನಲ್ಲಿ ಪ್ರಸ್ತುತ ಸಂಘರ್ಷ ಪ್ರಾರಂಭವಾಗುವ ಮೊದಲು ಇವುಗಳನ್ನು ಸಮಾಲೋಚಿಸಲಾಗಿತ್ತು. ಜೂನ್ ನಲ್ಲಿ, ಆಸ್ಟ್ರೇಲಿಯಾ ಮತ್ತು ಭಾರತವು ಪರಸ್ಪರ ಲಾಜಿಸ್ಟಿಕ್ಸ್ ಬೆಂಬಲ ಒಪ್ಪಂದಕ್ಕೆ ಸಹಿ ಹಾಕಿದವು, ಇದು ಉಭಯ ದೇಶಗಳು ರಿಪೇರಿ ಮತ್ತು ಸರಬರಾಜು ಗಳಿಗಾಗಿ ಪರಸ್ಪರ ನೆಲೆಗಳನ್ನು ಬಳಸಲು ಅನುವು ಮಾಡಿಕೊಡುತ್ತದೆ.

ಜಪಾನಿನ ಸ್ವರಕ್ಷಣಾ ಪಡೆ ಮತ್ತು ಭಾರತೀಯ ಸಶಸ್ತ್ರ ಪಡೆಗಳ ನಡುವಿನ ಸರಬರಾಜು ಮತ್ತು ಸೇವೆಯ ಪರಸ್ಪರ ಪೂರೈಕೆ ಎಂಬ ಒಪ್ಪಂದಕ್ಕೆ ಸೆಪ್ಟೆಂಬರ್ 9 ರಂದು ಸಹಿ ಹಾಕಲಾಯಿತು. ಇದರೊಂದಿಗೆ, ಲಾಜಿಸ್ಟಿಕ್ಸ್ ಸಹಕಾರಕ್ಕಾಗಿ ಮತ್ತು ಎಲ್ಲರೊಂದಿಗೆ ಪರಸ್ಪರ ಕಾರ್ಯಸಾಧ್ಯತೆಯನ್ನು ಸುಲಭಗೊಳಿಸಲು, ಕ್ವಾಡ್ ನ ಇತರ ಮೂರು ಪಾಲುದಾರರೊಂದಿಗೆ ಭಾರತವು, ಪ್ರಮುಖ ಮಿಲಿಟರಿ ಒಪ್ಪಂದಕ್ಕೆ ಸಹಿ ಹಾಕಿತು.

ಈ ರೀತಿ ಎಲ್ಲಾ ಹಂತಗಳಲ್ಲಿ ಒಪ್ಪಂದಗಳಿಗೆ ಸಹಿ ಹಾಕಿದ ನಂತರವು, ಭಾರತ ಯಾವುದೇ ಮಿಲಿಟರಿ ಮೈತ್ರಿ ಅಥವಾ ಮೈತ್ರಿ ವ್ಯವಸ್ಥೆಯ ಭಾಗವಾಗುವುದಿಲ್ಲ ಎಂಬ ಮೋದಿ ಸರ್ಕಾರದ ಹೇಳಿಕೆಯು ತನ್ನ ಚತುರತೆ ಮತ್ತು ಜನರನ್ನು ಮೋಸಗೊಳಿಸುವುದಲ್ಲದೆ ಮತ್ತೇನೂ ಅಲ್ಲ. ಫೆಬ್ರವರಿ 2020 ರಲ್ಲಿ, ಟ್ರಂಪ್ ಭಾರತಕ್ಕೆ ಭೇಟಿ ನೀಡಿದಾಗ, ಪ್ರಕಟಿಸಿದ ಜಂಟಿ ಹೇಳಿಕೆಯಲ್ಲಿ, ಚತುರ್ಭುಜ ವೇದಿಕೆಯನ್ನು ಬಲಪಡಿಸುವ ಬಗ್ಗೆ ಮಾತುಕತೆ ನಡೆಸಲಾಗಿತ್ತು.

ಕ್ವಾಡ್ ನಿಂದ ಯು.ಎಸ್ ಏನನ್ನು ಬಯಸುತ್ತದೆ ಎಂಬುದು ಇದರಿಂದ ಸ್ಪಷ್ಟವಾಗಿದೆ. ಆಗಸ್ಟ್ 31 ರಂದು ನಡೆದ ಯುಎಸ್–ಇಂಡಿಯಾ 'ಸ್ಟ್ರಾಟೆಜಿಕ್ ಪಾರ್ಟ್ನರ್ಶಿಪ್ ಫೋರಂ' ಸಭೆಯಲ್ಲಿ, ಯುಎಸ್ ವಿದೇಶಾಂಗ ಕಾರ್ಯದರ್ಶಿ ಸ್ಟೀಫನ್ ಬೀಗನ್ ಹೇಳಿಕೆ ನೀಡುತ್ತಾ, "ಕ್ವಾಡ್ ಎಂಬುದು, ಹೊಸ ಏಷ್ಯನ್ ನ್ಯಾಟೋ" ಆಗಿದೆ ಎಂದು ಯುಎಸ್ ನ ಹೊಸ ಗುರಿಯನ್ನು ಅಂತಿಮವಾಗಿ ಬಹಿರಂಗ ಪಡಿಸಿದರು.

"ಇಂಡೋ–ಪೆಸಿಫಿಕ್ ಪ್ರದೇಶ' ವು ವಾಸ್ತವವಾಗಿ ಬಲವಾದ ಬಹುಪಕ್ಷೀಯ ರಚನೆಗಳ ಕೊರತೆಯನ್ನು ಹೊಂದಿದೆ. ನ್ಯಾಟೋ ಅಥವಾ ಯುರೋಪಿಯನ್ ಒಕ್ಕೂಟದಂತೆ ಸಾಮರ್ಥ್ಯ ಮತ್ತು ಧೈರ್ಯವನ್ನು ಈ ಕ್ವಾಡ್ ರಾಷ್ಟ್ರಗಳು ಹೊಂದಿಲ್ಲ. ಏಷ್ಯಾದ ಪ್ರಬಲ ಸಂಸ್ಥೆಗಳು ಹೆಚ್ಚಾಗಿ ಎಲ್ಲರನ್ನೂ ಒಳಗೊಂಡಿರುವುದಿಲ್ಲ. ಹಾಗಾಗಿ, ಈ ರೀತಿಯ ರಚನೆಯನ್ನು ಪರಿಚಯಿಸಲು, ಕೆಲವು ಹಂತದವರೆಗೆ ಆಹ್ವಾನಿಸಬಹುದು ಅಷ್ಟೆ. ನೆನಪಿಡಿ, ನ್ಯಾಟೋ ಸಹ ಸಾಧಾರಣ ನಿರೀಕ್ಷೆಗಳೊಂದಿಗೆ ಪ್ರಾರಂಭವಾಯಿತು ಮತ್ತು ಹಲವಾರು ದೇಶಗಳು ಆರಂಭದಲ್ಲಿ, ನ್ಯಾಟೋ ಸದಸ್ಯತ್ವ ಹೊಂದಿರಲಿಲ್ಲ. ತಟಸ್ಥತೆಯನಯುಎಸ್ ನಷ್ಟೇ ಬದ್ಧತೆಯನ್ನು ತೋರಿಸಿದರೆ ಮಾತ್ರ, ಅಂತಹ ಪೆಸಿಫಿಕ್ ನ್ಯಾಟೋ ಹೊರಬರಲು ಸಾಧ್ಯ" ಎಂದು ಬೀಗನ್ ಹೇಳಿದ್ದರು.

ಶರತ್ಕಾಲದಲ್ಲಿ ನವದೆಹಲಿಯಲ್ಲಿ ಕ್ವಾಡ್ ಸಚಿವ ಮಟ್ಟದ ಸಭೆಯನ್ನು ನಡೆಸಲಾಗುವುದು ಎಂದು ಬೀಗನ್ ಮಾಹಿತಿ ನೀಡಿದ್ದರು. ಇಲ್ಲಿಯವರೆಗೆ, ಇದನ್ನು ಭಾರತ ಸರ್ಕಾರವು ಸಾರ್ವಜನಿಕವಾಗಿ ಪ್ರಕಟಿಸಿರಲಿಲ್ಲ. ಅಕ್ಟೋಬರ್ ನಲ್ಲಿ ದೆಹಲಿಯಲ್ಲಿ ಕ್ವಾಡ್ ಮಂತ್ರಿಮಂಡಲ ಸಭೆ ನಡೆಯಲಿದೆ ಎಂದು ಬೀಗನ್ ಬಹಿರಂಗ ಪಡಿಸಿದ ನಂತರ, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರು ಅಂತಹ ಸಭೆ ನಡೆಯುತ್ತಿರುವುದನ್ನು ದೃಢೀಕರಿಸಬೇಕಾಯಿತು. ಆದರೆ ನಂತರ ಸಭೇಯನ್ನು ಅದನ್ನು ಟೋಕಿಯೊಗೆ ಸ್ಥಳಾಂತರಿಸಲಾಯಿತು. ಮೋದಿ ಸರಕಾರ ಮನಸ್ಸು ಬದಲಾವಣೆ ಮಾಡಿದ್ದರಿಂದಾಗಿ ಸ್ಥಳಾಂತರವಾಯೆತೇ? ಏಕೆ ಹೀಗಾಯಿತು?

ಏತನ್ಮಧ್ಯೆ, ಟೋಕಿಯೊದಲ್ಲಿ, ಯುಎಸ್ ➚



ಪಕ್ಷದ ಮೇಲೆ ದಾಳಿ : 1962-63

ಪುಟ 11 ರಿಂದ

ಬಣ್ಣದ ಪ್ರತಿಗಾಮಿಗಳ ಸಹಾಯ ಮತ್ತು ಸಹಕಾರ ಪಡೆದ ಸಂಕುಚಿತವಾದಿಗಳು ಎಂಬ ಆರೋಪ ಹೊರಿಸಿ ಯೋಜಿತವಾದ ಹಾಗೂ ಮಾನಹಾನಿಕರ ಪ್ರಚಾರ ಶುರುಮಾಡಿದರು. 'ದೇಶವಿರೋಧಿಗಳು' ಮತ್ತು 'ಚೈನಾಪರ' ಎಂಬ ಆರೋಪ ಹೊರಿಸಿ ಪಕ್ಷದ ಮುಖಂಡರು ಹಾಗೂ ಕಾರ್ಮಿಕ ನಾಯಕರುಗಳ ಬಂಧನ ಮಾಡಿರುವುದನ್ನು ಖಂಡಿಸಲು ಅವರು ನಿರಾಕರಿಸಿದರು. ತಮ್ಮೆಲ್ಲಾ ಪ್ರಯತ್ನಗಳನ್ನು ಮಾಡಿ ಈ ಬಂಧನಗಳನ್ನು ಖಂಡಿಸಿ ಎಐಟಿಯುಸಿ ನಿರ್ಣಯ ಅಂಗೀಕರಿಸದಂತೆ ಡಾಂಗೆ ನೋಡಿಕೊಂಡರು. ಬಲಪಂಥೀಯ ಪ್ರತಿಗಾಮಿ ಪಕ್ಷಗಳಿಂದ ಮಾತ್ರವಲ್ಲದೇ ಕಮ್ಯುನಿಸ್ಟ್ ಪಕ್ಷದ ಡಾಂಗೆಯಂಥವರಿಂದ ಕೂಡ ಬೆಂಬಲ ಸಿಗುತ್ತಿದೆ ಎಂದು ಮನಗಂಡಾಗ ಸರ್ಕಾರಕ್ಕೆ ಸಂತೋಷಾತಿರೇಕವಾಯಿತು. ಕಾಂಗ್ರೆಸ್ ಸರ್ಕಾರದ ದಮನಕಾರಿ ನೀತಿಯ ವಿರುದ್ಧ ಸೌಹಾರ್ದ ಕಮ್ಯುನಿಸ್ಟ್ ಹಾಗೂ ಕಾರ್ಮಿಕರ ಪಕ್ಷಗಳಿಂದ ಪ್ರತಿರೋಧ ಬಂತು, ಆದರೆ ಡಾಂಗೆ ಗುಂಪಿನಂದ ಏನೂ ಬರಲಿಲ್ಲ.

ಡಾಂಗೆ ನೇತೃತ್ವದ ಪರಿಷ್ಕರಣವಾದಿ ಗುಂಪು ಈ ಸಮಯವನ್ನು ವಿವಿಧ ರಾಜ್ಯಗಳಲ್ಲಿನ ಪಕ್ಷವನ್ನು ವಶಪಡಿಸಿಕೊಳ್ಳಲು ಬಳಸಿಕೊಂಡಿತು. ಪಶ್ಚಿಮ ಬಂಗಾಳದ ರಾಜ್ಯ ಮಂಡಳಿಯನ್ನು ವಿಸರ್ಜಿಸಿತು ಮತ್ತು ಒಂದು ಪ್ರಾಂತೀಯ ಸಂಘಟನಾ ಸಮಿತಿಯನ್ನು ರಚಿಸಿತು. ಪಂಜಾಬಿನಲ್ಲಿ, ಒಂದು ವಿಶೇಷ ಸಮ್ಮೇಳನವನ್ನು ಅಯೋಜಿಸಿ ಒಂದು ಹೊಸ ಸಮಿತಿಯನ್ನು ಆಯ್ಕೆ ಮಾಡಿತು. ಈ ರೀತಿಯಲ್ಲಿ ಪಕ್ಷದ ನಾಯಕತ್ವದ ಪ್ರಮುಖ ಸ್ಥಾನಗಳಲ್ಲಿದ್ದ ವರ್ಗ ಹೊಂದಾಣಿಕೆ ನಲುವಿನ ವಿರುದ್ಧ ಹೋರಾಡುತಿದ್ದ ಪ್ರಮುಖ ಸಂಗಾತಿಗಳನ್ನು ಹೊರ ಹಾಕಲು ಬಯಸಿದರು.

ಗಡಿ ತಿಕ್ಕಾಟಗಳು ಕೊನೆಯಾದ ನಂತರವೂ, ಪರಿಷ್ಕರಣವಾದಿ ನೇತೃತ್ವದ ಕಮ್ಯುನಿಸ್ಟ್ ಪಕ್ಷವು ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಲಿಲ್ಲ. ಅದ'ರ' ಬದ'ಲಿಗ', ತುರ್ತು ಪರಿಸ್ಥಿತಿಯನ್ನು ಮುಂದುವರಿಸಲು ಡಾಂಗೆ ಕೇಳಿಕೊಂಡರು. 'ಪ್ರಶ್ನೆಯನ್ನು ಮರುಪರಿಶೀಲಿಸಿ ಮತ್ತು ತುರ್ತು ಪರಿಸ್ಥಿತಿಯನ್ನು ಮುಂದುವರಿಸುವ ಅಗತ್ಯತೆ ಬಗ್ಗೆ ವಿರೋಧ ಪಕ್ಷಗಳ ಜತೆ ಸಮಾಲೋಚನೆ ಮಾಡಿ' ಎಂದು ಕೇಳಿಕೊಳ್ಳಲು ಮಾತ್ರ ಅವರು ಸಿದ್ಧರಿದ್ದರು.

ಆದ್ದರಿಂದ, 1962-63ರ ಅವಧಿಯನ್ನು ಪಕ್ಷದ ಮೇಲಿನ, ನಿರ್ದಿಷ್ಟವಾಗಿ ವರ್ಗ ಹೋರಾಟದ ಧೋರಣೆ ಹೊಂದಿದವರ ಮೇಲಿನ ಹಲ್ಲೆಯ ಅವಧಿ ಎಂದು ಗುರುತಿಸಲಾಗುತ್ತದೆ. 1954ರಿಂದಲೂ ಇದ್ದ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳು ಇನ್ನೂ ಹೆಚ್ಚಾದವು, ಹಿಂದೆ ತಿರುಗಿ ಹೋಗಲಾರದಂತಹ ಹಂತ ತಲುಪಿತು. ಈ ಭಿನ್ನಾಭಿಪ್ರಾಯಗಳು ಪಕ್ಷದ ಉನ್ನತ ಸ್ಥಾನದಲ್ಲಿನ ಮುಖಂಡರ ನಡುವೆ ಮಾತ್ರ ಇದ್ದದ್ದು, ಈಗ ಪಕ್ಷದ ಕೆಳಗಿನ ಮಟ್ಟದವರೆಗೂ ಪಸರಿಸಿತು.

ಮಹಾರಾಷ್ಟ್ರ ರಾಜ್ಯಪಾಲರನ್ನು ವಜಾ ಮಾಡಿ- ಸಿಪಿಐ(ಎಂ)

ಪುಟ 2 ರಿಂದ

ಮಹಾರಾಷ್ಟ್ರ ಸರಕಾರ ಕೊವಿಡ್ ಸೋಂಕನ್ನು ತಡೆ ಹಿಡಿಯುವವನಲ್ಲಿ ಶ್ರಮಿಸುತ್ತಿದೆ. ಇಂತಹ ಸಮಯದಲ್ಲಿ ರಾಜ್ಯಪಾಲರ ಅನಗತ್ಯ ಸಲಹೆ ಸೂಕ್ಷ್ಮ ಪರಿಸ್ಥಿತಿಯನ್ನು ಕದಡಿಸುತ್ತದೆ.

ಅಲ್ಲದೆ ಈ ರಾಜ್ಯಪಾಲರು ಸಂವಿಧಾನದ ಜಾತ್ಯತೀತ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹೀಗಳೆದು ತಮ್ಮ ಸಂವಿಧಾನಿಕ ಹುದ್ದೆಗೆ ಕುಂದು ತಂದಿದ್ದಾರೆ. ಅವರ ಕಿಡಿಗೇಡಿತನದ ಸಲಹೆ ಮತ್ತು ಸಂಸ್ಕೃತಿಹೀನ ಭಾಷೆ ಅವರ ಹುದ್ದೆಯ ಗೌರವವನ್ನು ಇಳಿಸಿದೆ. ಅವರು ರಾಜಕೀಯದಲ್ಲಿ ತೊಡಗಿರುವಂತೆ ಕಾಣುತ್ತದೆ. ಸಂಕೇತವೋ ಎಂಬಂತೆ ಬಿಜೆಪಿ ಇದೇ ಬೇಡಿಕೆಯ ಮೇಲೆ ಬೀದಿಗಿಳಿದಿದೆ, ಮಾರಣಾಂತಿಕ ಸೋಂಕನ್ನು ಎದುರಿಸಲು ವಹಿಸಬೇಕಾದ ಎಚ್ಚರಿಕೆಗಳನ್ನೆಲ್ಲ ಗಾಳಿಗೆ ತೂರಲಾಗುತ್ತಿದೆ. ರಾಜ್ಯಪಾಲರು ಮಹಾರಾಷ್ಟ್ರದ ಸಾರ್ವಜನಿಕ ಆರೋಗ್ಯಕ್ಕೆ ಒಂದು ಪಿಡುಗು ಆಗಿಬಿಟ್ಟಿದ್ದಾರೆ ಎಂದೇ ಹೇಳಬೇಕಾಗುತ್ತದೆ ಎಂದು ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ನರಸಯ್ಯ ಆದಂ ತಮ್ಮ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಆದ್ದರಿಂದ ಇವರನ್ನು ರಾಜ್ಯಪಾಲರ ಸಂವಿಧಾನಿಕ ಜವಾಬ್ದಾರಿಯಿಂದ ತಕ್ಷಣವೇ ಬಿಡುಗಡೆ ಮಾಡಬೇಕು. ಏಕೆಂದರೆ ಅವರು ಅದನ್ನು ಮರ್ಯಾದೆಯಿಂದ ನಿಭಾಯಿಸಲು ಅಸಮರ್ಥರ್ರಾಗಿದ್ದಾರೆ, ಮುಂದೆಯೂ ಈ ಹುದ್ದೆಯ ಗೌರವವನ್ನು ಕಳೆಯುತ್ತಾರೆ ಎಂದು ರಾಷ್ಟ್ರಪತಿಗಳಿಗೆ ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಮನವಿ ಮಾಡಿದೆ. ದುರದೃಷ್ಟವಶಾತ್ ಈ ರಾಜ್ಯಪಾಲರು ತಮ್ಮ ಕುಚೇಷ್ಟೆಗಳಿಂದಾಗಿ ಈ ಮಹಾನ್ ದೇಶದ ರಾಷ್ಟ್ರಪತಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆ. ಆದ್ದರಿಂದ ಈತನನ್ನು ವಜಾ ಮಾಡಿ ರಾಜ್ಯದಿಂದ ಹೊರ ಕಳಿಸುವುದು ಅತ್ಯಗತ್ಯವಾಗುತ್ತದೆ ಎಂದು ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿ ನರಸಯ್ಯ ಆದಂ ಆಗ್ರಹಿಸಿದ್ದಾರೆ.

ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಅವರು ಕ್ವಾಡ್ ಸಭೆಯ ತಮ್ಮ ಉದ್ಘಾಟನೆ ಮಾಡುತ್ತಾ "ಈ ಕ್ವಾಡ್ ನಲ್ಲಿ ಪಾಲುದಾರರಾಗಿ, ನಮ್ಮ ಜನರನ್ನು ಮತ್ತು ಪಾಲುದಾರರನ್ನು ಚೀನೀ ಕಮ್ಯುನಿಸ್ಟ್ ಪಕ್ಷ (ಸಿ.ಸಿ.ಪಿ) ದ ಶೋಷಣೆ, ಭ್ರಷ್ಟಾಚಾರ ಮತ್ತು ಬಲಾತ್ಕಾರ ದಿಂದ ರಕ್ಷಿಸಲು ನಾವೆಲ್ಲರೂ ಸಹಕರಿಸುವುದು ಹಿಂದೆಂದಿಗಿಂತಲೂ ಹೆಚ್ಚು ನಿರ್ಣಾಯಕವಾಗಿದೆ." ಎಂದು ಹೇಳಿಕೆ ನೀಡಿದರು.

ವಿದೇಶಾಂಗ ಸಚಿವ ಜೈಶಂಕರ್ ಅವರು ಬಹಿರಂಗವಾಗಿ ಇದನ್ನು ಅಂಗೀಕರಿಸಲಿಲ್ಲ. ಆದರೆ, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರು ಸೆಪ್ಟೆಂಬರ್ 3 ರಂದು ನೀಡಿದ ಹೇಳಿಕೆಯಲ್ಲಿ, ಕ್ವಾಡ್ ಎಂಬುದು, "ಸಂಚಾರ ಕಾರ್ಯಾಚರಣೆಯ ಸ್ವಾತಂತ್ರ್ಯವನ್ನು ಖಚಿತಪಡಿಸಿಕೊಳ್ಳಲು ಉತ್ತಮ ಕಾರ್ಯವಿಧಾನ" ಎಂದು ಭಾರತ ನಂಬುತ್ತದೆ. ಹಿಂದೂ ಮಹಾಸಾಗರ ಮತ್ತು ಸುತ್ತಮುತ್ತಲಿನ ಸಾಗರಗಳಲ್ಲಿ, "ನೌಕಾ ಪಡೆಗಳ ಜಂಟಿ ಕಾರ್ಯಾಚರಣೆಯ ಅಗತ್ಯವಿದೆ. ಪ್ರಸ್ತುತ ನಡೆಸುತ್ತಿರುವ ಜಂಟೀ ಕಸರತ್ತು ಮಾತ್ರವಲ್ಲ" ಎಂದಿದ್ದಾರೆ.

ಹಂತ ಹಂತವಾಗಿ ಯುಎಸ್ ಜೊತೆ ಮೊದಲು ರಕ್ಷಣಾ ಚೌಕಟ್ಟಿನ ಒಪ್ಪಂದಕ್ಕೆ 2005 ರಲ್ಲಿ ಸಹಿ ಹಾಕಿದ್ದಾಗಿನಿಂದ, ನಮ್ಮ ಸಶಸ್ತ್ರ ಪಡೆಗಳ ಉನ್ನತ ದರ್ಜೆಯ ಪ್ರಮುಖ ವಿಭಾಗಗಳು, ಯುಎಸ್ ನ ಜೊತೆಗಿನ ಮಿಲಿಟರಿ ಸಹಯೋಗ ಮತ್ತು ಮಿಲಿಟರಿ ಮೈತ್ರಿಗೆ ಸಂಪೂರ್ಣವಾಗಿ ಬದ್ಧವಾಗಿರುವುದು ಸ್ಪಷ್ಟವಾಗಿದೆ.

ಒಬಾಮಾ ಆಡಳಿತದಲ್ಲಿ, "ಏಷ್ಯಾಕ್ಕೆ ಪಿವೋಟ್" ಇದ್ದಂತೆ ಕ್ವಾಡ್ ನ ಉದ್ದೇಶ ಸಹ, ಚೀನಾವನ್ನು ನಿಯಂತ್ರಿಸುವಯು.ಎಸ್ ನ ವ್ಯೂಹಾತ್ಮಕ ಯೋಜನೆಯನ್ನು ಪೂರೈಸಲು ಮಾತ್ರ ಎಂಬುದು ಸ್ಪಷ್ಟ. ಈ ವ್ಯೂಹಾತ್ಮಕ ವಿನ್ಯಾಸದೊಂದಿಗೆ ಗುರುತಿಸಿಕೊಳ್ಳುವುದರಿಂದ ಭಾರತಕ್ಕೆ ಯಾವುದೇ ವ್ಯೂಹಾತ್ಮಕ ಉದ್ದೇಶವನ್ನು ಪೂರೈಸಲಾಗುವುದಿಲ್ಲ. ಧಕ್ಷಿಣ ಚೀನಾ ಸಮುದ್ರವು ಭಾರತದ ಪ್ರಮುಖ ಹಿತಾಸಕ್ತಿಗಳಿಗೆ ಯಾವುದೇ ಪರಿಣಾಮ ಬೀರುವುದಿಲ್ಲ. ದಕ್ಷಿಣ ಚೀನಾ ಸಮುದ್ರದಲ್ಲಿ ಯುಎಸ್ ಮತ್ತು ಜಪಾನೀಸ್ ನೌಕಾಪಡೆಗಳೊಂದಿಗೆ ಭಾರತೀಯ ನೌಕಾಪಡೆ ಜಂಟಿ ವ್ಯಾಯಾಮವನ್ನು ಏಕೆ ನಡೆಸಬೇಕು? ಚೀನಾದೊಂದಿಗಿನ ಭಾರತದ ಪ್ರಾದೇಶಿಕ ಸಂಘರ್ಷದಲ್ಲಿ ಕ್ವಾಡ್ ಪಾಲುದಾರರಲ್ಲಿ ಯಾರೂ ಭಾರತಕ್ಕೆ ಮಿಲಿಟರಿ ಬೆಂಬಲಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಿಲ್ಲ ಎಂಬುದು ಭಾರತಕ್ಕೆ ಗೊತ್ತಾಗಬೇಕು.

ದಕ್ಷಿಣ ಚೀನಾ ಸಮುದ್ರದಲ್ಲಿನ ವಿವಾದದ ಬಗ್ಗೆ ನೇರ ಕಾಳಜಿ ಇರುವ ದೇಶಗಳುಆ ಕರಾವಳಿಯದೇಶಗಳು ಮತ್ತು ಆ ಪ್ರದೇಶದ ಮುಖ್ಯ ಪ್ರಾದೇಶಿಕ ರಚನೆ – ಆಸಿಯಾನ್ – ಯುಎಸ್ ಪ್ರಾಯೋಜಿತ ಕಾಡ್ ಗೆ ಸೇರಲು ಸಿದ್ಧರಿಲ್ಲ. ತಮ್ಮ ದೇಶದ ಪ್ರಮುಖ ಹಿತಾಸಕ್ತಿಗಳನ್ನು ಪೂರೈಸದ ಯಾವುದೇ ಚೀನಾ ವಿರೋಧಿ ಗುಂಪಿನ ಭಾಗವಾಗಲು ಅವರು ಬಯಸುವುದಿಲ್ಲ. ದಕ್ಷಿಣ ಚೀನಾ ಸಮುದ್ರ ವಿವಾದದಲ್ಲಿ ಸಿಲುಕಿರುವ ಈ ಪ್ರದೇಶದ ಪ್ರಮುಖ ದೇಶಗಳಲ್ಲಿ ಒಂದಾದ ಇಂಡೋನೇಷ್ಯಾ, ಸಹ ಅಮೆರಿಕದ ಹಾದಿಯಿಂದ ದೂರವಿದೆ. ಎಂಬುದನ್ನು ಭಾರತ ಗಮನಿಸಬೇಕು.

ಮೋದಿ ಸರ್ಕಾರವು ಚೀನಾ ವಿರುದ್ಧ ಯುದ್ಧದ ಹಾದಿಯಲ್ಲಿದ್ದ ಸಮಯದಲ್ಲಿ, ಯು.ಎಸ್ ಜೊತೆ ನಿಕಟ ಸಂಬಂಧ ಹೊಂದುವ ಪ್ರಯತ್ನ, ಲಡಾಖ್ ನಲ್ಲಿನ ವಾಸ್ತವಿಕ ನಿಯಂತ್ರಣ ರೇಖೆಯ ಸುತ್ತಲಿನ ಹದಗೆಡುತ್ತಿರುವ ಪರಿಸ್ಥಿತಿಯ ಮೇಲೆ ಪರಿಣಾಮ ಬೀರಿದೆ. ಜಮ್ಮು ಮತ್ತು ಕಾಶ್ಮೀರದ ಸ್ಥಿತಿಯನ್ನು ಬದಲಾಯಿಸುವ ಭಾರತದ ಕ್ರಮಗಳು ಮತ್ತು ಯುಎಸ್– ಭಾರತ ಸಂಬಂಧಗಳು ಚೀನಾ ವಿರುದ್ಧ ಘನಿಷ್ಠವಾಗುತ್ತಿರುವುದು; ಗಡಿ ವಿಷಯದ ಬಗ್ಗೆ ಚೀನಾದ ನಿಲುವುಗಳ ಮೇಲೆ ಪರಿಣಾಮ ಬೀರಿವೆ ಎಂದು ಕಳೆದ ಆರು ತಿಂಗಳುಗಳ ವಿದ್ಯಮಾನಗಳಿಂದ ಸ್ಪಷ್ಟವಾಗಿದೆ.

ಚೀನಾ–ವಿರೋಧಿ ಗುಂಪಿನಲ್ಲಿ ಗುರುತಿಸಿಕೊಳ್ಳದೆ, ಯು.ಎಸ್ ಮತ್ತು ಅದರ ಮಿತ್ರರಾಷ್ಟ್ರಗಳೊಂದಿಗೆ ಯಾವುದೇ ಚೀನಾ–ವಿರೋಧಿ ಗುಂಪು ಕಟ್ಟಿಕೊಳ್ಳದೆ, ಗಡಿಯಲ್ಲಿ ತನ್ನ ಪ್ರಸ್ತುತ ವಿವಾದಗಳನ್ನು ಬಗೆಹರಿಸಲು ಚೀನಾದೊಂದಿಗೆ ನೇರವಾಗಿ ಮಾತುಕತೆ ನಡೆಸುವಲ್ಲಿ ಭಾರತದ ರಾಷ್ಟ್ರೀಯ ಹಿತಾಸಕ್ತಿ ಅಡಗಿದೆ. ಈ ಸಮಸ್ಯೆಯನ್ನು ನಿಭಾಯಿಸುವ ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳನ್ನು ಭಾರತ ಹೊಂದಿದೆ. ಇದಕ್ಕಾಗಿ ಭಾರತ ಯು.ಎಸ್ ನ ಅಡಿಯಾಳು ಆಗುವ ಅಗತ್ಯವಿಲ್ಲ. ಆ ನಿಟ್ಟಿನಲ್ಲಿ ಭಾರತ ಮುಂದುವರಿಯಬೇಕಾಗಿದೆ.

ಭಾರತವನ್ನು ಅಮೆರಿಕದ ಕಡೆಗೆ ತಳ್ಳುವುದು ಅದರ ಹಿತಾಸಕ್ತಿಗಳಿಗೆ ಎಷ್ಟರ ಮಟ್ಟಿಗೆ ಪೂರೈಸುತ್ತದೆ ಎಂಬುದನ್ನು ಚೀನಾ ಪರಿಗಣಿಸಬೇಕಾಗಿದೆ. ಉಭಯ ದೇಶಗಳ ನಡುವಿನ ತಾತ್ಕಾಲಿಕ ಗಡಿಯಾಗಿ ಕಾರ್ಯನಿರ್ವಹಿಸುವ ಸಂದಿಗ್ಧ ರೇಖೆಯಾದ ಎಲ್.ಎ.ಸಿ ಯಲ್ಲಿ ಉದ್ವಿಗ್ನತೆ ಹೆಚ್ಚಾಗುತ್ತಿದೆ,. ಇದು ಏಷ್ಯಾದ ಎರಡು ಮಹಾನ್ ನೆರೆಯ ರಾಷ್ಟ್ರಗಳ ಹಿತಾಸಕ್ತಿಗಳನ್ನು ಪೂರೈಸುವುದಿಲ್ಲ,

21 ನೇ, ಶತಮಾನದಲ್ಲಿ, ಮನುಕುಲದ ಮತ್ತು ಒಟ್ಟಾರೆಯಾಗಿ ಜಗತ್ತಿನ ಒಳಿತಿಗಾಗಿ ಮತ್ತು ಯೋಗಕ್ಷೇಮ ಕ್ಕಾಗಿ ಈ ಎರಡು ರಾಷ್ಟ್ರಗಳು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಈ ಎರಡು ದೇಶಗಳು ಜಾಗತಿಕವಾಗಿ, ಒಟ್ಟು ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿವೆ ಎಂಬುದನ್ನು ಅರಿಯಬೇಕಾಗಿದೆ. ■

ಬಡತನ ಮಾತ್ರ ಬೆಳೆಯುತ್ತಲೇ ......

ಪುಟ 13 ರಿಂದ

ಹೇರುವುದರಿಂದಾಗಿ ಬಡತನವು ಮತ್ತಷ್ಟು ಉಲ್ಬಣವಾಗುತ್ತದೆ.

ಈ ವಿದ್ಯಮಾನವು ನಮ್ಮನ್ನು ಎರಡನೆಯ ಪ್ರಶ್ನೆಯತ್ತ ಕೊಂಡೊಯ್ಯುತ್ತದೆ. ಅಭಿವೃದ್ಧಿಯು ಪುನರಾರಂಭವಾದರೆ ಬಡತನ ಇಳಿಯುತ್ತದೆಯೇ? ಹೌದು ಎಂದು ಹೇಳುವ ಮನಸ್ಸಾಗುತ್ತದೆ. ಬೆಳವಣಿಗೆಯ ಹಂತದಲ್ಲಿ ಕಾರ್ಯಪ್ರವೃತ್ತವಾಗಿದ್ದ ಅಂಶಗಳ ಮೇಲೆ ಹೇರಿದ ಬಡತನವನ್ನು ಉಲ್ಬಣಗೊಳಿಸುವ ಅಂಶಗಳನ್ನು ತೊಡೆದುಹಾಕಿದಾಗ ಮಾತ್ರ ಅದು ಸಾಧ್ಯವಾಗುತ್ತದೆ. ಉದಾಹರಣೆಯಾಗಿ ನಿರುದ್ಯೋಗವನ್ನು ಆರ್ಥಿಕ ಹಿಂಜರಿತ–ಪೂರ್ವದ ಮಟ್ಟಕ್ಕೆ ಇಳಿಸುವ ಮೂಲಕ, ಅಭಿವೃದ್ಧಿಯ ಜೊತೆಗೆ ಬಡತನದ ಇಳಿಕೆಯೂ ಆರಂಭವಾಗುತ್ತದೆ.

ಈ ಅಭಿಪ್ರಾಯವೂ ತಪ್ಪು. ನವ ಉದಾರವಾದಿ ಬಂಡವಾಳಶಾಹಿಯು ಇಂದು ಎದುರಿಸುತ್ತಿರುವ ಬಿಕ್ಕಟ್ಟು ಕೇವಲ ಒಂದು ಆವರ್ತಕ ಬಿಕ್ಕಟ್ಟು ಮಾತ್ರವಲ್ಲ; ಬಂಡವಾಳಶಾಹಿಯು ದಾರಿ ಕಾಣದಂತಾಗಿರುವ ಪರಿಸ್ಥಿತಿ ತಲುಪಿರುವ ಸಂರಚನಾತ್ಮಕ ಬಿಕ್ಕಟ್ಟು. ಕೊರೊನಾ ಸಾಂಕ್ರಾಮಿಕವು ಹರಡುವ ಮೊದಲೇ ಕಾಡುತ್ತಿದ್ದ ಬಡತನವು ಆರ್ಥಿಕ ಹಿಂಜರಿತದಿಂದಾಗಿ ಉಲ್ಬಣಗೊಂಡಿರುವುದರಿಂದ ಅದು ತನ್ನಷ್ಟಕ್ಕೆ ತಾನೇ ಪುನಶ್ಚೇತನಗೊಳ್ಳುವುದಿಲ್ಲ. ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ತಂಬಿದಾಗ ಮಾತ್ರ ಪುನಶ್ಚೇತನ ಸಾಧ್ಯವಾಗುತ್ತದೆ. ಆದರೆ, ಹಿಂದೆ ಕಂಡಿದ್ದ ರೀತಿಯ ಬೆಳವಣಿಗೆ ಹಾಗೆಯೇ ಸಾಧ್ಯವಾಗದು.

ಬಡತನದ ತೀವ್ರತೆಗೆ ಕಾರಣವಾದ ಈ ಆರ್ಥಿಕ ಹಿಂಜರಿತದ ವ್ಯಾಪ್ತಿಯನ್ನು ಎರಡು ತುಣುಕು ಮಾಹಿತಿಗಳು ಸಂಕ್ಷಿಪ್ತವಾಗಿ ವಿವರಿಸುತ್ತವೆ. ಮೊದಲನೆಯದು, ಎನ್‌ಎಸ್‌ಎಸ್ ಸಂಸ್ಥೆಯ ಸಮೀಕ್ಷೆಗೆ ಸಂಬಂಧಿಸುತ್ತದೆ. ಗ್ರಾಮೀಣ ಮತ್ತು ನಗರ ಬಡತನಗಳಿಗೆ ಸಂಬಂಧಿಸಿದ 2011–12ರ ಅಂಕಿ ಅಂಶಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. 2011–12ರ ಸಮೀಕ್ಷೆಯ ನಂತರ, ಎನ್‌ಎಸ್‌ಎಸ್ ಸಂಸ್ಥೆಯು ಮತ್ತೊಂದು ಸುತ್ತಿನ ಸಮೀಕ್ಷೆಯನ್ನು 2017–18ರಲ್ಲಿ ನಡೆಸಿತ್ತು. ಈ 2017–18ರ ಸಮೀಕ್ಷೆಯ ವರದಿಯ ಪ್ರಕಾರ, 2011–12 ಮತ್ತು 2017–18ರ ನಡುವೆ ಗ್ರಾಮೀಣ ಪ್ರದೇಶಗಳಲ್ಲಿ ತಲಾ ಬಳಕೆ ವೆಚ್ಚವು ಶೇ.9ರಷ್ಟು ಇಳಿಕೆಯಾಗಿರುವುದು ಕಂಡುಬಂದಿತ್ತು. ಗ್ರಾಮೀಣ ಶ್ರೀಮಂತರ ತಲಾ ಬಳಕೆಯ ವೆಚ್ಚವು ಕಡಿಮೆಯಾಗುವ ಸಂಭವವಿಲ್ಲದೆ ಹೆಚ್ಚಾಗಿರುವ ಸಾಧ್ಯತೆಯ ಕಾರಣದಿಂದ ಗ್ರಾಮೀಣ ಜನಸಂಖ್ಯೆಯ ಅತಿ ದೊಡ್ಡ ವಿಭಾಗದ ಬಳಕೆಯ ವೆಚ್ಚವು ವರದಿಯು ತಿಳಿಸಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇಳಿದಿರಲೇಬೇಕು. ಇದು ಎಷ್ಟು ಅಸಾಧಾರಣವಾದ ಒಂದು ಸಂಗತಿ ಎಂದರೆ, ಈ ಮಾಹಿತಿಯು ಸಾರ್ವಜನಿಕರ ಅರಿವಿಗೆ ಬಾರದಂತೆ ನೋಡಿಕೊಳ್ಳಲು ಮತ್ತು ಅದರ ಸಂಬಂಧವಾಗಿ ಸಾರ್ವಜನಿಕರು ಇರುಸು ಮುರುಸಿನ ಪ್ರಶ್ನೆಗಳನ್ನು ಎತ್ತದಂತೆ ಮಾಡುವ ಸಲುವಾಗಿ ಸಮೀಕ್ಷೆಯ ವರದಿಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿತು!

ಎರಡನೆಯ ಮಾಹಿತಿಯು ದೀರ್ಘಕಾಲೀನ ನಿರುದ್ಯೋಗಕ್ಕೆ ಸಂಬಂಧಿಸುತ್ತದೆ. ಸಾಂಕ್ರಾಮಿಕವು ಹರಡುವ ಮೊದಲೇ ನಿರುದ್ಯೋಗದ ಪ್ರಮಾಣವು ಶೇ.6ರ ಮಟ್ಟ ತಲುಪಿತ್ತು. ಭಾರತದಲ್ಲಿ ನಿರುದ್ಯೋಗವು ಅಸಹಜ/ಅಕ್ರಮ ಉದ್ಯೋಗಗಳ ರೂಪವನ್ನು ಪಡೆಯುವುದರಿಂದ, ಒಂದು ನಿರ್ದಿಷ್ಟ ಸಂಖ್ಯೆಯ ಉದ್ಯೋಗಗಳನ್ನು ಬಹುಪಾಲು ಜನರು ಹಂಚಿಕೊಳ್ಳುತ್ತಾರೆ. ದೀರ್ಘಕಾಲೀನ ನಿರುದ್ಯೋಗವು ಸಾಮಾನ್ಯವಾಗಿ ಶೇ.2 ರಿಂದ ಶೇ. 2.5ರಷ್ಟು ಕೆಳ ಮಟ್ಟದಲ್ಲೇ ಇರುತ್ತದೆ. ಹಾಗಾಗಿ, ನಿರುದ್ಯೋಗವು ಶೇ. 6ರ ಮಟ್ಟಕ್ಕೆ ಜಿಗಿದಿರುವುದು ಬಹಳ ಮಹತ್ವಪೂರ್ಣವಾಗಿದೆ ಮತ್ತು ಈ ಮಟ್ಟದ ನಿರುದ್ಯೋಗವು, ಆರ್ಥಿಕ ಹಿಂಜರಿತದ ಕಾರಣದಿಂದ ಬಡತನವು ಉಲ್ಬಣಗೊಂಡಿರುವ ಅಂಶವನ್ನು ಒತ್ತಿ ಹೇಳುತ್ತದೆ. ●

JANASHAKTHI KANNADA VARA PATRIKE October 19-25, 2020 Price: Rs. 10/- Date of Publication: 16 October 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಉತ್ತರಪ್ರದೇಶದ ಹತ್ರಾಸ್ ಪ್ರಕರಣವನ್ನು ಸುಪ್ರೀಮ್ ಕೋರ್ಟಿನ ಮೇಲ್ ವಿಚಾರಣೆಯಲ್ಲಿ ನಿಗಧಿತ ಅವಧಿಯಲ್ಲಿ ತನಿಖೆ ಮಾಡಲು ಒತ್ತಾಯ

ಉತ್ತರ ಪ್ರದೇಶದ ಹತ್ರಾಸ್ ಪ್ರಕರಣವನ್ನು ಸುಪ್ರೀಮ್ ಕೋರ್ಟಿನ ಮೇಲ್ವಿಚಾರಣೆಯಲ್ಲಿ ನಿಗಧಿತ ಅವಧಿಯಲ್ಲಿ ತನಿಖೆ ಮಾಡಲು ಮತ್ತು ದಲಿತರು, ಮಹಿಳೆಯರು ಮತ್ತು ಸಾಮಾಜಿಕವಾಗಿ ಹಿಂದುಳಿದವರ ಮೇಲಿನ ದೌರ್ಜನ್ಯಗಳ ತಡೆಯಲು ಕೆಪಿ.ಆರ್.ಎಸ್., ಜೆಎಂಎಸ್, ಸಿಐಟಿಯು, ಎಐಎಡಬ್ಲೂಯು, ಡಿವೈಎಫ್ಐ ಸಂಘಟನೆಗಳು ಒತ್ತಾಯಿಸಿವೆ.

ಉತ್ತರಪ್ರದೇಶದ ಹತ್ರಾಸ್ ನ ಮೇಲ್ಜಾತಿ ಭೂಮಾಲಕರು 19 ವರ್ಷದ ದಲಿತ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಅವಳನ್ನು ಬರ್ಬರವಾಗಿ ಕೊಲೆ ಮಾಡಿದ್ದು, ಅತ್ಯಂತ ಅಮಾನುಷ ಕೃತ್ಯವಾಗಿದ್ದು ಇಡೀ ದೇಶವನ್ನೇ ಅದು ಬೆಚ್ಚಿಬೀಳುವಂತೆ ಮಾಡಿದೆ. ಈ ಕ್ರೂರ ಕೃತ್ಯದ ವಿರುದ್ಧ ಇಡೀ ದೇಶದಲ್ಲಿ ಜನ ಬೀದಿಗಿಳಿದಿದ್ದಾರೆ. ಆದರೆ ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ಮಾತ್ರ ಕನಿಷ್ಠ ಮಾನ ಮರ್ಯಾದೆ ಇಲ್ಲದೆ ಅಪರಾಧಿಗಳಿಗೆ ರಕ್ಷಣೆ ನೀಡುವುದರಲ್ಲಿ ಸಾಕ್ಷಿ ಪುರಾವೆಗಳನ್ನು ನಾಶ ಮಾಡುವುದರಲ್ಲಿ ಮತ್ತು ನೊಂದ ಕುಟುಂಬವನ್ನು ಬೆದರಿಸುವ ಮೇಲಾತಿ ಭೂಮಾಲಕ ಶಕ್ತಿಗಳಿಗೆ ಬಹಿರಂಗ ಬೆಂಬಲ ನೀಡುವುದರಲ್ಲಿ ಮಗ್ನವಾಗಿದೆ. ದೌರ್ಜನ್ಯಕ್ಕೆ ಒಳಗಾಗಿ ಮೃತಪಟ್ಟ ಯುವತಿ ಬಡ ಕೃಷಿ ಕೂಲಿಕಾರ ದಲಿತ ಕುಟುಂಬಕ್ಕೆ ಸೇರಿದವಳಾಗಿದ್ದಾಳೆ. ಈ ಹಿನ್ನಲೆಯಲ್ಲಿ ಆ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಲು ಸಂಘಟನೆಗಳು ರಾಜ್ಯದಾದ್ಯಂತ ಜಿಲ್ಲಾಧಿಕಾರಿ ಕಛೇರಿ ಮತ್ತು ತಾಲ್ಲೂಕು ಕಛೇರಿ ಎದುರು ಪ್ರತಿಭಟನೆಯನ್ನು ನಡೆಸಿವೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ, ಬಳ್ಳಾರಿಯ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಕುರುಗೋಡು, ಹೊಸಪೇಟೆ, ರಾಯಚೂರು ಜಿಲ್ಲೆಯ ರಾಯಚೂರು ಜಿಲ್ಲೆಯ ಮಾನ್ವಿ, ರಾಯಚೂರು, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಮುಂಡಗೋಡ, ಹಾಸನ, ಮಂಡ್ಯ, ದಕ್ಷಿಣ ಕನ್ನಡ, ಉಡುಪಿ, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆದಿವೆ.


ಕಲಬುರಗಿ


ರಾಯಚೂರು


ಉತ್ತರ ಕನ್ನಡ



ಹಾಸನ


ಚಿಕ್ಕಬಳ್ಳಾಪುರ


ಮಂಡ್ಯ


ಬಳ್ಳಾರಿ


ಹೊಸಪೇಟೆ


ಶಿವಮೊಗ್ಗ

ಭಾರತದ ಕಮ್ಯುನಿಸ್ಟ್ ಚಳುವಳಿ @ 100 – ವಿಶೇಷಾಂಕ



ದಬ್ಬಾಳಿಕೆ, ದಮನ ಮತ್ತು ಶೋಷಣೆಗಳ ವಿರುದ್ಧದ ಕೆಚ್ಚಿನ ಪ್ರತಿರೋಧದ ಪರಂಪರೆಯ ಭಾರತದ ಕಮ್ಯುನಿಸ್ಟ್ ಚಳುವಳಿಯು 17 ಅಕ್ಟೋಬರ್ 2020ರಂದು ನೂರು ವರ್ಷಗಳನ್ನು ಪೂರೈಸಲಿದೆ. 1917ರಲ್ಲಿ ರಷ್ಯಾದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯಿಂದ ಪ್ರೇರಿತಗೊಂಡು ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯನ್ನು ಕಿತ್ತೊಸೆಯಲು ಬಯಸಿದ್ದ ಕ್ರಾಂತಿಕಾರಿಗಳ ಒಂದು ಗುಂಪು ತಾಷ್ಕೆಂಟಗೆ ಪ್ರಯಾಣ ಬೆಳೆಸಿತು. ಅಲ್ಲಿ 17ನೇ ಅಕ್ಟೋಬರ್ 1920ರಂದು ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಲಾಯಿತು.

ಭಾರತದ ಕಮ್ಯುನಿಸ್ಟ್ ಚಳುವಳಿಯ ಶತಮಾನೋತ್ಸವದ ಅಂಗವಾಗಿ ಈ ಸಂಚಿಕೆಯಲ್ಲಿ ಎರಡು ಲೇಖನಗಳು ಪ್ರಕಟವಾಗುತ್ತಿವೆ. 100 ವರ್ಷಗಳ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದ ಸ್ಥೂಲ ಚಿತ್ರಣ ನೀಡುವ ವಿಜಯ ಪ್ರಶಾದ್ ಅವರ ಲೇಖನ ಹಾಗೂ ಪ್ರಕಾಶ್ ಕಾರಟ್ ಅವರ "ಕಮ್ಯುನಿಸ್ಟರು ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಟ"

ಮುಂದಿನ ಜನಶಕ್ತಿ ಸಂಚಿಕೆ "ಭಾರತದ ಕಮ್ಯುನಿಸ್ಟ್ ಚಳುವಳಿ – 100" ವಿಶೇಷಾಂಕವಾಗಿ ಹೊರಬರಲಿದೆ. ಈ ಕೆಳಗಿನ ಲೇಖನಗಳು ವಿಶೇಷಾಂಕದಲ್ಲಿ ಇರುತ್ತವೆ

ಹೋರಾಟ ಮತ್ತು ತ್ಯಾಗಗಳ ಒಂದು ಶತಕ : ಪ್ರಕಾಶ್ ಕಾರಟ್

ಸೆಕ್ಯುಲರ್ ಪ್ರಜಾಪ್ರಭುತ್ವದ ದೃಢ ಸಂರಕ್ಷಕರು ಕಮ್ಯುನಿಸ್ಟರು : ಸೀತಾರಾಂ ಯೆಚುರಿ

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು : ನೀಲೋತ್ಪಲ ಬಸು

ಕಾರ್ಮಿಕ ವರ್ಗದ ಸಂಘಟನೆಯಲ್ಲಿ ಕಮ್ಯುನಿಸ್ಟರು : ಕೆ ಹೇಮಲತ

ಮಹಿಳಾ ವಿಮೋಚನೆಯ ಹೋರಾಟದಲ್ಲಿ ಕಮ್ಯುನಿಸ್ಟರು : ಬೃಂದಾ ಕಾರಟ್

ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಕಮ್ಯುನಿಸ್ಟರು : ಬಿ.ವಿ.ರಾಘವುಲು

ಭಾರತೀಯ ಕಮ್ಯುನಿಸಂನ 100 ವರ್ಷಗಳು : ಪ್ರಭಾತ್ ಪಟ್ನಾಯಕ್

ಭಾರತೀಯ ವಿಜ್ಞಾನದಲ್ಲಿ ಎಡಪಂಥೀಯರ ಅಲಿಖಿತ ಕಥನ : ಪ್ರಬೀರ್ ಪುರಕಾಯಸ್ಥ

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದ ಸ್ಥೂಲ ಚಿತ್ರ : ಕೆ.ಪ್ರಕಾಶ್

ನಿಮ್ಮ ಪ್ರತಿಗಳನ್ನು ಕಾಯ್ದಿರಿಸಿ...ಹೆಚ್ಚಿನ ಪತ್ರಿಗಳಿಗೆ ಸಂಪರ್ಕಿಸಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**